ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


12 ಆಗಸ್ಟ್ 2015 ಪುಟ 20 ರೂ. 15/-

ನೂರ್-ಸಿರಿಮನೆ

ಹೊಸ ಹೆಜ್ಜೆ



ಅನ್ಯಾಯ




ಆಪರೇಷನ್ ತ್ತುವಳಿ ರಾಕೆಟ್




ಮಂಡ್ಯ ರೈತರ ಆತ್ಮಹತ್ಯೆಯೂ ರಮ್ಯಾಳ ಣಿಯೂ





ಉತ್ತರಕನ್ನಡ

ದೇಶಪಾಂಡೆಯ ಕೈಗೊಂಬೆ ಆದ ಡಿಸಿ ಸಾಹೇಬ



ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂಬುದು ನಿಗೂಢವೇ
ಕೃಷಿ ಬಿಕ್ಕಟ್ಟಿನ ಪರಿಹಾರವೂ ಅಸಾಧ್ಯವೇ

ಕೆ.ಎ.ಶಂಕರೇಗೌಡರು ಮಂಡ್ಯದ ಇತಿಹಾಸದ ವಿಶಿಷ್ಟ ರಾಜಕಾರಣಿ. ಸ್ವಾತಂತ್ರ್ಯೋತ್ತರ ಕಾಲದ ಮಂಡ್ಯದ ರಾಜಕಾರಣ, ಸಾಂಸ್ಕೃತಿಕ ಕ್ಷೇತ್ರ ಹಾಗೂ ಸಹಕಾರ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅವರದ್ದು ವಿಶೇಷ ಪಾತ್ರವಿದೆ. ಸಂಸದರು, ಸಚಿವರೂ ಆಗಿದ್ದ ಕೆವಿಎಸ್ ರಂಗನಟರಾಗಿದ್ದರು. ಹಲವು ಕನ್ನಡ ಚಲನಚಿತ್ರಗಳನ್ನು ತಯಾರಿಸಿದರು. ಸ್ವಾತಂತ್ರ್ಯದ ನಂತರದ ಮೊದಲ ದಶಕದಲ್ಲೇ ರೈತರ ಸೊಸೈಟಿ ಎಂದು ಖ್ಯಾತವಾಗಿರುವ ಆರ್‌ಎಪಿಸಿಎಂಎಸ್ ಆರಂಭವಾಗುವುದರಲ್ಲಿ ಅವರ ಪಾತ್ರವೂ ಇತ್ತು. ಪಿಇಎಸ್ ಶಿಕ್ಷಣ ಸಂಸ್ಥೆಯ ಮೂಲಕ (ಈಗಿನ ವ್ಯಾಪಾರೀ ಶಿಕ್ಷಣ ಸಂಸ್ಥೆಗಳಂತಲ್ಲದೇ) ಕಡಿಮೆ ದರದಲ್ಲಿ ಶಿಕ್ಷಣ ಲಭ್ಯವಾಗುವಂತೆ ಮಾಡುವಲ್ಲೂ ದುಡಿದರು. ಇಂತಹ ಶಂಕರೇಗೌಡರು ಬದುಕಿದ್ದರೆ ಈ ವರ್ಷಕ್ಕೆ 100 ವರ್ಷವಾಗುತ್ತಿತ್ತು. ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮ ಈಚೆಗೆ ಮಂಡ್ಯದಲ್ಲಿ ನಡೆಯಿತು.

ಆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಷ್ ಭಾಗವಹಿಸಿದ್ದರು. ಕಾರ್ಯಕ್ರಮ ನಡೆಯುತ್ತಿರುವ ಸಂದರ್ಭದಲ್ಲಿ ಶಂಕರೇಗೌಡರ ಸ್ವಗ್ರಾಮ ಕೀಲಾರದ ಗ್ರಾಮಸ್ಥರು ಬೆಂಗಳೂರು – ಮೈಸೂರು ರಸ್ತೆಯಲ್ಲಿ ರಸ್ತೆ ತಡೆ ಮಾಡಿಕೊಂಡು ಧರಣಿ ಕುಳಿತಿದ್ದರು. ಅವರಿಗೆ ಶತಮಾನೋತ್ಸವ ಕಾರ್ಯಕ್ರಮದ ಬಗ್ಗೆ ತಕರಾರೇನಿರಲಿಲ್ಲ. ಆದರೆ, ಅದೇ ದಿನ ಕೀಲಾರದ ಯುವ ರೈತ ಲೋಕೇಶ್ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ್ದರು. ಅದು ಬಹುಶಃ ಆ ತಿಂಗಳಲ್ಲಿ ಜಿಲ್ಲೆಯಲ್ಲಿ ನಡೆದ 30ನೇ ಆತ್ಮಹತ್ಯೆಯಾಗಿತ್ತು. ಇದು ಕೀಲಾರದ ರೈತರನ್ನು ಕೆರಳಿಸಿತ್ತು. ಅವರು ಮುಖ್ಯಮಂತ್ರಿ ಮತ್ತು ಉಸ್ತುವಾರಿ ಸಚಿವ ಅಂಬರೀಷ್ ಸ್ಥಳಕ್ಕೆ ಬಂದು ಸಾಂತ್ವನದ ಮಾತುಗಳನ್ನು ಹೇಳಬೇಕು ಮತ್ತು ನಿರ್ದಿಷ್ಟ ಪರಿಹಾರದ ಕ್ರಮಗಳನ್ನು ಸೂಚಿಸಬೇಕೆಂದು ಬಯಸಿದ್ದರು.

ಪರಿಹಾರ ಸತ್ತವರ ಕುಟುಂಬಕ್ಕೆ ಮಾತ್ರವಲ್ಲ, ಬದುಕಿ, ಕಷ್ಟಪಟ್ಟು ಕೃಷಿಯಲ್ಲಿ ತೊಡಗಿರುವ ಇತರ ರೈತರಿಗೂ. ಕಾವೇರಿಯಲ್ಲಿ ನೀರು ಚೆನ್ನಾಗಿ ಹರಿಯುವಾಗ ಸಹ ಕೀಲಾರಕ್ಕೆ ನೀರಿನ ಸಮಸ್ಯೆ ಇದ್ದದ್ದೇ. ಈ ಸಾರಿ ಅದು ಮತ್ತಷ್ಟು ಬಿಗಡಾಯಿಸಿತ್ತು. ಜಿಲ್ಲಾಡಳಿತ ಹಾಗೂ ಸರ್ಕಾರವು ಸೂಚಿಸುತ್ತಿರುವ ಪರಿಹಾರಗಳು, ತೆಗೆದುಕೊಳ್ಳುತ್ತಿರುವ ಕ್ರಮಗಳು ಮತ್ತು ಸಾಂತ್ವನದ ಮಾತುಗಳು ಎಲ್ಲವೂ ಅತ್ಯಂತ ಮೇಲ್ಪದರದ್ದಾಗಿವೆ. ಏಕೆಂದರೆ, ಸರ್ಕಾರ 'ತಾನು ತೆಗೆದುಕೊಳ್ಳಬಹುದಿದ್ದ ಗರಿಷ್ಠ ಕ್ರಮಗಳನ್ನು' ಈಗಾಗಲೇ ತೆಗೆದುಕೊಂಡಂತೆ ಮಾತಾಡುತ್ತಿದೆ. ಆದರೆ, ಅವುಗಳಿಂದ ಬಿಡಿ ಕುಟುಂಬಗಳ ಸಮಸ್ಯೆಯಾಗಲೀ, ಒಟ್ಟಾರೆ ರೈತ ಸಮುದಾಯದ ಬಿಕ್ಕಟ್ಟಾಗಲೀ ಗುಲಗಂಜಿಯಷ್ಟೂ ಕರಗಿಲ್ಲ. ಹೀಗಿದ್ದ ಮೇಲೆ ಧೈರ್ಯ ಹೇಗೆ ಬಂದೀತು? ಹಾಗಾಗಿಯೇ ಆತ್ಮಹತ್ಯೆಗಳು ನಿಲ್ಲದೇ ಇರುವುದರಲ್ಲಿ ಸರ್ಕಾರದ್ದು ಪ್ರಮುಖ ಪಾತ್ರವಿದೆ.

ಸರ್ಕಾರ ಎಂದಾಗ, ಅದು ಕೇವಲ ಕರ್ನಾಟಕದ ಸರ್ಕಾರ ಮಾತ್ರವಲ್ಲ, ಅದಕ್ಕಿಂತ ಒಂದು ತೂಕ ಹೆಚ್ಚು ಕೇಂದ್ರ ಸರ್ಕಾರದ್ದೂ ಇದೆ. ಆದರೆ, ಅವರು ಬಾಯೇ ಬಿಚ್ಚುತ್ತಿಲ್ಲ. ಒಂದು ವೇಳೆ ಬಿಚ್ಚಿದರೆ, ಕೃಷಿ ಸಚಿವ ರಾಧಾಮೋಹನ್‌ನಂತೆ ಉದ್ಧಟತನದ ಮಾತುಗಳನ್ನು ಆಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಹೊಣೆಯಾಗಿವೆ ಎಂದು ಹೇಳಲು ಹಲವು ಕಾರಣಗಳಿವೆ.

ಕೀಲಾರದ ರೈತರನ್ನು ನೋಡಲು, ಕೀಲಾರದ ಶಂಕರೇಗೌಡರನ್ನು ಹಾಡಿ ಹೊಗಳಿದ ಸಿದ್ದರಾಮಯ್ಯನವರಾಗಲೀ, ಅಂಬರೀಷ್ ಆಗಲೀ ಬರಲಿಲ್ಲ. ಕಾರ್ಯಕ್ರಮದಲ್ಲಿ ಅಂಬರೀಷ್ ರೈತ ಸಮುದಾಯ ಎದುರಿಸುತ್ತಿರುವ ಬಿಕ್ಕಟ್ಟಿನ ಕುರಿತು ಕನಿಷ್ಠ ಒಂದು ಮಾತೂ ಆಡಲಿಲ್ಲ. ಸಿದ್ದರಾಮಯ್ಯನರು ಮಾತಾಡಿದರು. ಆದರೆ, ಆ ಮಾತುಗಳು ಹೊಣೆಯರಿತ ಮಾತುಗಳಾಗಿರಲಿಲ್ಲ. ರಾಜ್ಯವಾಳುವ ಮುಖ್ಯಮಂತ್ರಿ, 'ಈ ಆತ್ಮಹತ್ಯೆಗಳಿಂದ ಮನಸ್ಸಿಗೆ ನೋವಾಗಿದೆ. ಯಾಕೆ ಆತ್ಮಹತ್ಯೆಗಳು ನಡೆಯುತ್ತಿವೆ ಎಂತಲೇ ಗೊತ್ತಾಗ್ತಿಲ್ಲ. ಇದಕ್ಕೆ ಏನು ಮಾಡಬೇಕೆಂದೇ ಗೊತ್ತಾಗ್ತಿಲ್ಲ' ಎನ್ನುವ ಮಾತುಗಳನ್ನಾಡಿದರು.

ಇದು ಸಿದ್ದರಾಮಯ್ಯನವರದ್ದು ಒಬ್ಬರದ್ದು ಅಲ್ಲ. ಇಂದು ಜವಾಬ್ದಾರಿಯುತ ಸ್ಥಾನಗಳಲ್ಲಿರುವ ಎಲ್ಲರ ವರ್ತನೆ, 'ನಾವೇನು ಮಾಡುವುದಕ್ಕಾಗುತ್ತದೆ?' ಎಂಬ ಧೋರಣೆಯನ್ನೇ ಪ್ರದರ್ಶಿಸುತ್ತಿದ್ದಾರೆ. ಹೌದೇ? ಅದು ಅಷ್ಟು ಕ್ಲಿಷ್ಟಕರ ಸಮಸ್ಯೆಯೇ? ಆತ್ಮಹತ್ಯೆಯವರೆಗೆ ಬಂದಿರುವ ಇಡೀ ಸಮಸ್ಯೆಯ ಮೂಲ ಡಬ್ಲ್ಯುಟಿಓ ಒಪ್ಪಂದದಲ್ಲಿ ಇದೆ. ಹಾಗಾಗಿ ಡಬ್ಲ್ಯುಟಿಓ ಒಪ್ಪಂದದಿಂದ ಹೊರಬರದೇ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಹಾಗಾಗಿ ಏನೂ ಮಾಡೋಕಾಗಲ್ಲ, ಅಷ್ಟೇನಾ? ಇಲ್ಲ, ಅದು ವಾಸ್ತವವಲ್ಲ. ಈ ಸಮಸ್ಯೆಗೆ ಪರಿಹಾರವಿದೆ. ಪರಿಹಾರವನ್ನು ನಾವು ಒದಗಿಸುತ್ತೇವೆ ಎಂಬ ಮಾತುಗಳನ್ನು ಅಧಿಕಾರಸ್ಥರು ಆಡಬೇಕಿತ್ತು. ಆಡುತ್ತಿಲ್ಲ. ಏಕೆಂದರೆ, ಅವರು ಮತ್ತು ಅವರು ಪ್ರತಿನಿಧಿಸುತ್ತಿರುವ ಪಕ್ಷಗಳು ಪರಿಹಾರದ ಭಾಗವಾಗಿಲ್ಲ; ಸಮಸ್ಯೆಯ ಭಾಗವಾಗಿದ್ದಾರೆ.



ಆದರೆ, ತಕ್ಷಣದ ಕೆಲವು ಕ್ರಮಗಳ ಮೂಲಕ ಮತ್ತು ಅಲ್ಪಕಾಲೀನ ಕ್ರಮಗಳ ಮೂಲಕ ಈ ಸಮಸ್ಯೆಗೆ ಒಂದು ತಾತ್ಕಾಲಿಕ ತಡೆಯನ್ನು ತರಲು ಸಾಧ್ಯವಿದೆ. ಅದು ಕೆಲವು ನಿರ್ಣಾಯಕವಾದ ಇಚ್ಛಾಶಕ್ತಿಯನ್ನು ಕೇಳುತ್ತದೆ. ಅದಕ್ಕೆ ಸಿದ್ದರಾಮಯ್ಯನವರು ಸಿದ್ಧರಿಲ್ಲವೋ ಅಥವಾ ಅವರು ಅಷ್ಟು ಜವಾಬ್ದಾರಿಯಿಂದ ವರ್ತಿಸುತ್ತಿಲ್ಲವೋ ಗೊತ್ತಿಲ್ಲ. ಅಂಬರೀಷ್‌ರಿಂದ ಏನನ್ನೂ ನಿರೀಕ್ಷಿಸುವಂತೆ ಇಲ್ಲವೇ ಇಲ್ಲ. ಕೀಲಾರ ರೈತರು ಅಂದು ಬೀದಿಯಲ್ಲಿ ಘೋಷಿಸಿದಂತೆ 'ನಮ್ಮ ಪಾಲಿಗೆ ಅವರು ಸತ್ತು ಹೋಗಿದ್ದಾರೆ'. ಇನ್ನು ಕೇಂದ್ರ ಸರ್ಕಾರವು ಸತ್ತು ಹೋಗಿಲ್ಲ. ಅದು ಕ್ರಿಯಾಶೀಲವಾಗಿದೆ. ವಿರುದ್ಧ ದಿಕ್ಕಿನಲ್ಲಿ ಕ್ರಿಯಾಶೀಲವಾಗಿದೆ. ಹಾಗಾಗಿ ಅವರಿಂದ ಸಮಸ್ಯೆ ಹೆಚ್ಚಳವಾಗುವುದನ್ನು ಮಾತ್ರ ನಿರೀಕ್ಷಿಸಬಹುದು. ಸಿದ್ದರಾಮಯ್ಯನವರಿಂದಲೂ ಏನನ್ನಾದರೂ ನಿರೀಕ್ಷಿಸಬಹುದು ಎಂದುಕೊಳ್ಳಲು ಕಾರಣಗಳಿಲ್ಲ ಎಂಬುದು ಕಳೆದ 3 ತಿಂಗಳ ಅವರ ಒಟ್ಟಾರೆ ನಡವಳಿಕೆಗಳಿಂದ ಸ್ಪಷ್ಟವಾಗಿದೆ.

ಹಾಗಾದರೆ, ಆತ್ಮಹತ್ಯೆ ಪರಿಹಾರವೇ? ಖಂಡಿತಾ ಅಲ್ಲ. ಇದಕ್ಕಿಂತಲೂ ಕಷ್ಟಕರ ಸನ್ನಿವೇಶಗಳನ್ನು ಇದೇ ರೈತ ಸಮುದಾಯ ಎದುರಿಸಿತ್ತು. 80ರ ದಶಕದ ಆರಂಭದಲ್ಲಿ, ಕೇವಲ ಸಾಲ ಮತ್ತು ಜಪ್ತಿ ಮಾತ್ರವಲ್ಲ, ಪೊಲೀಸರ ಗುಂಡುಗಳನ್ನೂ ತಿನ್ನಬೇಕಾಗಿ ಬಂದಿತ್ತು. ಆದರೆ, ಅದನ್ನು ರೈತ ಸಮುದಾಯ ಎದುರಿಸಿದ್ದು ಚಳವಳಿಯಿಂದ. ಆ ಚಳವಳಿ ನಂತರ ಪ್ರಪಂಚದ ರೈತ ಚಳವಳಿಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿತು. ಆ ನಂತರ ಅದು ಎದುರಿಸಿದ ಇಕ್ಕಟ್ಟು, ವಿಘಟನೆ ಮತ್ತು ಹಿನ್ನಡೆಗಳೇನೇ ಇರಬಹುದು; ಆದರೆ, ಒಂದು ಭೀಕರ ಬಿಕ್ಕಟ್ಟನ್ನು ಕರ್ನಾಟಕದ ರೈತ ಸಮುದಾಯ ಎದುರಿಸಿ ಮೇಲೆದ್ದು ನಿಂತಿತು ಎಂಬುದಂತೂ ಸತ್ಯ. ಇಂದು ಅಂತಹ ಒಂದು ಸಂದರ್ಭ ಮತ್ತೆ ಬಂದಿದೆ.

ಆದರೂ, ಒಂದು ಪ್ರಶ್ನೆ ಬಂದೇ ಬರುತ್ತದೆ. ಹಾಗಾದರೆ, ಒಂದು ದೊಡ್ಡ ಚಳವಳಿ ಮೇಲೆದ್ದು ಬಂದು ಡಬ್ಲ್ಯುಟಿಓವನ್ನೇ ಸೋಲಿಸುವ ತನಕ ಆತ್ಮಹತ್ಯೆಗಳನ್ನು ನಿಲ್ಲಿಸಲು ಸಾಧ್ಯವಿಲ್ಲವೇ? ಸಾಧ್ಯವಿದೆ. ಇವೇ ನರಸತ್ತ ಸರ್ಕಾರಗಳೇ, ಕಳೆದ ಹತ್ತು ವರ್ಷಗಳಲ್ಲಿ ಸ್ಥಳೀಯ ಜನಸಾಮಾನ್ಯರ ಹೋರಾಟದ ಒತ್ತಡದಿಂದಾಗಿ ಡಬ್ಲ್ಯುಟಿಓ ಒಪ್ಪಂದದ ಮುಂದಿನ ಮಜಲುಗಳನ್ನು ದಾಟಲು ಬಿಡಲಿಲ್ಲ. ಇಂದೂ ಅದನ್ನು ಮಾಡಲು ಸಾಧ್ಯ. ಮೀರಲು ಸಾಧ್ಯ.

ಸದ್ಯಕ್ಕೆ ಅವೂ ಬೇಡ. ಈಗಿನ ಚೌಕಟ್ಟಿನಲ್ಲೇ ಕೆಲವು ನಿರ್ಣಾಯಕ ಕ್ರಮಗಳನ್ನು ಘೋಷಿಸಿ, ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವ ಮೂಲಕ ರೈತ ಸಮುದಾಯಕ್ಕೆ ಸ್ಪಷ್ಟ ಸಂದೇಶವನ್ನು ರವಾನಿಸಿದರೆ, ಖಂಡಿತಾ ಈ ರೀತಿಯ ಸರಣಿ ಆತ್ಮಹತ್ಯೆಗಳು ನಡೆಯುವುದಿಲ್ಲ. ಅದಕ್ಕಾಗಿ ಒತ್ತಾಯಿಸಲು ಮಂಡ್ಯ... 750 ಹಳ್ಳಿಗಳಲ್ಲಿ ನಡೆದ 'ರೈತ ಹೋರಾಟ ಜಾಥಾ'... ಆಗಸ್ಟ್ 3ರಂದು ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ... ಮುತ್ತಿಗೆ ಹಾಕುವುದರೊಂದಿಗೆ ತನ್ನ ಮೊದಲ ಸು... ಮುಗಿಸಿಕೊಳ್ಳುತ್ತಿದೆ. ನೀವೆಲ್ಲರೂ ಅಲ್ಲಿ ಭಾಗವಹಿಸುವುದು ಬಹಳ ಮುಖ್ಯವಾದುದಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ, 'ರೈತ ಹೋರಾಟ ಜಾಥಾ'ದ ಹಕ್ಕೊತ್ತಾಯಗಳನ್ನು ಈಡೇರಿಸಬೇಕು. ಅವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ನೀವೆಲ್ಲರೂ ನಿಮ್ಮದೇ ಆದ ರೀತಿಯಲ್ಲಿ ಸರ್ಕಾರಗಳನ್ನು ಒತ್ತಾಯಿಸುವ ಅಗತ್ಯವಿದೆ. ಈ ಅಂಕಣದಲ್ಲಿ ಕಾಣಿಸಿರುವ 10 ಹಕ್ಕೊತ್ತಾಯಗಳು ಇನ್ನೂ ದೀರ್ಘವಾದ ಪಟ್ಟಿಯ ಸಂಕ್ಷಿಪ್ತ ರೂಪವಾ...

ಆತ್ಮಸ್ಥೈರ್ಯಕ್ಕಾಗಿ, ಶ್ರಮಿಕ ರೈತರ ನ್ಯಾಯಯುತ ಹಕ್ಕುಗಳಿಗಾ...

ರೈತ ಹೋರಾಟ ಜಾಥಾ

ಆರಂಭದ ಹಕ್ಕೊತ್ತಾಯಗಳು

(ಆತ್ಮಹತ್ಯೆಗಳ ಕುರಿತು ಜನಶಕ್ತಿ ಬಳಗ ಹಮ್ಮಿಕೊಂಡಿರುವ ಅಧ್ಯಯನದ ಆಧಾರದ ಮೇಲೆ ಹಾಗೂ ಜಾಥಾದಲ್ಲಿ ರೈತರಿಂದ ಬರುವ ಅಭಿಪ್ರಾಯಗಳ ಆಧಾರದ ಮೇಲೆ ಆಗಸ್ಟ್ 3ರಂದು ನೀಡುವ ಹಕ್ಕೊತ್ತಾಯ ಪತ್ರವನ್ನು ಪರಿಷ್ಕರಿಸಲಾಗುವುದು)

(ಸದ್ಯಕ್ಕೆ ಇದು ಕೇವಲ ಮಂಡ್ಯ ಜಿಲ್ಲೆಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಿರುವ ಹಕ್ಕೊತ್ತಾಯಗಳು. ಇದ... 3-4 ತಿದ್ದುಪಡಿಗಳನ್ನು ಮಾಡಿದರೆ, ಇಡೀ ರಾಜ್ಯಕ್ಕೆ ಅನ್ವಯಿಸುವುದು ಸಾಧ್ಯ)

ಈ ಎಲ್ಲಾ ಹಕ್ಕೊತ್ತಾಯಗಳೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಜವಾಬ್ದಾರಿ ಮತ್ತು ಮೇಲುಸ್ತುವಾರಿ... ಜಾರಿ ಆಗಬೇಕು. ರೈತರ ಸಮಸ್ಯೆಗಳಿಗೆ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳೂ ಹೊಣೆಗಾರರಾಗಿರುವುದರಿ... ಪರಸ್ಪರ ಕಾಲೆಳೆಯುವ ರಾಜಕೀಯ ಬಿಟ್ಟು ಇವುಗಳ ಜಾರಿಗೆ ಪ್ರಯತ್ನ ಹಾಕಬೇಕು.

1. ಅವಧಿ ಮೀರಿದ ಕಬ್ಬಿಗೆ ಎಕರೆಗೆ 50,000 ರೂ ಪರಿಹಾರ. ಟನ್ನಿಗೆ 3,500 ರೂ. ಎಫ್‌ಆರ್‌ಪಿ ನಿ... ಆಲೆಮನೆಗಳಿಗೂ ಸಹಾಯಧನ. ಸಕ್ಕರೆ ಕಾರ್ಖಾನೆಗಳ ಕ್ರಷಿಂಗ್ ಕೂಡಲೇ ಆರಂಭ. ಭತ್ತ, ರೇಷ್ಮೆ, ಬಾಳೆ, ತರ... ಒಳಗೊಂಡಂತೆ ಯಾವುದೇ ಬೆಳೆ ನಷ್ಟಕ್ಕೆ ಪರಿಹಾರ ನಿಗದಿ. ರೇಷ್ಮೆಗೆ ಕೆ.ಜಿ.ಗೆ ಕನಿಷ್ಠ 380 ರೂ. ನಿಗದಿ. ಭ... ಕ್ವಿಂಟಾಲ್‌ಗೆ 2000 ರೂ.

2. ಖಾಸಗಿ ಲೇವಾದೇವಿದಾರರ ಮೇಲೆ ಕ್ರಮ. ಆದರೆ ಸರ್ಕಾರೀ/ಸಾಂಸ್ಥಿಕ ಸಾಲದ ನೆರವು ಇಲ್ಲದಿದ್ದರೆ ಇದರಿ... ತೊಂದರೆಯೇ ಹೆಚ್ಚು. ಸಹಕಾರಿ ಸಂಸ್ಥೆಗಳ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ರೈತರು ಮತ್ತು ಕೃಷಿ ಕಾರ್ಮಿ... ಪಡೆದಿರುವ ಎಲ್ಲಾ ಸಾಲಮನ್ನಾ. ಅಲ್ಲಿಯವರೆಗೆ ಬಡ್ಡಿ ಲೆಕ್ಕ ಸ್ಥಗಿತ. ಹೊಸ ಸಾಲ ನೀಡಿಕೆ ಕೂಡಲೇ ಆರಂಭ. ... ಬೆಳೆಗಳಿಗೂ ಸಾಲ ನೀಡಿಕೆ. ಸಾಲದ ನೋಟಿಸ್ ನೀಡುತ್ತಿರುವ ಹಣಕಾಸು ಸಂಸ್ಥೆಗಳ ಮೇಲೆ ಕ್ರಮ.

3. ನೀರು ನಿರ್ವಹಣೆಯಲ್ಲಿ ದಕ್ಷತೆ. ಬೆಳೆ ಒಣಗದಿರುವಂತೆ ನೀರು ಪೂರೈಕೆ. ಪಂಪ್‌ಸೆಟ್ ಬಳಕೆದಾರ... ಹಗಲು ಹೊತ್ತಿನಲ್ಲೇ 12 ಗಂಟೆಗಳ ಕಾಲ ನಿರಂತರ 3 ಫೇಸ್ ವಿದ್ಯುತ್ ಪೂರೈಕೆ.

4. ಹಾಲಿಗೆ ನೀಡುತ್ತಿರುವ ದರ ಇಳಿಕೆ ಅಕ್ಷಮ್ಯ. ಕನಿಷ್ಠ ಲೀಟರ್‌ಗೆ 26 ರೂ. ಕುರಿ, ಕೋಳಿ, ಹಂದಿ ಸಾ... ಹಾಗೂ ಮೀನುಗಾರಿಕೆ ಬೆಳವಣಿಗೆಗೆ ತಕ್ಷಣದಿಂದಲೇ ಪ್ರೋತ್ಸಾಹಧನ.

5. ಮುಂದಿನ ಸೀಸನ್‌ನ ಎಲ್ಲಾ ಬೆಳೆಗಳಿಗೆ ಈಗಲೇ ವೈಜ್ಞಾನಿಕ ಬೆಲೆ ನಿಗದಿ. ಸರ್ಕಾರದಿಂದ ಬೆಲೆ ಖಾ... ಭರವಸೆ. ಯಾವ ಬೆಳೆ ಎಷ್ಟು ಬೆಳೆಯಬೇಕೆಂಬುದರ ಕುರಿತು ವೈಜ್ಞಾನಿಕ ಮತ್ತು ಪ್ರೋತ್ಸಾಹದಾಯಕ ವಿಧಾನ... ಮೂಲಕ ನಿರ್ವಹಣೆ. ಮಾರುಕಟ್ಟೆಯ ಮೇಲೆ ಸರ್ಕಾರದ ಸಂಪೂರ್ಣ ನಿಯಂತ್ರಣ. ಬಡ ಗ್ರಾಹಕರ ಅನುಕೂ... ಸಬ್ಸಿಡಿ ನೀಡಿಕೆಯ ಮುಂದುವರಿಕೆ.

6. ಬೀಜ, ಗೊಬ್ಬರ, ಕೀಟನಾಶಕ ಕಂಪೆನಿಗಳ ಲಾಭಕೋರತನವನ್ನು, ಇಡೀ ಕೃಷಿ ಕ್ಷೇತ್ರದ ಒಳಸುರಿ ಮಾರುಕಟ್ಟೆಯ... ಅವರ ಕೈಗೊಪ್ಪಿಸಿರುವುದನ್ನು ತಡೆಯದೇ ರೈತರ ಸಮಸ್ಯೆ ನಿವಾರಣೆ ಹೇಗೆ ಸಾಧ್ಯ? ಅವುಗಳಿಗೆ ನಿಯಂತ್ರಣ. ... ಸೀಸನ್‌ನಿಂದಲೇ ಬೀಜ, ಗೊಬ್ಬರಗಳಿಗೆ ಸಬ್ಸಿಡಿಯ ಹೆಚ್ಚಳ ಮತ್ತು ಸುಸ್ಥಿರ, ಪರಿಸರ ಸ್ನೇಹಿ (ನೈಸರ್ಗಿಕ ಮ... ಸಾವಯವ ಕೃಷಿ) ಕೃಷಿ ಪದ್ಧತಿಯೆಡೆಗೆ ಸಾಗಲು ಬೇಕಾದ ದೀರ್ಘಕಾಲಿಕ ಕ್ರಮಗಳಿಗೆ ಉತ್ತೇಜನ.

7. ಶಿಕ್ಷಣ ಮತ್ತು ಆರೋಗ್ಯ: ಜಿಲ್ಲೆಯ ಸರ್ಕಾರೀ ಶಾಲಾಕಾಲೇಜುಗಳು ಹಾಗೂ ಸರ್ಕಾರೀ ಆಸ್ಪತ್ರೆಗಳ ಗುಣಮಟ್ಟವ... ಹೆಚ್ಚಿಸಲು ನಿರ್ದಿಷ್ಟ ಕ್ರಮಗಳು. ಆ ಮೂಲಕ ಈ ಎರಡೂ ಅತ್ಯಗತ್ಯ ಮಾನವ ಹಕ್ಕುಗಳ ನಿಭಾವಣೆಗೆ ತಗುಲ... ಖರ್ಚು ಕಡಿಮೆಯಾಗುವಂತೆ ನೋಡಿಕೊಳ್ಳುವುದು. ನರೇಗಾ ಯೋಜನೆ ಸೇರಿದಂತೆ ವಿವಿಧ ಕ್ರಮಗಳ ಮೂ... ಉದ್ಯೋಗ ಸೃಷ್ಟಿ ಮತ್ತು ಶ್ರಮಿಕ ವರ್ಗಕ್ಕೆ ಕೂಡಲೇ ಹಣ ಪಾವತಿಯಾಗಲು ಬೇಕಾದ ಬದಲಾವಣೆಗಳು.


8. 2003ರಿಂದ ಇಲ್ಲಿಯವರೆಗೆ ಸರ್ಕಾರವೇ ವ್ಯವಸ್ಥಿತವಾಗಿ ಮದ್ಯ ಮಾರಾಟದ ಗುರಿ (ಟಾರ್ಗೆಟ್) ಹೆಚ್ಚಿಸು... ಜಿಲ್ಲೆಯಲ್ಲಿ ಕುಡಿತ ನೂರಾರು ಕೋಟಿ ರೂ. ಹೆಚ್ಚಾಗುವಂತೆ ಮತ್ತು ಅನಧಿಕೃತ ಮದ್ಯ ಮಾರಾಟ ಆಗುವ... ನೋಡಿಕೊಂಡಿದೆ. ಈ ತಿಂಗಳಿಂದ ಟಾರ್ಗೆಟ್ ಕಡಿಮೆ ಮಾಡುತ್ತಾ ಬರಬೇಕು.

9. ಡಬ್ಲ್ಯುಟಿಓ ಒಪ್ಪಂದದಿಂದ ಹಿಂದೆ ಸರಿಯಲು ಆರಂಭಿಸಬೇಕು. ಎರಡೂವರೆ ಲಕ್ಷಕ್ಕೂ ಹೆಚ್ಚು ರೈ... ಆತ್ಮಹತ್ಯೆಗಳಿಗೆ ಕಾರಣವಾಗಿರುವುದಕ್ಕಿಂತ ದೊಡ್ಡ ಕಾರಣ ಇನ್ನೇನು ಬೇಕು? ಭಾರತ ಒಂದು ಸ್ವತಂತ್ರ, ಸಾರ್ವಭೌ... ದೇಶವಾಗಿದ್ದರೆ ಇದನ್ನು ಮಾಡಬೇಕು. ಈ ವರ್ಷ ಡಿಸೆಂಬರ್‌ನಲ್ಲಿ ಡಬ್ಲ್ಯುಟಿಓದ 10ನೇ ಸಚಿವ ಸಮ್ಮೇಳನದಲ್ಲಿ ಕೃ... ಆಹಾರ ಭದ್ರತೆ, ಪಡಿತರ ವ್ಯವಸ್ಥೆ ಶಿಕ್ಷಣ ಮತ್ತು ಆರೋಗ್ಯ ಹಾಗೂ ಇನ್ನಿತರ ಕ್ಷೇತ್ರಗಳಿಗೆ ಸಂಬಂಧಿಸಿದ ಯಾ... ಒಪ್ಪಂದಕ್ಕೂ ಸಹಿ ಹಾಕಬಾರದು. ರೇಷ್ಮೆ ಆಮದು ಒಳಗೊಂಡಂತೆ ಭಾರತದ ರೈತಾಪಿಯ ಮೇಲೆ ದುಷ್ಪರಿಣಾ... ಬೀರುವ ಎಲ್ಲಾ ಅಂಶಗಳ ವಿಚಾರದಲ್ಲೂ ನೀತಿ ಬದಲಾಯಿಸಬೇಕು.

10. ಮೈಷುಗರ್ ಹಾಗೂ ಪಿಎಸ್‌ಎಸ್‌ಕೆ ಕಾರ್ಖಾನೆಗಳ ಸಂಪೂರ್ಣ ಪುನಶ್ಚೇತನಕ್ಕೆ ಸಮಗ್ರ ಪ್ಯಾಕೇ... ಡಿಸೆಂಬರ್ ಒಳಗೆ ಜಾರಿ ಮಾಡಲು ಆರಂಭ.

ಅನ್ಯಾಯ

ಪ್ಪೂಕಿ ಮುದ್ದಾಕ್ಕೆ ಹೋಗುತ್ತಿರುವ ಹೊತ್ತಿನಲ್ಲೇ ಯಾಕೂಬ್ ಮೆಮನ್‌ನನ್ನು ಗಲ್ಲಿಗೆ ಕಳುಹಿಸಲು ಸುಪ್ರೀಂಕೋರ್ಟ್ ಗ್ರೀನ್‌ಸಿಗ್ನಲ್ ತೋರಿಸಿದೆ. ನಾಳೆ (ಗುರುವಾರ) ಯಾಕೂಬ್ ತನ್ನ 53ನೇ ಹುಟ್ಟುಹಬ್ಬವನ್ನು ಆಚರಿಸುವ ಬದಲು ಮರಣವನ್ನು ಹೊಂದಲಿದ್ದಾನೆ. ಇದು ನಮ್ಮ ಕಾರ್ಯಾಂಗ ಮತ್ತು ನ್ಯಾಯಾಂಗ ಜೊತೆಗೂಡಿ ಎಸಗಿರುವ ಘೋರ ಅನ್ಯಾಯ.





ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಸುಮ್ಮನೆ ಯೋಚಿಸಿ; ಯಾಕೂಬ್ ಭಯೋತ್ಪಾದಕನಾಗಿದ್ದರೆ ಅಪರಾಧಿ ಆಗಿದ್ದರೆ ಆತ ಯಾತಕ್ಕೆ ಭಾರತಕ್ಕೆ ವಾಪಸ್ ಬರುತ್ತಿದ್ದ? ಯಾಕೆ ಯಾಕೂಬ್ ಆನಂತರವೂ ತನ್ನ ಪತ್ನಿ, ಆಗತಾನೇ ಹುಟ್ಟಿದ್ದ ಮಗಳು, ಒಬ್ಬ ಸಹೋದರ ಮತ್ತು ಆತನ ಪತ್ನಿ, ಕೊನೆಗೆ ತನ್ನ ತಂದೆತಾಯಂದಿರೂ ಭಾರತಕ್ಕೆ ವಾಪಸ್ ಬರುವಂತೆ ಮಾಡಿದ? ಯಾಕೆ ಆತ ಮತ್ತಿನಿಂದಲೂ "ನಾನು ನಿರ್ದೋಷಿ ಎಂಬುದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಿ ನನ್ನ ಹೆಸರಿಗೆ ಅಂಟಿರುವ ಕಳಂಕವನ್ನು ತೊಡೆದುಹಾಕುತ್ತೇನೆ" ಎಂಬ ಭರವಸೆಯನ್ನು ಹೊಂದಿದ್ದ? 1993ರ ಮುಂಬೈ ಸರಣಿ ಬಾಂಬ್ ಸ್ಫೋಟಗಳಲ್ಲಿ ಬರೀ ಭೂಗತ ಲೋಕದ ಡಾನ್ ದಾವೂದ್ ಇಬ್ರಾಹಿಂ ಮತ್ತು ಯಾಕೂಬ್‌ನ ಹಿರಿಯಣ್ಣ ಟೈಗರ್ ಮೆಮನ್ ಮಾತ್ರವಲ್ಲ, ಅದರ ಹಿಂದೆ ಪಾಕಿಸ್ತಾನದ ಕೈವಾಡವೂ ಇತ್ತೆಂದು ಸಾಬೀತುಪಡಿಸಲು ಯಾಕೂಬ್ ಯಾಕೆ ರಾ ಏಜೆಂಟರೊಂದಿಗೆ ಸಹಕರಿಸಿದ? ಯಾಕೆ ಆತನನ್ನು ಗಲ್ಲಿಗೇರಿಸಕೂಡದೆಂದು ರಾ ಸಂಸ್ಥೆಯಲ್ಲಿ ಹಿರಿಯ ಅಧಿಕಾರಿಯಾಗಿದ್ದ ಬಿ.ರಾಮನ್ ಎಂಬುವವರು ಪ್ರತಿಪಾದಿಸಿದ್ದರು?

ವಾಸ್ತವವಾಗಿ, ಯಾಕೂಬ್ ಸಂಪೂರ್ಣವಾಗಿ ನಿರಪರಾಧಿಯಲ್ಲ, ಆದರೆ ಆತ ಗಲ್ಲಿಗೇರುವಂತಹ ಅಪರಾಧವನ್ನೇನೂ ಎಸಗಿಲ್ಲ. ಆದರೇನಂತೆ, ಅಸಲಿ ಕ್ರಿಮಿನಲ್‌ಗಳಾದ ದಾವೂದ್ ಮತ್ತು ಟೈಗರ್ ಮೆಮನ್ ಆಗಲಿ, ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆಯಾದ ಐಎಸ್‌ಐನ ಅಧಿಕಾರಿಗಳಾಗಲಿ ತಮ್ಮ ಕೈಗೆ ಸಿಗದಿರುವುದರಿಂದ ರಾ ಸಂಸ್ಥೆಯವರು ಯಾಕೂಬ್‌ನನ್ನು ಬಲಿಕೊಟ್ಟಿದ್ದಾರೆ ಎಂದರೆ ತಪ್ಪಾಗದು.

ಎಂಟು ವರ್ಷಗಳ ಹಿಂದೆ ರಾಮನ್ ಅವರು ಬರೆದಿದ್ದ ಲೇಖನವೊಂದು ಒಂದೆರಡು ದಿನಗಳ ಹಿಂದೆ ಬಹಿರಂಗಗೊಂಡಿದ್ದು 1993ರ ಬಾಂಬ್ ಸ್ಫೋಟದಲ್ಲಿ ಆತನ ಪಾತ್ರ ಯಾವುದಾಗಿತ್ತು ಮತ್ತು ಪಾಕಿಸ್ತಾನದ ಷಡ್ಯಂತ್ರ ಎಂತಹದ್ದಾಗಿತ್ತು ಎಂದು ಸ್ಪಷ್ಟಪಡಿಸುತ್ತದೆ. ರಾಮನ್ ಅವರು ಹೇಳಿರುವಂತೆ ಭಾರತದ ನ್ಯಾಯವ್ಯವಸ್ಥೆಯಲ್ಲಿ ನಂಬಿಕೆ ಇಟ್ಟೇ ಯಾಕೂಬ್ ಪಾಕಿಸ್ತಾನದಲ್ಲಿ ಐಎಸ್‌ಐ ಕೊಟ್ಟಿದ್ದ ರಕ್ಷಣೆಯನ್ನು ತ್ಯಜಿಸಿ ಸ್ವಯಂಪ್ರೇರಣೆಯಿಂದ ನೇಪಾಳಕ್ಕೆ ಬಂದದ್ದು. ಆತ ಪೊಲೀಸರಿಗೆ ಶರಣಾಗುವ ಮುನ್ನವೇ ಅನುಮಾನದ ಮೇಲೆ ನೇಪಾಳದ ಪೊಲೀಸರು ಆತನನ್ನು ಬಂಧಿಸಿದ್ದರು. ಆಗ ಆತನನ್ನು ಭಾರತಕ್ಕೆ ಕರೆತರುವ ಕಾರ್ಯಾಚರಣೆಗೆ ಮುಂದಾಳತ್ವವನ್ನು ವಹಿಸಿದ್ದೂ ರಾಮನ್ ಅವರೇ. ಯಾಕೂಬ್‌ನನ್ನು ಭಾರತದ ಗಡಿ ಪ್ರದೇಶಕ್ಕೆ ತಂದನಂತರ ಆತನನ್ನು ಏವಿಯೇಷನ್ ರಿಸರ್ಚ್ ಸೆಂಟರ್ ಎಂಬ ಸರ್ಕಾರಿ ಸಂಸ್ಥೆಯ ವಿಮಾನದಲ್ಲಿ ದೆಹಲಿಗೆ ತಂದು ಬಂಧನಕ್ಕೆ ಒಳಪಡಿಸಲಾಗಿತ್ತೇ ಹೊರತು ದೆಹಲಿ ಪೊಲೀಸರು ಕೊಚ್ಚಿಕೊಂಡಿದ್ದಂತೆ ಯಾಕೂಬ್‌ನನ್ನು ರೈಲ್ವೆ ನಿಲ್ದಾಣದಲ್ಲಿ ಬಂಧಿಸಿರಲಿಲ್ಲ. ಅಂದರೆ, ಮೊದಲಿನಿಂದಲೂ ಯಾಕೂಬ್ ಹೇಳಿದ್ದು ಸತ್ಯವಾಗಿತ್ತು ಮತ್ತು ಪೊಲೀಸರು ಹೇಳಿದ್ದು ಅಪ್ಪಟ ಸುಳ್ಳಾಗಿತ್ತು.

ಅಷ್ಟೇ ಮುಖ್ಯವಾಗಿ, ರಾಮನ್ ಅವರು ಹೇಳಿರುವಂತೆ ಆತ ತನಿಖಾ ತಂಡಗಳೊಂದಿಗೆ ಸಹಕರಿಸಿದನಲ್ಲದೆ, ಆತ ಗುಪ್ತವಾಗಿ ಸಂಗ್ರಹಿಸಿ ತಂದಿದ್ದ ವಿಡಿಯೋ ಮತ್ತು ಆಡಿಯೋ ತುಣುಕುಗಳು ಪಾಕಿಸ್ತಾನದ ಪಾತ್ರವನ್ನು ದೃಢಪಡಿಸುವಲ್ಲಿ ಭಾರತ ಸರ್ಕಾರಕ್ಕೆ ಅಪಾರವಾಗಿ ನೆರವಾಗಿದ್ದವು. ಯಾಕೂಬ್ ಸ್ವಯಂಪ್ರೇರಣೆಯಿಂದ ಭಾರತಕ್ಕೆ ವಾಪಸ್ ಬಂದದ್ದು, ತನ್ನ ಕುಟುಂಬದವರೂ ಬರುವಂತೆ ಮಾಡಿದ್ದು ಮತ್ತು ಆತ ತನಿಖಾ ತಂಡಗಳಿಗೆ ಕೊಟ್ಟ ನೆರವನ್ನು ಅಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸದೆ ಪ್ರಮಾದ ಎಸಗಿದ್ದಾರೆ ಎಂದೂ ರಾಮನ್ ದುಃಖ ವ್ಯಕ್ತಪಡಿಸಿದ್ದರು. "ಈ ಎಲ್ಲ ಕಾರಣಕ್ಕಾದರೂ ಆತನಿಗೆ ಗಲ್ಲುಶಿಕ್ಷೆ ನೀಡಬಾರದು" ಎಂದೂ ಅವರು ತಮ್ಮ ಲೇಖನದಲ್ಲಿ ಹೇಳಿದ್ದರು.

ಪಾಕಿಸ್ತಾನ ಮತ್ತು ದಾವೂದ್ ಪಾತ್ರದ ಬಗ್ಗೆ ಯಾಕೂಬ್ ಮಾಹಿತಿ ನೀಡಿದರೆ ಆತನಿಗೆ ರಕ್ಷಣೆ ನೀಡುತ್ತೇವೆಂದು ಸರ್ಕಾರದ ಅಧಿಕಾರಿಗಳು ಭರವಸೆ ನೀಡಿದ್ದರಿಂದ ಮತ್ತು ತಾನು ನಿರಪರಾಧಿ ಎಂದು ಸ್ವತಃ ಆತನಿಗೆ ಗೊತ್ತಿದ್ದರಿಂದಲೇ ಆತ ಇಷ್ಟೆಲ್ಲವನ್ನು ಮಾಡಿದ್ದು. ಆದರೆ ಆತನಿಂದ ಎಲ್ಲವನ್ನೂ ಪಡೆದ ಅಧಿಕಾರಿಗಳು ತಮ್ಮ ಮಾತನ್ನು ಉಳಿಸಿಕೊಳ್ಳದೆ ಆತನಿಗೆ ಮರಣದಂಡನೆ ಆಗುವಂತೆ ಮಾಡಿರುವುದು ಸ್ಪಷ್ಟವಾಗಿದೆ. ಇದು ವಂಚನೆಯಲ್ಲದೆ ಇನ್ನೇನು? ನ್ಯಾಯಾಲಯ ಕೂಡ ಮತ್ತೊಬ್ಬ ಆರೋಪಿ ಪೊಲೀಸರ ಬಂಧನದಲ್ಲಿದ್ದಾಗ ಕೊಟ್ಟ ಹೇಳಿಕೆಯನ್ನೇ ಆಧರಿಸಿ (ಆನಂತರ ಆತ ಆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ಹಿಂದೆ ಪಡೆದಿದ್ದರೂ ಕೂಡ) ಯಾಕೂಬನಿಗೆ ಗಲ್ಲುಶಿಕ್ಷೆ ವಿಧಿಸಿದೆ. ಇನ್ನೊಂದು ಮುಖ್ಯವಾದ ಅಂಶ ಯಾವುದೆಂದರೆ, ಯಾವ ಕಾನೂನಿನ ಕಲಂ ಅಡಿ ಯಾಕೂಬ್‌ನನ್ನು ಈಗ ಗಲ್ಲಿಗೇರಿಸಲಾಗುತ್ತಿದೆಯೋ ಅದೇ ಕಾನೂನಿನ ಕಲಂ ಅಡಿ ಅದೇ ಮುಂಬೈ ಸ್ಫೋಟಕ್ಕೆ ಸಂಬಂಧಿಸಿದಂತೆ ಮೂಲಚಂದ್ ಶಾ ಎಂಬಾತನನ್ನೂ ಬಂಧಿಸಲಾಗಿತ್ತು. ಆದರೆ ಆತನಿಗೆ ನ್ಯಾಯಾಲಯ ವಿಧಿಸಿದ ಶಿಕ್ಷೆ ಕೇವಲ ಐದು ವರ್ಷಗಳ ಜೈಲುವಾಸ. ಹಿಂದೂ ಆದರೆ ಐದು ವರ್ಷ, ಮುಸಲ್ಮಾನನಾದರೆ ಮರಣ ಎಂದು ನಮ್ಮ ನ್ಯಾಯಾಂಗ ವ್ಯವಸ್ಥೆ ನಂಬಿದೆಯೇ?

ಇತ್ತೀಚೆಗೆ ಸುಪ್ರೀಂಕೋರ್ಟ್ 1989ರ ರಾಜೀವ್ ಗಾಂಧಿಯವರ ಹತ್ಯೆಗೆ ಸಂಬಂಧಿಸಿದಂತೆ ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಮೂವರನ್ನು ಹಲವಾರು ವರ್ಷಗಳ ಕಾಲ ಬಂಧನದಲ್ಲಿಟ್ಟಿರುವುದರಿಂದ ಅವರೆಲ್ಲರ ಶಿಕ್ಷೆಯನ್ನು ಜೀವಾವಧಿಗೆ ಬದಲಾಯಿಸಿತ್ತು. ಆದರೆ 1993ರ (ನಾಲ್ಕು ವರ್ಷಗಳ ನಂತರ) ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ 1994ರಿಂದಲೇ ಜೈಲಿನಲ್ಲಿರುವ ಯಾಕೂಬ್ ಕುರಿತಂತೆ ಇವತ್ತೂ ತನ್ನ ನಿಲುವನ್ನು ಸುಪ್ರೀಂಕೋರ್ಟ್ ಬದಲಾಯಿಸಿಕೊಳ್ಳಲಿಲ್ಲ. ತಮಿಳರಿಗೆ ಒಂದು ನ್ಯಾಯ, ಮುಸಲ್ಮಾನರಿಗೆ ಇನ್ನೊಂದು ನ್ಯಾಯ ಯಾಕೆ?

ಇತ್ತೀಚೆಗೆ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳು ಮರಣದಂಡನೆ ವಿಧಿಸುವಲ್ಲಿ ತಪ್ಪುಗಳಾಗಿವೆ ಎಂದು ಒಪ್ಪಿಕೊಂಡಿದ್ದಾರಲ್ಲದೆ, ಆ ಕುರಿತು ತಾರತಮ್ಯಗಳನ್ನು ನಿವಾರಿಸಲೆಂದೇ ಲಾ ಕಮಿಷನ್ ಈಗ ಸಮಾಲೋಚನೆಗಳನ್ನು ನಡೆಸುತ್ತಿದೆ. ಹೀಗಿರುವಾಗ ಸುಪ್ರೀಂಕೋರ್ಟ್ ಸಮಯಾವಕಾಶವನ್ನಾದರೂ ತೆಗೆದುಕೊಂಡು ಯಾಕೂಬ್ ಗಲ್ಲಿಗೇರುವುದನ್ನು ತಡೆಯಬಹುದಿತ್ತು. ಅದನ್ನೂ ಮಾಡಲಿಲ್ಲ ಯಾಕೆ?

ನಿವೃತ್ತ ನ್ಯಾಯಮೂರ್ತಿ ಮಾರ್ಕಂಡೇಯ ಕಾಟ್ಜು ಸೇರಿದಂತೆ ಹಲವಾರು ಇತರೆ ನಿವೃತ್ತ ನ್ಯಾಯಮೂರ್ತಿಗಳೂ ಯಾಕೂಬ್‌ಗೆ ಗಲ್ಲುಶಿಕ್ಷೆ ವಿಧಿಸಿರುವುದು ತಪ್ಪು ನಿರ್ಧಾರ ಎಂದು ಹೇಳಿದ್ದರೂ ಅದನ್ನು ಯಾಕೆ ಸುಪ್ರೀಂಕೋರ್ಟ್ ಕಿವಿಗೆ ಹಾಕಿಕೊಳ್ಳಲಿಲ್ಲ? ನ್ಯಾಯಾಲಯದ ಪ್ರಕಾರ ನಮ್ಮ ದೇಶದಲ್ಲಿ ಮುಸಲ್ಮಾನರ ಪ್ರಾಣಕ್ಕೆ ಕಿಂಚಿತ್ತೂ ಬೆಲೆ ಇಲ್ಲವೇ? ಅವರು ಸತ್ತರೆಷ್ಟು ಬಿಟ್ಟರೆಷ್ಟು ಎಂಬ ನಿಲುವು ನಮ್ಮ ನ್ಯಾಯವ್ಯವಸ್ಥೆಯದ್ದೇ?

ಯಾಕೂಬ್ ನಮ್ಮ ದೇಶದ ಕಾನೂನಿನಲ್ಲಿ ನಂಬಿಕೆ ಇಟ್ಟಿದ್ದವನು. ಸರ್ಕಾರ ಆತನಿಗೆ ಕೊಟ್ಟಿದ್ದ ಭರವಸೆಯನ್ನು ನಂಬಿದ್ದವನು. ತಾನು ನಿರಪರಾಧಿ ಎಂದು ನ್ಯಾಯಾಲಯದ ಮುಂದೆ ಸಾಬೀತಾಗುತ್ತದೆ ಎಂದು ಭರವಸೆ ಹೊಂದಿದ್ದವನು. ಆದರೆ ನಮ್ಮ ವ್ಯವಸ್ಥೆ ಆತನಿಗೆ ಕೊಟ್ಟದ್ದು ಮಾತ್ರ ಮರಣ.

ಇದಕ್ಕಿಂತ ಘೋರ ಅನ್ಯಾಯ ಇನ್ನೊಂದಿರಲಾರದು. •

ಈ ಲೇಖನಕ್ಕೆ ಸಂಬಂಧಿಸಿದ ಇನ್ನಷ್ಟು ಬರಹಗಳು 9ನೇ ಪುಟದಲ್ಲಿವೆ


ನೇಣು ಮತ್ತು ರಾಜಕೀಯ

ಯಾಕೂಬ್ ಮೆಮನ್ ಇತ್ತೀಚಿನ ವರ್ಷಗಳಲ್ಲಿ ಗಲ್ಲಿಗೇರಿದ ಮೂರನೆ ಮುಸ್ಲಿಮನಾಗಿದ್ದಾನೆ. ಅದರ ಹಿಂದಿರುವ ರಾಜಕೀಯ ಪಿತೂರಿಗೂ ಬಲಿಯಾಗಿದ್ದಾನೆ.

ಮುಂಬೈ ಮೇಲೆ ದಾಳಿ ಮಾಡಿದ ಪಾಕಿಸ್ತಾನದ ಭಯೋತ್ಪಾದಕ ಅಜ್ಮಲ್ ಕಸಬ್‌ನನ್ನು ಗಲ್ಲಿಗೇರಿಸಿದ ಸಂದರ್ಭ ನೆನಪಿದೆಯೇ? ಅದು 2012. ಆ ವರ್ಷದ ಡಿಸೆಂಬರ್ ತಿಂಗಳಲ್ಲಿ ಗುಜರಾತಿನಲ್ಲಿ ಚುನಾವಣೆಗಳು ನಡೆಯಲಿದ್ದು ನರೇಂದ್ರ ಮೋದಿ ಮೂರನೆ ಬಾರಿಗೆ ಆ ರಾಜ್ಯದ ಮುಖ್ಯಮಂತ್ರಿ ಆಗುವ ಹಂತದಲ್ಲಿದ್ದ. ಆತ ಚುನಾವಣಾ ಪ್ರಚಾರದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಅವರ ಪುತ್ರ ರಾಹುಲ್ ಗಾಂಧಿಯನ್ನು ಭಯೋತ್ಪಾದಕರ ಪ್ರಾಯೋಜಕರು ಎಂದು ನಿಂದಿಸುತ್ತಿದ್ದ; ಮುಂಬೈ ಮೇಲೆ ದಾಳಿ ಮಾಡಿದ್ದ ಅಜ್ಮಲ್‌ನನ್ನು ಗಲ್ಲಿಗೇರಿಸುವ ತಾಕತ್ತಿಲ್ಲದ ಹೇಡಿಗಳು ಎಂದು ಜರಿಯುತ್ತಿದ್ದ. ನರೇಂದ್ರ ಮೋದಿಯಷ್ಟೇ ಕಾಂಗ್ರೆಸ್‌ಗೂ ಧೈರ್ಯ ಇದೆ ಎಂದು ತೋರಿಸಲೆಂದೇ ಆಗಿನ ಕೇಂದ್ರ ಗೃಹ ಸಚಿವ ಸುಶೀಲ್‌ಕುಮಾರ್ ಶಿಂಧೆ ದಿಢೀರೆಂದು ಅಜ್ಮಲ್‌ನನ್ನು ಗಲ್ಲಿಗೇರಿಸುವ ನಿರ್ಧಾರ ತೆಗೆದುಕೊಂಡರು. ಅದರಂತೆ ನವೆಂಬರ್ 2012ರಲ್ಲಿ ಅಜ್ಮಲ್‌ನನ್ನು ಗಲ್ಲಿಗೇರಿಸಲಾಯಿತು. ಆದರೇನಂತೆ ಆ ಚುನಾವಣೆಯಲ್ಲೂ ಕಾಂಗ್ರೆಸ್ ಗುಜರಾತಿನಲ್ಲಿ ನೆಲಕಚ್ಚಿತು, ಮತ್ತು ಮೋದಿ ಮತ್ತಷ್ಟು ಬಲಶಾಲಿಯಾದ.

ಅದಾದನಂತರ ಗಲ್ಲಿಗೇರಿದ್ದು ಕಾಶ್ಮೀರದ ಅಫ್ಜಲ್ ಗುರು. 2001ರಲ್ಲಿ ಸಂಸತ್ತಿನ ಮೇಲೆ ನಡೆದ ದಾಳಿಯಲ್ಲಿ ಅಫ್ಜಲ್ ಗುರು ಪಿತೂರಿದಾರನಾಗಿದ್ದ ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ 'ಸಮಾಜದ ಸಮಷ್ಟಿಪ್ರಜ್ಞೆಯನ್ನು ತೃಪ್ತಿಪಡಿಸುವುದಕ್ಕೆ' ಆತನನ್ನು ಗಲ್ಲಿಗೇರಿಸಬೇಕೆಂದು ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು. ಬಿಜೆಪಿ ಕೂಡ ಆತನನ್ನು ಆದಷ್ಟು ಬೇಗ ಗಲ್ಲಿಗೇರಿಸಬೇಕೆಂದು ಒತ್ತಾಯಿಸುತ್ತಿತ್ತು. ಆಗ ಸಂಸತ್ತಿನ ಚುನಾವಣೆಯೂ ಹತ್ತಿರವಾಗುತ್ತಿದ್ದರಿಂದ ಮತ್ತು ಕಾಂಗ್ರೆಸ್ ವಿರುದ್ಧ ಅಲೆ ಬೀಸುತ್ತಿದ್ದರಿಂದ ತಾನು ಭಯೋತ್ಪಾದಕರನ್ನು ರಕ್ಷಿಸುವ ಪಕ್ಷವಲ್ಲ ಎಂದು ತೋರಿಸುವ ತುರ್ತು ಕಾಂಗ್ರೆಸ್ ಪಕ್ಷಕ್ಕೆ ಇತ್ತು. ಆ ಕಾರಣಕ್ಕೇ ಆಗಿನ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಅಫ್ಜಲ್ ಗುರುನನ್ನು ಗಲ್ಲಿಗೇರಿಸುವ ನಿರ್ಧಾರವನ್ನು ಅಚಾನಕ್ ಆಗಿ ತೆಗೆದುಕೊಂಡಿತು. ಕಾಶ್ಮೀರದಲ್ಲಿ ವಾಸವಿರುವ ಅಫ್ಜಲ್ ಗುರುವಿನ ಕುಟುಂಬಕ್ಕೂ ತಿಳಿಸದೆ ಆತನನ್ನು ಕೊಂದು ಹಾಕಲಾಯಿತು. ಆದರೆ ಅಫ್ಜಲ್ ಗುರುವಿನ ಕೊಲೆಯೂ ಕಾಂಗ್ರೆಸ್ ಪಕ್ಷವನ್ನು ಮತಪೆಟ್ಟಿಗೆಯಲ್ಲಿ ರಕ್ಷಿಸಲಾಗಲಿಲ್ಲ. ಅದು ದೇಶದಾದ್ಯಂತ ಹೀನಾಯ ಸೋಲು ಕಂಡಿತು.

ಕಳೆದ ಒಂದು ವರ್ಷವನ್ನು ಬರೀ ಸೆಲ್ಫಿ ತೆಗೆದುಕೊಳ್ಳುವಲ್ಲಿ ಮತ್ತು ಜಗತ್ತಿನ ವಿವಿಧ ದೇಶಗಳನ್ನು ಸುತ್ತುವಲ್ಲಿ ಕಳೆದಿರುವ ಮೋದಿ ಸರ್ಕಾರಕ್ಕೂ ತಾನೇನೋ ಸಾಧಿಸಿದ್ದೇನೆ ಎಂದು ಸಾಬೀತುಪಡಿಸುವ ಜರೂರತ್ತು ಇದೆ. ಆ ಕಾರಣಕ್ಕೇ ಮುಂಬೈ ಮೇಲಿನ ದಾಳಿಯಲ್ಲಿ ಪಿತೂರಿದಾರನಾಗಿದ್ದ ಎಂದು ಈಗ ಯಾಕೂಬ್ ಮೆಮನ್‌ನನ್ನು ಕೊಲ್ಲಲು ಹೊರಟಿದೆ.





ಕಸಬ್, ಅಫ್ಜಲ್ ಮತ್ತು ಯಾಕೂಬ್... ಮೂವರೂ ಮುಸಲ್ಮಾನರಾಗಿರುವುದು ಕಾಕತಾಳೀಯವಲ್ಲ. ನಮ್ಮ ದೇಶದಲ್ಲಿ ಕೋಮುವಾದ ಹೆಚ್ಚುತ್ತಿರುವುದಕ್ಕೂ ಇವರ ಸಾವುಗಳಿಗೂ ನೇರಾನೇರ ನಂಟಿದೆ.

1993ರ ಮುಂಬೈ ಸರಣಿ ಬಾಂಬ್ ಸ್ಫೋಟ, 2001ರ ಸಂಸತ್ ದಾಳಿ ಮತ್ತು 2011ರ ಮುಂಬೈ ದಾಳಿಗಳಿಗಿಂತಲೂ ಮುನ್ನ ಕೊಲೆ ಮಾಡಿ ಮರಣದಂಡನೆಗೆ ಗುರಿಯಾಗಿರುವ ಇತರರನ್ನು ಯಾಕೆ ಇಲ್ಲಿಯತನಕ ಗಲ್ಲಿಗೇರಿಸಿಲ್ಲ? ಯಾಕೆ ಅಂದರೆ ಅವರೆಲ್ಲರಿಗೆ ರಾಜಕೀಯ ಪಕ್ಷಗಳ ಬೆಂಬಲವಿದೆ ಮತ್ತು ಅವರ್ಯಾರೂ ಮುಸಲ್ಮಾನರಲ್ಲ. ಉದಾಹರಣೆಗೆ 1989ರಲ್ಲಿ ರಾಜೀವ್ ಗಾಂಧಿಯ ಕೊಲೆಯಲ್ಲಿ ಪಿತೂರಿದಾರರಾಗಿದ್ದರು ಎಂದು ಮರಣದಂಡನೆಗೆ ಗುರಿಯಾಗಿ ಜೈಲಿನಲ್ಲಿರುವ ಸಂಥಾನ್, ಮುರುಗನ್ ಮತ್ತು ಪೆರರಿವಲನ್ ಅವರನ್ನು ಗಲ್ಲಿಗೇರಿಸಿ ಎಂದು ಯಾರೂ ಆಗ್ರಹಿಸಿಲ್ಲ. (ಯಾರಿಗೂ ಮರಣದಂಡನೆಯನ್ನು ವಿಧಿಸಬಾರದೆಂಬುದು ನಮ್ಮ ತಂಡದ ನಿಲುವು.) ಬದಲಾಗಿ ತಮಿಳುನಾಡು ವಿಧಾನಸಭೆ ಆ ಮೂವರಿಗೂ ವಿಮೋಚನೆ ನೀಡಬೇಕೆಂದು ಶಿಫಾರಸ್ಸು ಮಾಡಿತ್ತು. ಜೊತೆಗೆ ಸುಪ್ರೀಂಕೋರ್ಟ್ ಕೂಡ ಅವರನ್ನು ಬಹಳಷ್ಟು ವರ್ಷಗಳ ಕಾಲ ಜೈಲಿನಲ್ಲಿಟ್ಟಿರುವುದರಿಂದ ಅವರ ಮರಣದಂಡವನ್ನು ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸಿತು. ಅದಾಗಿದ್ದೇ ತಡ ಮೂವರನ್ನೂ ಮರುದಿನವೇ ಬಿಡುಗಡೆ ಮಾಡಲು ತಮಿಳುನಾಡಿನ ಸರ್ಕಾರ ಸಜ್ಜಾಗಿತ್ತು. ಆದರ ವಿರುದ್ಧ ಯಾರೋ ಕೋರ್ಟ್ ಮುಂದೆ ಅರ್ಜಿ ಸಲ್ಲಿಸಿದ್ದರಿಂದ ಅವರೆಲ್ಲ ಈಗಲೂ ಜೈಲಿನಲ್ಲಿದ್ದಾರೆ.

ಹಾಗೆಯೇ 1995ರಲ್ಲಿ ಪಂಜಾಬಿನ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರನ್ನು ಕೊಲೆ ಮಾಡಿದ ಆರೋಪವನ್ನು ಹೊತ್ತಿರುವ ಬಲ್ವಂತ್ ಸಿಂಗ್ ಎಂಬಾತನ ಕೇಸೂ ಇದೆ. ಆತನಿಗೆ ಪಂಜಾಬಿನ ಎಲ್ಲಾ ರಾಜಕೀಯ ಪಕ್ಷಗಳ ಬೆಂಬಲ ಇರುವುದರಿಂದ ಆತನನ್ನೂ ಇಲ್ಲಿಯತನಕ ಗಲ್ಲಿಗೇರಿಸಿಲ್ಲ.

ಉತ್ತರ ಕನ್ನಡ: ಶತ್ರು ಶಾಸಕರ ಮೇಲೆ ಡಿಸಿ ಛೂಬಿಟ್ಟಿರುವ ದೇಶಪಾಂಡೆ!


ಉಜ್ವಲ್‌ಕುಮಾರ್ ಘೋಷ್


ದೇಶಪಾಂಡೆ

ಉತ್ತರ ಕನ್ನಡ ಕಾಂಗ್ರೆಸ್ ಒಳಗಿನ ಬೇಗುದಿ ಜಿಲ್ಲಾಧಿಕಾರಿ ಅಂಗಳದಲ್ಲೀಗ ಕೊತಗುಡುತ್ತಿದೆ! ಜಿಲ್ಲಾ ಉಸ್ತುವಾರಿ ಮಂತ್ರಿ ಆರ್.ವಿ. ದೇಶಪಾಂಡೆ ದಾದಾಗಿರಿಯಿಂದ ಕೆರಳಿ ಗ್ಯಾಂಗಪ್ ಆಗಿರುವ ಜಿಲ್ಲೆಯ ನಾಲ್ವರು ಕಾಂಗ್ರೆಸ್ ಶಾಸಕರು ಅಸ್ತಿತ್ವ ಉಳಿಸಿಕೊಳ್ಳಲು ಜಿಗಟು ಜಿಲ್ಲಾಧಿಕಾರಿ ಉಜ್ವಲ್‌ಕುಮಾರ್ ಘೋಷ್ ಹಠಾವೋ ಹಠಕ್ಕೆ ಬಿದ್ದಿದ್ದಾರೆ. ದೇಶಪಾಂಡೆ ಆಣತಿಯಂತೆ ಕೆಲಸ ಮಾಡುವ ಈ ಡಿಸಿ ಇಲ್ಲೇ ಉಳಿದರೆ ತಮಗೆ ಕಂಟಕ ಖಂಡಿತ ಎಂಬುದು ಪಕ್ಕಾ ಆಗಿರುವ ಕುಮಟಾ ಶಾಸಕಿ ಶಾರದಾ ಶೆಟ್ಟಿ, ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ್, ಭಟ್ಕಳದ ಮಂಕಾಳ್ ವೈದ್ಯ ಮತ್ತು ಕಾರವಾರದ ಸತೀಶ್ ಸೈಲ್ ಒಂದಾಗಿ ಆತನ ವರ್ಗಾವಣೆಗೆ ಸಾಕ್ಷಾತ್ ಸಿಎಂ ಸಿದ್ದರಾಮಯ್ಯರಿಗೇ ದುಂಬಾಲು ಬಿದ್ದಿದ್ದಾರೆ.


ಅಧಿಕಾರಶಾಹಿ ಗುಣ-ಧರ್ಮ ಒಳಗಿಟ್ಟುಕೊಂಡು ಹೊರಗೆ ಜನಪರ ಪೋಸು ಕೊಡುವ ಐಎಎಸ್ ಉಜ್ವಲ್ ಘೋಷ್ ವರ್ಗಾವಣೆ ಸುದ್ದಿ ಜಿಲ್ಲೆಯ ಉದ್ದಗಲಕ್ಕೆ ಒಂಥರಾ ಗೊಂದಲ, ಒಣಗೌಜಿ ಎಬ್ಬಿಸಿಬಿಟ್ಟಿದೆ. ಈ ವಿಲಕ್ಷಣ ಗಡಿಬಿಡಿ ಹಿನ್ನೆಲೆ-ಮುನ್ನಲೆಯಲ್ಲಿ ಮತ್ತದೇ ದೇಶಪಾಂಡೆ ಪಾಳೆಗಾರಿ ರಾಜಕಾರಣದ ಮಸಲತ್ತುಗಳು ಅಡಗಿಕುಂತಿವೆ. ಡಿಸಿಯನ್ನು ಒದ್ದೋಡಿಸಲು ಶಾಸಕ ಚತುಷ್ಟಯರು ಮುಖ್ಯಮಂತ್ರಿ ಮಟ್ಟದಲ್ಲೇ ಕಸರತ್ತು ಮಾಡುತ್ತಿದ್ದರೆ, ದೇಶಪಾಂಡೆ ತನ್ನ ಬಂಟರನ್ನು ಡಿಸಿ ಪರವಾಗಿ ಬೀದಿಗಿಳಿಸಿ ಇಲ್ಲೇ ಉಳಿಸಿಕೊಳ್ಳಲು ತಂತ್ರ ಮಾಡುತ್ತಿದ್ದಾರೆ. ದೇಶಪಾಂಡೆ ಪ್ರಚೋದಿತ ಪಹರೆ ಪರಾಕ್ರಮಿಗಳು ಡಿಸಿಗೆ ಇಲ್ಲದ ಸದ್ಗುಣ ಆರೋಪಿಸಿ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ.


ಜಿಲ್ಲಾಧಿಕಾರಿ ಉಜ್ವಲ್ ಘೋಷ್‌ಗೆ ಎರಡು ಮುಖ. ಆತ ಎಷ್ಟು ಜನ ಪರವ್ರೋ ಅಷ್ಟೇ ಹಸಿಹಸೀ ಹುಂಬ. ತಾನು ಹೇಳಿದ್ದೇ ಅಂತಿಮ ಎಂಬ ಮೊಂಡು ಸ್ವಭಾವದ ಡಿಸಿ ವಿರೋಧಿಗಳ ಹುಟ್ಟಡಗಿಸಲು ಅದೆಂಥ ಕಠಿಣ ಕಿತಾಪತಿಗೂ ಹಿಂಜರಿಯಲಾರ. ಆತನ ವಿರುದ್ಧ ತಿರುಗಿಬಿದ್ದಿರುವ ನಾಲ್ಕು ಶಾಸಕರದು ಪಕ್ಕಾ ಡಬ್ಬಲ್ ಗೇಮ್. ಅಧಿಕಾರಿಗಳನ್ನು ಅಸ್ತ್ರ ಮಾಡಿಕೊಂಡು ಆಡಳಿತಾತ್ಮಕ ರಾಜಕಾರಣ ಮಾಡುವ ದೇಶಪಾಂಡೆಯದು ಲಾಗಾಯ್ತಿನಿಂದಲೂ ವಿರೋಧಾಭಾಸದ ನೀತಿ ನಿಲುವು. ಹಾಗೆಯೇ ಡಿಸಿ ವರ್ಗಾವಣೆ ಆಗಬಾರದೆಂದು ಅಮಾಯಕ ಜನರನ್ನು ಪ್ರತಿಭಟನೆಗೆ ಪ್ರೇರೇಪಿಸಿದ ಪಹರೆ ಪುಢಾರಿ ನಾಗರಾಜ್ ನಾಯಕ್‌ಗೆ ಕಾರವಾರದ ಶಾಸಕ ಸತೀಶ್ ಸೈಲ್ ಜನದ್ರೋಹಿ ಎಂದು ಬಿಂಬಿಸಿ ಎಮ್ಮೆಲ್ಲೆ ಆಗುವ ದೂ(ರು)ರಾಲೋಚನೆ! ಒಟ್ಟಿನಲ್ಲಿ ಜಿಲ್ಲಾಧಿಕಾರಿ ವರ್ಗಾವಣೆ ಹುಯಿಲಿನಲ್ಲಿ ಹಲವು ಹಿಡನ್ ಅಜೆಂಡಾಗಳಿವೆ. ಇದೆಲ್ಲದಕ್ಕೂ ಮೂಲ ದೇಶಪಾಂಡೆ ಮತ್ತು ಆತನಿಗೆ ಸೆಡ್ಡು ಹೊಡೆದು ನಿಂತಿರುವ ನಾಲ್ವರು ಶಾಸಕರ ಒಣ ಪ್ರತಿಷ್ಠೆಯ ಮೇಲಾಟ!


ಇದಿಷ್ಟು ದೀರ್ಘ ಪೀಠಿಕೆ ಆಯ್ತು. ಈಗ ಕತೆಗೆ ಬರೋಣ. ಕಳೆದ ಲೋಕಸಭೆ ಚುನಾವಣೆಯಲ್ಲಿ ತನ್ನ ಕುಲೋದ್ಧಾರಕ ಪ್ರಶಾಂತ ದೇಶಪಾಂಡೆ ಹೀನಾಯವಾಗಿ ಸೋತ ಕ್ಷಣದಲ್ಲೇ ದೇಶಪಾಂಡೆ ಸಾಹೇಬರು ಕಾಂಗ್ರೆಸ್‌ನ ಇಬ್ಬರು ಶಾಸಕರು, ಇನ್ನಿಬ್ಬರು ಸಹ ಶಾಸಕರ ಹುಟ್ಟಡಗಿಸಿ ಸೇಡು ತೀರಿಕೆಗೆ ಪಣ ತೊಟ್ಟುಬಿಟ್ಟಿದ್ದರು. ಈ ನಾಲ್ಕು ಶಾಸಕರು ತನ್ನ ಮಗನ ಗೆಲ್ಲಿಸುವ ಪ್ರಯತ್ನವಿರಲಿ, ಸೋಲಿಸಲಿಕ್ಕೇ ಶಕ್ತಿ ಮೀರಿ ಶ್ರಮಿಸಿದ್ದಾರೆಂಬುದು ದೇಶಪಾಂಡೆ ಭಾವನೆ. ಇಲ್ಲದಿದ್ದರೆ ಅಷ್ಟು ದೊಡ್ಡ ಅಂತರದಲ್ಲಿ ತನ್ನ ಮಗ ಮಣ್ಣು ಮುಕ್ಕುತ್ತಿರಲಿಲ್ಲ ಎಂಬುದು ದೇಶಪಾಂಡೆ ವಾದ. ಲೋಕಸಭೆ ಇಲೆಕ್ಷನ್ ತರುವಾಯ ಯಲ್ಲಾಪುರದ ಹೆಬ್ಬಾರ್, ಕುಮಟೆಯ ಶಾರದಮ್ಮ ಮತ್ತು ಕಾರವಾರದ ಸೈಲ್‌ನ ಅಡಿಗಡಿಗೆ ತುಳಿಯಲು ಶುರು ಹಚ್ಚಿಕೊಂಡರು. ಆರಂಭದಲ್ಲಿ ಭಟ್ಕಳದ ದೋನಂಬರ್ ದಂಧೆ ಡಾನ್ ಮಂಕಾಳ್ ವೈದ್ಯನನ್ನು ಹತ್ತಿರ ಇಟ್ಟುಕೊಂಡಿದ್ದ ದೇಶಪಾಂಡೆ ಈ ವರ್ಷದ ಜನವರಿ ಹೊತ್ತಿಗೆ ಆತನನ್ನೂ ಹಣಿಯಲು ಆರಂಭಿಸಿದರು.

ದೇಶಪಾಂಡೆ ಶಾಸಕರ ಎದುರಾಎದುರು ನಿಂತು ಕಾಡಲೇ ಇಲ್ಲ, ಆತ ಮಂತ್ರಿಗಿರಿ ಬಲದಿಂದ ಎಲ್ಲ ಇಲಾಖೆಯ ಅಧಿಕಾರಿಗಳನ್ನು ತನಗಾಗದ ಎಮ್ಮೆಲ್ಲೆಗಳ ಮೇಲೆ ಛೂಬಿಟ್ಟರು. ತಾನು ನೇರವಾಗಿ ಯುದ್ಧಕ್ಕೆ ಇಳಿದರೆ ಶಾಸಕರು ಕ್ಷೇತ್ರದ ಜನರನ್ನು ಎತ್ತಿ ಕಟ್ಟುತ್ತಾರೆಂದು ದೇಶಪಾಂಡೆ ಅಧಿಕಾರಿಗಳನ್ನು ಅಸ್ತ್ರ ಮಾಡಿಕೊಂಡರು. ತೊಂದರೆಗೀಡಾದ ಶಾಸಕರು, ಜನಸಾಮಾನ್ಯರು ಕೇಳಿದರೆ "....... ಇದು ಜಿಲ್ಲಾಡಳಿತ ನಿರ್ಧಾರ, ಅಧಿಕಾರಿಗಳ ಆಡಳಿತಾತ್ಮಕ ಕ್ರಮ....." ಎಂದ್ಹೇಳಿ ನುಣುಚಿಕೊಂಡು ಶಾಸಕರಿಗೆ ಇನ್ನಷ್ಟು ಮುಖಭಂಗ ಸ್ವ-ಕ್ಷೇತ್ರಗಳಲ್ಲಿ ಆಗುವಂಥ ಹಿಕಮತ್ತು ನಡೆಸಿದರು ಕಂತ್ರಿ ಕಿತಾಪತಿಯಲ್ಲಿ ಮೂರುವರೆ ದಶಕದಿಂದ ಪಳಗಿರುವ ಡಾನ್ ದೇಶಪಾಂಡೆ!!


ಶಾರದಾ ಶೆಟ್ಟಿ


ಮಂಕಾಳ್ ವೈದ್ಯ


ಸತೀಶ್ ಸೈಲ್


ಶಿವರಾಮ ಹೆಬ್ಬಾರ್

ದೇಶಪಾಂಡೆಯ ಈ "ವಾಲಿ ವಧೆ" ಕಾರ್ಯಾಚರಣೆಯಿಂದ ಶಾಸಕ ಚತುಷ್ಟಯರು ಚಡಪಡಿಸತೊಡಗಿದರು; ತಂತಮ್ಮ ಕ್ಷೇತ್ರದಲ್ಲಿ ಅವಮಾನ ಅನುಭವಿಸುವಂತಾಯ್ತು. ಅಧಿಕಾರಿಗಳಿಗೆ ಮಾತು ಹೇಳಿಸಲಾಗದೆ ಕ್ಷೇತ್ರದ ಜನರೆದುರು ತಲೆ ತಗ್ಗಿಸುವಂತಾಯ್ತು, ಹೇತ್ಲಾಂಡಿ ಶಾಸಕ ಎಂದು ಜನ ಮೂದಲಿಸುವುದು ಕಿವಿಗೆ ಬೀಳಹತ್ತಿತು. ಆದರೆ ಯಾರಿಗೂ ದೇಶಪಾಂಡೆ ವಿರುದ್ಧ ಸೆಟೆದು ನಿಲ್ಲುವ ಧೈರ್ಯ ಮಾತ್ರ ಬರಲೇ ಇಲ್ಲ. ಪರಸ್ಪರರು ಸಿಕ್ಕಾಗ ದೇಶಪಾಂಡೆ ದೋಖಾದ ಬಗ್ಗೆ ಮಾತಾಡಿಕೊಂಡರೆ ಹೊರತು ಏನೂ ಮಾಡಲಾಗಲಿಲ್ಲ. ದೇಶಪಾಂಡೆ ವಿರುದ್ಧ ಒಳಗೊಳಗೇ ಹಲ್ಲು ಮಸೆಯುತ್ತಿದ್ದ ಶಾಸಕರನ್ನು ಒಂದುಗೂಡಿಸುವ ಯೋಚನೆ ಯಲ್ಲಾಪುರದ ಎಮ್ಮೆಲ್ಲೆ ಶಿವರಾಮ ಹೆಬ್ಬಾರ್‌ಗೆ ಬಂತು. ಆತ ಅತೃಪ್ತ ಆತ್ಮಗಳ ನಾಯಕತ್ವ ವಹಿಸಿದರು.

ಹೆಬ್ಬಾರ್ ಹೇಳಿಕೇಳಿ ದೇಶಪಾಂಡೆಯ ಕಡುಶತ್ರು ಮಾರ್ಗರೆಟ್ ಆಳ್ವರ ಶಿಷ್ಯ. ಆತ ಶಾಸಕನಾಗುವ ಮೊದಲಿಂದಲೂ ದೇಶಪಾಂಡೆ ಕೆಂಗಣ್ಣಿಗೆ ತುತ್ತಾದವರು; ಶಾಸಕನಾದ ನಂತರ ದೊರೆಯ ಕಾಟ ತಾಳಲಾಗದೆ ಕಂಗಾಲಾದರು. ಈ ಹೆಬ್ಬಾರ್ ಸಮಯ ಸಿಕ್ಕಾಗೆಲ್ಲ ಸಿಎಂ ಸಿದ್ದು ಅಂತಃಪುರಕ್ಕೆ ಹೋಗಿ ದೇಶಪಾಂಡೆಯ ದೌರ್ಜನ್ಯದ ಪುರಾಣ ಹೇಳಿಬರುವುದು ರೂಢಿಸಿಕೊಂಡರು. ದೇಶಪಾಂಡೆಯ ವ್ಯಾಪಾರಿ ರಾಜಕಾರಣದಿಂದ ಹೈಕಮಾಂಡ್‌ನಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಸಿದ್ದುಗೆ ಆತನೆಂದರೆ ಒಂಥರಾ ಅಲರ್ಜಿ. ಹೀಗಾಗಿ ಹೆಬ್ಬಾರ್‌ಗೆ ಸಿದ್ದು ರಹಸ್ಯವಾಗಿ ಸಪೋರ್ಟ್ ಮಾಡುತ್ತ ಬಂದರು. ಯಾವಾಗ ಸಾಕ್ಷಾತ್ ಸಿಎಂ ಸಾಹೇಬರದೇ ಕೃಪಾಕಟಾಕ್ಷ ಸಿಕ್ಕಿತೋ ಆಗ ಹೆಬ್ಬಾರ್, ದೇಶಪಾಂಡೆ ಎದುರು ನಿಂತು ತೊಡೆ ತಟ್ಟತೊಡಗಿದರು. ತನ್ನ ತಾಕತ್ತೇನೆಂದು ಕೆಡಿಸಿಸಿ ಬ್ಯಾಂಕ್ ನಿರ್ದೇಶಕರು, ಅಧ್ಯಕ್ಷ ಮತ್ತು ಅಪೆಕ್ಸ್ ಬ್ಯಾಂಕ್ ಪ್ರತಿನಿಧಿ ಆಯ್ಕೆ ಹೊತ್ತಲ್ಲಿ ತೋರಿಸಿದರು. ಹೆಬ್ಬಾರ್ ಉಳಿದ ಮೂರು ಶಾಸಕರ ಬೆಂಬಲದಿಂದ ದೇಶಪಾಂಡೆ ವಿರುದ್ಧ ಕಾರ್ಯಾಚರಣೆ ಮಾಡಿ ಗೆದ್ದರು; ದೇಶಪಾಂಡೆಯ ವೈರಿ-ಎಮ್ಮೆಲ್ಸಿ ಎಸ್.ಎಲ್. ಘೋಟನೇಕರ್‌ನ ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ ಪಟ್ಟಕ್ಕೇರಿಸಿದ ಬಂಡಾಯ ಶಾಸಕರು, ಹೆಬ್ಬಾರನನ್ನು ಅಪೆಕ್ಸ್ ಬ್ಯಾಂಕ್‌ಗೆ ಕಳಿಸಿದರು. ದೇಶಪಾಂಡೆ ಹಿಂಬಾಲಕರೆಲ್ಲ ಸಾಲಾಗಿ ನೆಲಕಚ್ಚಿದರು.

ಕೆಡಿಸಿಸಿ ಬ್ಯಾಂಕ್ ಇಲೆಕ್ಷನ್‌ನಲ್ಲಿ ಒಂದಾಗಿ ತನಗೆ ಮಣಿಸಿದ ಹೆಬ್ಬಾರ್, ಶಾರದಾ ಶೆಟ್ಟಿ, ಸೈಲ್, ವೈದ್ಯ ಮತ್ತು ಘೋಟನೇಕರ್ ಸಂಹಾರಕ್ಕೆ ದೇಶಪಾಂಡೆ ಸ್ಕೆಚ್ ಹಾಕಿದರು. ಅವರವರ ಕ್ಷೇತ್ರದಲ್ಲಿ ಮಕಾಡೆ ಮಲಗಿಸಿ ಜನರಿಂದ ಥೀ-ಥೂ ಮಾಡಿಸುವ ಪ್ಲಾನ್ ಆತನದಾಗಿತ್ತು. ಅದಕ್ಕೀತ ಜಿಲ್ಲಾಧಿಕಾರಿ ಉಜ್ವಲ್ ಕುಮಾರ್ ಘೋಷರನ್ನು ಬಳಸಿಕೊಂಡರು. ಕೆಲಸ ಮಾಡುವ ಉತ್ಸಾಹದ ಜೊತೆಗೇ ಐಎಎಸ್ ಅಧಿಕಪ್ರಸಂಗ ಮೈಗೂಡಿಸಿಕೊಂಡಿರುವ ಘೋಷ್ ಸ್ವಭಾವವನ್ನು ದೇಶಪಾಂಡೆ ತನ್ನ ರಾಜಕಾರಣಕ್ಕೆ ಅಸ್ತ್ರ ಮಾಡಿಕೊಂಡರು. ಕಾಂಗ್ರೆಸ್‌ನ ನಾಲ್ಕು ಎಮ್ಮೆಲ್ಲೆ, ಒಬ್ಬ ಎಮ್ಮೆಲ್ಸಿ ಕಂಡರೆ ತಾತ್ಸಾರದಿಂದ ಮೂಗು ಮುರಿಯುವುದನ್ನು ಘೋಷ್ ರೂಢಿಸಿಕೊಂಡರು. ದೇಶಪಾಂಡೆಯ ಸನ್ಮಿತ್ರ-ಬಿಜೆಪಿಯ ಶಾಸಕ ಕಾಗೇರಿಗೆ ಡಿಸಿಯಿಂದ ಸಿಗುತ್ತಿದ್ದ ಮರ್ಯಾದೆಯ ಕಾಲುಭಾಗವೂ ಈ ಕಾಂಗ್ರೆಸ್‌ನ ಪಂಚಮರಿಗೆ ದೊರಕದಾಯ್ತು!


ಕ್ಷೇತ್ರದ ಕಾಮಗಾರಿ ಹಂಚುವಾಗ ದೇಶಪಾ[illegible] ವಿರೋಧಿ ಶಾಸಕರನ್ನು ಕಡೆಗಣಿಸಿದ ಡಿಸಿ ಶಾಸಕರ [illegible] ಬಳಿಕೆಯಲ್ಲಿ ಅವರ ಶಿಫಾರಸ್ಸುಗಳಿಗೆ ಅಡ್ಡಗಾಲು ಹಾಕಿದ[illegible] ಪ್ರವಾಹನಿಧಿ ಮುಂತಾದ ಅನುದಾನ ಬಳಕೆಯಲ್ಲಿ [illegible] ಭನ್ನಮತೀಯರಿಗೆ ಡಿಸಿ ಕಿಮ್ಮತ್ತು ಕೊಡಲಿಲ್ಲ. ಈ ಐಎ[illegible] ಕರ್ಮಚಾರಿಯ ನೌಕರಿ ಟ್ರ್ಯಾಕ್ ನೋಡಿದರೆ [illegible] ಜನಾನುರಾಗಿ ಎನಿಸಿಕೊಂಡಿದ್ದಕ್ಕಿಂತ ಜಗಳಗ[illegible] ಅನ್ನಿಸಿಕೊಂಡಿದ್ದು ಕಾಣಿಸುತ್ತದೆ. ಬೀದರ್ ಜಿ[illegible] ಪಂಚಾಯ್ತಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ[illegible] ದ್ದಾಗ ಶಾಸಕನೊಬ್ಬನ ಜೊತೆ ಜಂಗೀಕುಸ್ತಿ ಮಾಡಿ ಘೋ[illegible] ಹೆಸರುವಾಸಿ ಆಗಿದ್ದರು. ಹಾಗೆಯೇ "ಗಾಂಧಿ [illegible] ಸಾಫ್ಟ್‌ವೇರ್" ತಯಾರಿಕೆಯ ಭ್ರಷ್ಟಾಚಾರದಲ್ಲೂ ಈ[illegible] ಹೆಸರು ಕೇಳಿಬಂದಿತ್ತು!

ಅವಿವಾಹಿತನಾಗಿರುವ ಈ ತರುಣನ ಮದ[illegible] ಸಧ್ಯದಲ್ಲೇ ನಡೆಯಲಿದೆಯಂತೆ. ವಧು ಕೂಡ ಐಎ[illegible] ಅಧಿಕಾರಿಣಿ. ಈಕೆ ಆಗಾಗ ಕಾರವಾರ, ಭಟ್ಕಳ, ಮುರ್ಡೇ[illegible] ಸರ್ಕಾರಿ ಅತಿಥಿಗೃಹಕ್ಕೆ ಬಂದು ತಂಗುವುದು, ಅಲ್ಲಿ ಘೋ[illegible] ಕಾಣಿಸಿಕೊಳ್ಳುವುದು ಬಹಿರಂಗ ರಹಸ್ಯ. ಘೋ[illegible] ಗುಟ್ಟುಗಳೆಲ್ಲ ಬಲ್ಲ ದೇಶಪಾಂಡೆ ತನ್ನ ಹಿಡನ್ ಹಿಕ[illegible] ಈಡೇರಿಸಿಕೊಳ್ಳಲು ಆತನನ್ನು ಸಂದರ್ಭಕ್ಕೆ ತಕ್ಕಂತೆ ಪ್ರಯೋ[illegible] ಸುತ್ತಿದ್ದಾರೆ. ದೇಶಪಾಂಡೆಯ ಹುನ್ನಾರಗಳು ಅರ್ಥವಾ[illegible] ಪೆದ್ದು ಘೋಷ್ ಬಲಿಯಾಗುತ್ತಿರುವುದು ದುರಂತ!

ದೇಶಪಾಂಡೆಯ ಸೂತ್ರದಬೊಂಬೆಯಂತಾಗಿರುವ[illegible] ಘೋಷ್‌ರ ಕಾರ್ಯವೈಖರಿಯಿಂದ ಪೇಚಿಗೆ ಸಿಲುಕಿ[illegible] ಪಂಚ ಶಾಸಕರು ಕಳೆದ ಮಾರ್ಚ್ ಹೊತ್ತಿಗೇ [illegible] ವರ್ಗಾವಣೆಗೊಂದು ಪ್ರಯತ್ನ ನಡೆಸಿದ್ದರು. ತಮ್ಮ ಮ[illegible] ಕೇಳದ, ತಮಗೆ ಬುದ್ಧಿಪೂರ್ವಕ ಹಾನಿಯೇ [illegible] ಮಾಡುತ್ತಿರುವ ಜಿಲ್ಲಾಧಿಕಾರಿಯನ್ನು ಉತ್ತರ ಕನ್ನಡ[illegible] ಓಡಿಸುವಂತೆ ಪಂಚ ಶಾಸಕರು ಸಿಎಂ, ಕಂದಾಯ ಮ[illegible] ಶ್ರೀನಿವಾಸ್ ಪ್ರಸಾದ್‌ರನ್ನು ಬೇಡಿಕೊಂಡಿದ್ದರು. ಕಳೆದ [illegible] ಈ ಶಾಸಕರಿಗೆ ಡಿಸಿ ವಿರುದ್ಧ ದೂರಲು ಮುಹೂ[illegible] ಒಂದು ಸಿಕ್ಕಿತ್ತು. ಜಿಲ್ಲೆಯ ಅಭಿವೃದ್ಧಿ ಬಗ್ಗೆ ದೇಶಪಾ[illegible] ಶಾಸಕರೊಂದಿಗೆ ಸಿಎಂ ಭೇಟಿಗೆ ಮೊನ್ನೆ ಹೋಗಿ[illegible] ಆ ಹೊತ್ತಲ್ಲಿ ಪಂಚ ಶಾಸಕರು ಡಿಸಿಯಿಂದ ತಮಗಾಗುತ್ತಿ[illegible] ಕಷ್ಟ-ನಷ್ಟದ ಕತೆ ಹೇಳಿದ್ದಾರೆ. ತಕ್ಷಣ ಆ[illegible] ವರ್ಗಾಯಿಸುವಂತೆ ಕೇಳಿದ್ದಾರೆ.

ಆಗ ದೇಶಪಾಂಡೆ ಡಿಸಿ ಪರ ವಕಾಲತ್ತು ಮಾಡಿ[illegible] ಆತ ಕೆಲಸಗಾರ. ಒಂದಿಷ್ಟು ಪ್ರಗತಿ ಕಾಮಗಾರಿಗೆ [illegible] ಕೈಹಾಕಿದ್ದಾರೆ. ಇಂಥ ಹೊತ್ತಲ್ಲಿ ವರ್ಗಾಯಿಸಿದರೆ ಅಭಿ[illegible] ಕೆಲಸ ಕುಂಠಿತವಾಗುತ್ತದೆ. ಸದ್ಯಕ್ಕೆ ವರ್ಗಾವಣೆ [illegible] ಎಂದು ದೇಶಪಾಂಡೆ ಸಿಎಂಗೆ ಪರಿಪರಿಯಾಗಿ ವಿನಂತಿಸಿ[illegible] ದೇಶಪಾಂಡೆಗಿಂತ ಶಾಸಕ ಹೆಬ್ಬಾರ್‌ಗೆ ಹೆಚ್ಚು ಹತ್ತಿರವಿ[illegible] ಸಿಎಂ ಒಂದು ಹಂತದಲ್ಲಿ ಡಿಸಿ ಎತ್ತಂಗಡಿಗೆ ರೆಡಿ[illegible] ಆಗಿದ್ದರಂತೆ. ಆದರೆ ದೇಶಪಾಂಡೆಯ ಸೀನಿಯಾರಿ[illegible] ಮಾತುಗಾರಿಕೆಗೆ ಸಿಎಂ ಸುಮ್ಮನಾದರಂತೆ. ಆದರೆ [illegible] ದಿನಗಳ ನಂತರ ಡಿಸಿ ವರ್ಗಾವಣೆ ಮಾಡುವ ಆ[illegible] ರೆಬೆಲ್ ಎಮ್ಮೆಲ್ಲೆಗಳಿಗೆ ಸಿಎಂ ಕೊಟ್ಟಿದ್ದಾರೆ. ಹಾಗೆ[illegible]


ಡಿಸಿ ಪರವಾಗಿ ಪ್ರತಿಭಟನೆ.....



ನಾಗರಾಜ್ ನಾಯಕ್

...ಯಲ್ಲೇ ಡಿಸಿಯನ್ನು ದೇಶಪಾಂಡೆ ಹಠ ಹಿಡಿದು ...ಸಿಕೊಂಡರೆ ವಿಧಾನಸಭೆಯಲ್ಲಿ ಡಿಸಿ ವಿರುದ್ಧ ಹಕ್ಕುಚ್ಯುತಿ ...ಡಿಸುವುದಾಗಿ ಪಂಚ ಪರಾಕ್ರಮಿಗಳು ಧಮಕಿಯೂ ...ಹಾಕಿದ್ದಾರೆ.

...ಬೆಂಗಳೂರಿನಲ್ಲಾದ ಈ ಡಿಸಿ ವರ್ಗಾವಣೆ ಮಾತುಕತೆ ...ದಿನವೇ ಅಂದರೆ ಜುಲೈ 7ರ ಶುಕ್ರವಾರವೇ ಜಿಲ್ಲೆಯಲ್ಲಿ ...'ಯಾಗಿದೆ. ಜನಾನುರಾಗಿ ಜಿಲ್ಲಾಧಿಕಾರಿಯನ್ನು ಎತ್ತಂಗಡಿ ...ಡಲು ಆಡಳಿತಾರೂಢ ಕಾಂಗ್ರೆಸ್‌ನ ಶಾಸಕರು ಸಂಚು ...ಡಿದ್ದಾರೆಂಬಂತೆ ಒಂದು ತಂಡ ಹುಯಿಲೆಬ್ಬಿಸಿತು. ...ರಿಂದ ದೊಡ್ಡ ಇಕ್ಕಟ್ಟಿಗೆ ಸಿಲುಕಿದ್ದು ಕಾರವಾರದ ...ಕ ಸತೀಶ್ ಸೈಲ್. ಕ್ಷೇತ್ರದಲ್ಲಿ ಆತನ ಬಗ್ಗೆ ಅಪನಂಬಿಕೆ, ...ಪ್ರಚಾರವಾಗಿ ಭರ್ಜರಿ ಡ್ಯಾಮೇಜ್ ಆಗುವಂತಾಯ್ತು. ...ರೆ ಕುಮಟಾದ ಶಾರದಾ ಶೆಟ್ಟಿ, ಭಟ್ಕಳದ ವೈದ್ಯ ...ತ್ತು ಯಲ್ಲಾಪುರದ ಹೆಬ್ಬಾರ್ ಕ್ಷೇತ್ರದಲ್ಲಿ ಅಂಥ ...ಹುತ'ವೇನೂ ಆ ಮೂವರಿಗೆ ಆಗಲಿಲ್ಲ. ಮಜಾ ...ದರೆ ಬೆಂಗಳೂರಲ್ಲಿ ಸಿಎಂ ಎದುರು ಡಿಸಿ ಘೋಷ್ ...ರ್ಗಾವಣೆಗೆ ರಚ್ಚೆ ಹಿಡಿದು ಕೂತಿದ್ದ ಈ ನಾಲ್ಕು ಶಾಸಕರು ...ರಲ್ಲಿ ಮಾತ್ರ ಅಂಥ ಕೆಲಸಕ್ಕೆ ಕೈ ಹಾಕೇ ಇಲ್ಲ ಎಂದು ...ದ ತಲೆ ಮೇಲೆ ಹೊಡೆದಂತೆ ಆಣೆ ಭಾಷೆ ಹಾಕಿ ...ಶಾವಾದರು.

...ಪೀಕಲಾಟ ಶುರುವಾಗಿದ್ದು ಮಾತ್ರ ಕಾರವಾರ ಶಾಸಕ ...ತೀಶ್ ಸೈಲ್‌ಗೆ! ಜಿಲ್ಲಾ ಕೇಂದ್ರವಾದ ಕಾರವಾರದಲ್ಲಿ ...ಯ ಶಾಸಕ ಪ್ರತಿದಿನ ಎಂಬಂತೆ ಡಿಸಿ ಜತೆ ...ಮುಖಾಮುಖಿಯಾಗುವಂತಾಗುತ್ತದೆ. ಡಿಸಿ ಜತೆ ಇತರ ...ಸಕರಿಗೆ ಭಿನ್ನಾಭಿಪ್ರಾಯವಿದ್ದರೂ ಜಿಲ್ಲಾ ಕೇಂದ್ರ ಶಾಸಕನಂತೆ ...ದರೆಲ್ಲ ಒಂದೇಟಿಗೆ ಸಿಕ್ಕಿ ಹಾಕಿಕೊಳ್ಳುವುದಿಲ್ಲ. ಆದರೆ ...ವಾರದ ಶಾಸಕ ಸೈಲ್ ಪಾಡು ಹೇಳತೀರದು. ಅದರಲ್ಲೂ ...ಶಪಾಂಡೆ ಗ್ಯಾಂಗ್ ಈ ಸೈಲ್‌ನ ಸೊಂಟ ಮುರಿಯಲು ...ಸನ್ನದ್ಧವಾಗಿರುತ್ತದೆ. ಶುಕ್ರವಾರ ಡಿಸಿ ವರ್ಗಾವಣೆ ...ಸ್ಥಾನದಲ್ಲಿ ಸೈಲ್‌ದು ದೊಡ್ಡ ಪಾತ್ರವಿದೆ ಎಂಬಂತೆ ...ತವಾಗಿಹೋಗಿತ್ತು, ಹಾಗೆಂದು ಆತನ ಹಿತಶತ್ರುಗಳಾದ ...ಖಾ ಕಂಟ್ರಾಕ್ಟರ್ ಶಿವಪ್ರಸಾದ್, ಪಹರೆ ವೇದಿಕೆಯ ...ಗರಾಜ ನಾಯಕ್.... ಮುಂತಾದವರು ಬಿಂಬಿಸಿದ್ದರು. ...ಪಹರೆಯವರು ಡಿಸಿ ಉಳಿಸಿಕೊಳ್ಳಲು ಪ್ರತಿಭಟನೆ ...ಸುವುದಾಗಿಯೂ ಘೋಷಿಸಿದರು.

...ಹೀಗಾಗಿ ಕಂಗಾಲು ಬಿದ್ದ ಸೈಲ್ ಬೆಂಗಳೂರಿಂದ ...ತೋರಾತ್ರಿ, ಕಾರವಾರಕ್ಕೆ ಓಡಿಬಂದರು. ಬೆಳಗು ...ಯುತ್ತಲೇ ಲಗುಬಗೆಯಲ್ಲಿ ಪತ್ರಿಕಾಗೋಷ್ಠಿ ಕರೆದರು. ...ನು ಡಿಸಿ ವರ್ಗಾವಣೆ ಪ್ರಯತ್ನ ಮಾಡಿಲ್ಲ, ಡಿಸಿ ಘೋಷ್ ...ತೆ ಆಡಳಿತಾತ್ಮಕವಾಗಿ, ವೈಯಕ್ತಿಕವಾಗಲಿ ದ್ವೇಷವಿಲ್ಲ, ...ರು ಜಿಲ್ಲೆಯಿಂದ ಹೋಗಬೇಕೆಂದು ನಾನು ಬಯಸಿಲ್ಲ, ...ರ ವರ್ಗಾವಣೆ ಬೇಡವೆಂದು ಸಿಎಂಗೆ ಪತ್ರ ಬರೆದಿದ್ದೇನೆ ...ದು ಪತ್ರವನ್ನು ತೋರಿಸಿದರು. ಜನರಿಗೆ ಗೊಂದಲವೋ ...ಗೊಂದಲ. ಯಾರನ್ನು ನಂಬೋದು? ಶಾಸಕ ಸತೀಶ್ ...ರನ್ನಾ? ಅಥವಾ ಪಹರೆ ಪುಢಾರಿಗಳನ್ನಾ? ಅಂತೂ ...ರೆ ಮುಂದಾಳತ್ವದಲ್ಲಿ ಡಿಸಿ ಉಳಿಸಿಕೊಳ್ಳುವ ರ್‍ಯಾಲಿ ...ವಾರದಲ್ಲಿ 27ರಂದು ನಡೆದೇಹೋಯಿತು. ಮಜಾ ...ದರೆ ಶಾಸಕ ಸೈಲನೂ ಈ ಪ್ರತಿಭಟನೆಯಲ್ಲಿದ್ದರು. ...ರೆಯವರಿಗೆ ಮುಜುಗರ. ಜನರಿಗೆ ಶಾಸಕರ ಬಗ್ಗೆ, ...ಮುಂದೆ ಶಾಸಕನಾಗುವ ಹವಣಿಲ್ಲಿರುವವರ ಬಗ್ಗೆ ಅನುಮಾನ ...ಮೂಡಿದ್ದೂ ಸುಳ್ಳಲ್ಲ!!

...ಕಾರವಾರದಲ್ಲಿ ಆಗಿದ್ದು ಡಿಸಿ ಪರ ಪ್ರತಿಭಟನೆ ಎಂದು ...'ಹೋರಾಟಗಾರರು' ಹೇಳಿದರೂ ಇದೊಂದು ಸೈಲ್ ...ವಿರೋಧಿ ಭಾವನೆಗೆ ಬೆಂಕಿ ಹಚ್ಚುವ ಕಂತ್ರಿ ಕಸರತ್ತು! ಈ ...ಪ್ರತಿಭಟನೆ ಹಿಂದೊಂದು ರಹಸ್ಯವಿದೆ. ಡಾನ್ ದೇಶಪಾಂಡೆ ...ಪ್ರಾಯೋಜಿತ ಸಂಘಟಿಸಿದ್ದ ಪ್ರತಿಭಟನೆಯಿದು. ಹಿಂದೆ ...ಜೋಯಿಡಾದ ಶಾಸಕ ಸುನಿಲ್ ಹೆಗಡೆ ವಿರುದ್ಧ 'ಜನಶಕ್ತಿ ...ವೇದಿಕೆ'ಯ ಮಾಧವ ನಾಯ್ಕರನ್ನು ಛೂಬಿಟ್ಟಂತೆಯೇ

ಸೈಲ್ ಮೇಲೆ 'ಪಹರೆ'ಯ ನಾಗರಾಜ ನಾಯಕ್‌ರನ್ನು ದೇಶಪಾಂಡೆ ದಾಳಿಗಿಳಿಸಿದ್ದಾರಷ್ಟೇ! ಇಬ್ಬರಿಗೂ ಎಮ್ಮೆಲ್ಲೆ ಆಗುವ ಕನಸು. ಇಂಥ ಹಪಾಹಪಿಯವರನ್ನು ಹೇಗೇಗೆ ಬಳಸಿಕೊಳ್ಳಬೇಕೆಂಬುದು ಪಳಗಿದ ರಾಜಕಾರಣಿ ದೇಶಪಾಂಡೆಗೆ ಗೊತ್ತು ಬಿಡಿ!

'ಪಹರೆ' ಬೆನ್ನಿಗೆ ಕಳ್ಳ ಕಂಟ್ರಾಕ್ಟರ್ ಶಿವಪ್ರಸಾದ್ ನಿಂತಿದ್ದಾನೆ. ಈತ ದೇಶಪಾಂಡೆಯ ಗತಿಗೇಡಿ ದಿನಗಳಲ್ಲಿ ಫೈನಾನ್ಶಿಯರ್ ಆಗಿದ್ದ ತಮಿಳು ಕಂಟ್ರಾಕ್ಟರ್ ಜಿ.ಕೆ. ರಾಮ್‌ರ ಸುಪುತ್ರ. ರಾಮ್ ಗತಿಸಿದ ಬಳಿಕ ಶಿವಪ್ರಸಾದ್ ಆತನ ಕಂಟ್ರಾಕ್ಟ್ ಸಾಮ್ರಾಜ್ಯದ ದೊರೆಯಾದ. ಅರ್ಥಾತ್ ದೇಶಪಾಂಡೆಯ ಆಯ್ದ ನಂಬಿಗಸ್ಥ ಗುತ್ತಿಗೆದಾರರಲ್ಲಿ ಒಬ್ಬನಾಗಿ ಹೋದ. ಈತ ಅಕ್ರಮ ಜಲ್ಲಿ ಮಾಫಿಯಾದ ಕಿಂಗ್‌ಪಿನ್ ಬೇರೆ. ಇಂಥ ಶಿವಪ್ರಸಾದ್ ಮತ್ತು ಶಾಸಕ ಸೈಲ್‌ಗೆ ಈಚೆಗೆ ಬದ್ಧ ವೈರತ್ವ ಶುರುವಾಗಿದೆ. ಇದಕ್ಕೆ ಕಾರಣ ಆತನಿಂದಲೂ ಸೈಲ್ ಕಾಮಗಾರಿಯಲ್ಲಿ ಪರ್ಸೆಂಟೇಜ್ ಕೇಳಿದ್ದು. ಇದು ದೇಶಪಾಂಡೆವರೆಗೂ ಹೋಯಿತು. ತನ್ನ ಪರಮಾಪ್ತನಿಂದಲೂ ಸೈಲ್ ಕಾಸು ಕೇಳಿದ್ದು ದೇಶಪಾಂಡೆ ತಲೆ ಕೆಡಿಸಿತು.

ಈ ಶಿವಪ್ರಸಾದ್ ಕಾರವಾರದ ಅನಧಿಕೃತ ಶಾಸಕನಂತಾಗಿ ಹೋಗಿದ್ದಾನೆ ದೇಶಪಾಂಡೆ ದಯೆಯಿಂದ. ಸೈಲ್ ಬಗ್ಗೆ ದೊರೆಗೆ ಚಾಡಿ ಹೇಳುವ ಕೆಲಸ ನಿಯತ್ತಿನಿಂದ ಶಿವಪ್ರಸಾದ್ ಮಾಡುತ್ತಿದ್ದಾನೆ. ದೇಶಪಾಂಡೆ-ಸೈಲ್ ನಡುವಿನ ವೈಮನಸ್ಯ ಹೆಚ್ಚಾಗಲು ಶಿವಪ್ರಸಾದ್‌ನ ಕಂಟ್ರಾಕ್ಟರಿಕೆ ದಂಧೆಯ ರಹಸ್ಯ ನೀತಿಯೇ ಪ್ರಮುಖ ಕಾರಣ ಎನ್ನುವವರೂ ಇದ್ದಾರೆ. ಶಿವಪ್ರಸಾದ್ ಮತ್ತು ಪಹರೆ ನಾಗರಾಜ್ ನಾಯಕ್ ಗಳಸ್ಯ-ಕಂಠಸ್ಯ ಮಿತ್ರರು. ನಾಗರಾಜ್‌ಗೆ ತಾನು ಜನಪರ, ರೈತಪರ, ಪರಂಪರೆ ಪರ ಹೋರಾಡುವ 'ಆಮ್ ಆದ್ಮಿ' ಎಂದು ತೋರಿಸಿಕೊಳ್ಳುವ ತೆವಲು. ಜಿಲ್ಲೆಗೆ ಬರುವ ಡಿಸಿಗಳ ಸಖ್ಯ ಕುದುರಿಸಿಕೊಳ್ಳುವ ನಾಗರಾಜ್ ತನ್ನ ಸಂಘಟನೆಯ ಕಾರ್ಯಕ್ರಮಕ್ಕೆ ಅವರನ್ನು ಕರೆದೊಯ್ದು 'ಸುದ್ದಿ' ಆಗುತ್ತಾರೆ. ಅಮರ ನಾರಾಯಣ, ಕೃಷ್ಣಯ್ಯ, ಚೆನ್ನಪ್ಪ ಗೌಡ.... ಮುಂತಾದವರನ್ನು ಜನಪರ ಜಿಲ್ಲಾಧಿಕಾರಿಗಳೆಂದು ಥೇಟ್ ಉಜ್ವಲ್ ಘೋಷ್‌ರ ತಾರೀಪು ಮಾಡಿದಂತೆಯೇ ಪಹರೆ ಪಟಾಲಮ್ ಹಾಡಿ ಹೊಗಳಿತ್ತು. ಅಧಿಕಾರಶಾಹಿಗೆ ಇನ್ನೊಂದು ಭಯಾನಕ ವಿಕೃತ ಮುಖವಿರುವುದು ಪಹರೆ ಪೆದ್ದುಗಳಿಗೆ ಯಾವಾಗ ಗೊತ್ತಾಗುವುದೋ?

ನಾಗರಾಜ್ ನಾಯಕ್ ಗೋಲ್‌ಮಾಲ್ ಗುತ್ತಿಗೆದಾರ ಶಿವಪ್ರಸಾದ್ ಸಖ್ಯದಿಂದಾಗಿ ಮಂತ್ರಿ ದೇಶಪಾಂಡೆಗೂ ಪರಮಾಪ್ತರಾಗಿದ್ದಾರೆ. ಮುಂದೊಂದು ದಿನ ಕಾರವಾರದ ಶಾಸಕನಾಗುವ ಗುರಿ ಇಟ್ಟುಕೊಂಡು ಪಹರೆ ಪ್ರೋಗ್ರಾಂ ನಡೆಸುತ್ತಿರುವ ಈತ ನಿಗಮ-ಮಂಡಳಿ-ಸ್ಥಾನ-ಮಾನಕ್ಕೆ ಒಂದು ಪ್ರಯತ್ನವೂ ಮಾಡಿಯಾಗಿದೆ. ಅದ್ಯಾಕೋ ದೇಶಪಾಂಡೆ ಸಾಹೇಬರಿಂದ ಚಾನ್ಸ್ ಕೊಡಿಸಲಾಗಿಲ್ಲ. ಯೂಸ್ ಅಂಡ್ ಥ್ರೋ ಧೋರಣೆಯ ದೇಶಪಾಂಡೆ ನಾಗರಾಜ ನಾಯಕರನ್ನು ಎಲ್ಲಿಗೆ ತಂದು ನಿಲ್ಲಿಸುತ್ತಾರೋ?! ಇಲ್ಲೊಂದು ಸೂಕ್ಷ್ಮವಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರಶಾಹಿಯನ್ನು ಹೊಗಳಿ ಜನ ಪ್ರತಿನಿಧಿಗಳನ್ನು ಹೀಯಾಳಿಸುವುದು ಅಪಾಯಕಾರಿ. ಜನಪ್ರತಿನಿಧಿಗಳಿಗೆ ಐದು ವರ್ಷ ಅಕೌಂಟೆಬಿಲಿಟಿಯಾದರೂ ಇರುತ್ತದೆ. ಅಧಿಕಾರಶಾಹಿಯನ್ನು ಅಟ್ಟಕ್ಕೇರಿಸಿದರೆ ಇಳಿಸುವುದು ಕಷ್ಟ. ಅದರಲ್ಲೂ ಐಎಎಸ್, ಪೊಲೀಸ್ ಅಧಿಕಾರಿಗಳನ್ನು ತಲೆಯ ಮೇಲೆ ಹೊತ್ತುಕೊಳ್ಳುವುದು ಹುಲಿ ಸವಾರಿಯೇ ಸರಿ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂಥವನೇ ಅಧಿಕಾರಿ ಬೇಕೆಂದು ಆಗ್ರಹಿಸುವುದೇ ತಪ್ಪು, ಎಂಥವನೇ ಬಂದರೂ ಆತನನ್ನು ಜನಪರವಾಗಿ ಪಳಗಿಸಲು ಪಹರೆ ನಿಲ್ಲಬೇಕು. ಆಗ ಆಡಳಿತ ವ್ಯವಸ್ಥೆ ಹಳಿಗೆ ಬರಬಹುದು. ಒಂದೇ ಮುಖ ನೋಡಿ ಅಧಿಕಾರಿಗಳನ್ನು ಹೊಗಳುವುದು ಜನರಿಗೆ ತೊಂದರೆ ಕಾರಣವಾಗುವ ಅಪಾಯವೂ ಇದೆ. ಜನನಿಷ್ಠೆ ಕಾನೂನುನಿಷ್ಠೆ, ಅಧಿಕಾರಿಯೊಬ್ಬನ ಆದ್ಯ ಕರ್ತವ್ಯ ಹೊಣೆಗಾರಿಕೆಯೇ ಹೊರತು ಸಾಧನೆ, ಸಾಹಸ ಅಲ್ಲ. ಅದಿರಲಿ, ಡಿಸಿ ಘೋಷ್ ಡಿಸೆಂಬರ್‌ನಲ್ಲಿ ಕಾರವಾರ ಬಿಟ್ಟು ಬೆಂಗಳೂರು ಸೇರುವ ಯೋಚನೆ ಹಿಂದೆಯೇ ಹಾಕಿಕೊಂಡಿದ್ದರು. ಈಗ ಶಾಸಕರು ತಿರುಗಿ ಬಿದ್ದಿರುವುದರಿಂದ ಆತ ಮೊದಲೇ ಹೋದರೂ ಹೋಗಬಹುದು. ಆತನ ಮದುವೆ ಬೇರೆ ಎದುರಾಗಿದೆ. ಹೀಗಾಗಿ ಆತ ಕಾರವಾರದಿಂದ ಹೋಗೋದು ಗ್ಯಾರಂಟಿ.

ಅಷ್ಟೇ ಅಲ್ಲ, ಡಿಸಿ ಘೋಷ್‌ರನ್ನೂ ಸಿಎಂ ವರ್ಗಾಯಿಸುವ ಸಾಧ್ಯತೆಯೂ ಇದೆ. ದೇಶಪಾಂಡೆ ಹೇಗೆ ಶಾಸಕರ ವಿರುದ್ಧ ಬಿದ್ದಿದ್ದಾರೋ ಹಾಗೇ ಸಿಎಂ ಸಿದ್ದು ದೇಶಪಾಂಡೆಯನ್ನು ಬಗ್ಗಿಸುವ ತಂತ್ರಗಾರಿಕೆಯಲ್ಲಿದ್ದಾರೆ. ಇದೆಲ್ಲಾ ಲೆಕ್ಕ ಹಾಕಿದರೆ ಘೋಷ್ ಕಾರವಾರದಿಂದ ಕಾಲು ಕೀಳುವ ದಿನ ದೂರವಿಲ್ಲ ಅನ್ನಿಸ್ತದೆ. ಆಗ ಯಾರು ಉಳಿಸಿಕೊಳ್ತಾರೋ?!

■ಶುದ್ಧೋಧನ

ಬತ್ತ ಬೆಳೆದೋನು ಉದ್ಧಾರಾಗಿಲ್ಲ

ನನ್ನ ಕಟ್ಟೆ ಪುರಾಣ ನಾಟಕದಲ್ಲಿ ಮಲಗಿದ್ದ ರೈತರನ್ನು ಎಬ್ಬಿಸಿದ ಅಧಿಕಾರಿ "ಯಾವುದಾದರೂ ಬ್ಯಾಂಕಿನಿಂದ ಸಾಲ ಕೊಡಿಸುತ್ತೇನೆ. ಬತ್ತ ಬೆಳೆಯಿರಿ" ಎನ್ನುತ್ತಾನೆ. ಅದಕ್ಕೆ ಕಾಳ ಮಾವ "ಬತ್ತ ಬೆಳೆದೋನ್ಯಾವನುದ್ಧಾರಾಗ್ಯವ್ರನೆ?" ಎಂದು ಮರುಪ್ರಶ್ನೆ ಹಾಕುತ್ತಾನೆ. ಆಗ ವಾಟಿಸ್ಸೆ ಕೂಡ "ಆದಾಯಕ್ಕಿಂತ ಖರ್ಚೇ ಜಾಸ್ತಿ ಸಾರ್" ಎನ್ನುತ್ತಾನೆ.

ಈ ಬತ್ತದ ಬೆಳೆ ಎಂದೂ ರೈತನಿಗೆ ಲಾಭ ತಂದ ಬೆಳೆಯಲ್ಲ. ಹಿಂದಿನ ಕಾಲದಲ್ಲಿ ಈ ಬೆಳೆಯಿಂದ ಲಾಭ ಬರುತ್ತಿತ್ತು ನಿಜ. ಅಂದರೆ ರೈತ ತನ್ನ ಮನೆಯ ಎತ್ತುಗಳಿಂದ ಗದ್ದೆ ಅಚ್ಚುಕಟ್ಟು ಮಾಡಿ, ಕೊಟ್ಟಿಗೆ ಗೊಬ್ಬರ ಹಾಕಿ, ಮನೆಯವರೆಲ್ಲಾ ಸೇರಿ ನಾಟಿ ಮಾಡಿ, ಕಳೆ ಕಿತ್ತು ಕುಯ್ದು ಬಡಿದು, ಕೇರಿ, ತೂರಿ ತಂದಾಗ ಅದು ಲಾಭದಾಯಕ



ಬೆಳೆಯಾಗಿ ಕಂಡಿದ್ದಾರೆ. ಆದರೆ ಈಗ ಗದ್ದೆ ಹಾಳು ಬಿಡಲಾಗದೆ ಮಾಡುತ್ತಿರುವ ನಷ್ಟದ ಕಸುಬಾಗಿದೆ.

ಒಂದು ಎಕರೆಯಲ್ಲಿ ಬತ್ತ ಬೆಳೆಯಬೇಕಾದರೆ ಮೊದಲು ಗದ್ದೆ ಉತ್ತು ಅಚ್ಚುಕಟ್ಟು ಮಾಡಬೇಕಾಗುತ್ತದೆ. ಈ ಕೆಲಸಕ್ಕೆ ಬರೋಬ್ಬರಿ ಎರಡು ಸಾವಿರ ಖರ್ಚಾಗುತ್ತದೆ. ಬತ್ತದ ಸಸಿ ಮಡಿಗೆ 1000 ರೂ. ಆಗುತ್ತದೆ. ಸಸಿ ಬಂತು, ನಾಟಿಗೆ ಗದ್ದೆ ರೆಡಿ ಮಾಡಲು ಟಿಲ್ಲರ್ ಬಾಡಿಗೆ 3 ಗಂಟೆಗೆ 2,400. ಆ ನಂತರ ನಳ್ಳಿಗೆ ಮಾಡಿಸಲು 500 ರೂ. ನಾಟಿ ಮಾಡಲು 5 ಜನ ಹೆಣ್ಣಾಳಿಗೆ 1800 ರೂ. ಕೂಲಿ. ಒಂದು ಎಕರೆಗೆ ಎರಡು ಚೀಲ ಗೊಬ್ಬರ ಹಾಕಬೇಕಾಗುತ್ತದೆ. ಚೀಲವೊಂದಕ್ಕೆ 950 ರೂ.ಗಳಂತೆ ಎರಡು ಚೀಲಕ್ಕೆ 1900 ರೂ ಆಗುತ್ತದೆ. ಈ ಮೊದಲೇ ಸಬ್ಸಿಡಿಯಿಂದ ಕೊಂಡ ಬೀಜಕ್ಕೆ 350 ರೂ ಕೊಟ್ಟಾಗಿದೆ. ಕಳೆ ಕೀಳಿಸಲು ನಾಲ್ಕಾಳಿಗೆ 2,400 ರೂ. ಕೊಡಬೇಕು.

ಒಳ್ಳೆ ಇಳುವರಿಗಾಗಿ 2,000 ರೂ ಕೊಟ್ಟು ಔಷಧಿ ತಂದು ಹೊಡೆದಿರಬೇಕು. ಹೊಡೆದವನಿಗೆ ಒಂದು ಸಾವಿರ ರೂ. ಬತ್ತದ ಕಳೆ ಕುಯ್ಲಿಗೆ ಬಂದು ತಲೆ ತೂಗುತ್ತಿದೆ. ಆಗ ಕುಯ್ಲು ಮಾಡಿಸಲು ಬರೋಬ್ಬರಿ 3,500 ರೂ ಆಗುತ್ತದೆ. ಈ ಬೇಸಾಯದಿಂದ 20 ಕ್ವಿಂಟಾಲ್ ಬತ್ತ ಬರುತ್ತದೆ. ಈ ಇಳುವರಿಯಲ್ಲಿ ಬಯಲುಸೀಮೆ ಮತ್ತು



ಮಲೆನಾಡಿಗೆ ವ್ಯತ್ಯಾಸವಿರುತ್ತದೆ. ಮಲೆನಾಡಿನಲ್ಲಿ 15 ರಿಂದ 20 ಕ್ವಿಂಟಾಲ್‌ಗೆ ನಿಲುಗಡೆಯಾದರೆ, ದಾವಣಗೆರೆ ಕಡೆಯಲ್ಲಿ 25 ಕ್ವಿಂಟಾಲ್ ಇಳುವರಿ ಕೊಡಬಹುದು. ಒಂದು ಎಕರೆಯಲ್ಲಿ 20 ಕ್ವಿಂಟಾಲ್ ಬತ್ತ ಬೆಳೆದ ರೈತ 1,500 ರೂ.ಗಳಿಗೆ ಕ್ವಿಂಟಾಲ್‌ನಂತೆ ಮಾರಿದಾಗ 30 ಸಾವಿರ ಕೈಗೆ ಬರುತ್ತದೆ. ಇದರಲ್ಲಿ 22 ಸಾವಿರ ಖರ್ಚು ತೆಗೆದರೆ ಆತನಿಗೆ ಉಳಿಯುವುದು ಕೇವಲ ಎಂಟು ಸಾವಿರ.

ಬತ್ತದ ರೇಟು ಏರುಪೇರಾದರೆ 8 ಸಾವಿರವೂ ಉಳಿಯುವುದಿಲ್ಲ. ಸತತವಾಗಿ ನಾಲ್ಕು ತಿಂಗಳು ಮನೆಯವರೆಲ್ಲಾ ಸೇರಿ ಬತ್ತದ ಬೇಸಾಯ ಮಾಡಿದ್ದರೂ ಕೂಡ ನಮ್ಮ ರೈತ ಅಗ್ನಭಾಗ್ಯದ ಫಲಾನುಭವಿ ಸಾಲಿನಲ್ಲಿದ್ದಾನೆಯೇ ಹೊರತು, ಅವನ ಬದುಕೇ ಸುಧಾರಿಸಿಲ್ಲ. ಈ ನಡುವೆ ಬೆಳೆದ ಬತ್ತ ತೋರಿಸುತ್ತ ಮಾಡಿರುವ ಕೈಸಾಲಕ್ಕೆ ಲೆಕ್ಕವಿಲ್ಲ. ಲಾಭದಾಯಕ ಬೆಳೆಯಲ್ಲವಿದ್ದರೂ ಗದ್ದೆ ಹಾಳುಬಿಡಬಾರದೆಂಬ ಛಲದಿಂದ ಇನ್ನೂ ಗದ್ದೆ ಉಳುತ್ತಿರುವ ರೈತ ವಿಧಿಯಿಲ್ಲದೆ ಒದ್ದಾಡುತ್ತಿದ್ದಾನೆ.

ಬತ್ತದ ಬೆಳೆಗೆ ರೋಸಿದವರು ಕಬ್ಬು ನೆಟ್ಟು ಆರಾಮವಾಗಿರುತ್ತಾರೆ. ಯಾಕೆಂದರೆ ಕಬ್ಬು ಬತ್ತದಷ್ಟು ಶ್ರಮ ಕೇಳುವುದಿಲ್ಲ. ಬದಲಿಗೆ ಹಣ ತರುವ ಬೆಳೆ. ಹಾಗಾಗಿ ಇಡೀ ಬೆಳಗಾವಿ ಜಿಲ್ಲೆಯಲ್ಲಿ ಎಲ್ಲೆಂದರಲ್ಲಿ ಕಬ್ಬು ಭೂಮಿಯನ್ನು ಮುಚ್ಚಿತ್ತು. ಆದರೇನು, ಊರೆಲ್ಲ ಕಬ್ಬು ಬೆಳೆದರೆ ಏನಾಗಬೇಕೊ ಅದೇ ಆಗುತ್ತಿದೆ. ರೈತನ ಬೇಸಾಯಕ್ಕೂ ಅವನ ಬದುಕಿಗೂ ತಾಳಮೇಳವೇ ಇಲ್ಲದಾಗಿದೆ. ರೈತರ ಬೆಳೆಗಳಿಗೆ ನುಸಿಪೀಡೆಯಂತೆ ತಗಲುವ ದಲ್ಲಾಳಿಗಳು, ಏನು ಬೆಳೆದು ಏನು ಫಲ ಎನ್ನುವಷ್ಟು ರೈತನ ಸುಲಿಗೆ ಮಾಡುತ್ತಿದ್ದಾರೆ.


ನಾನೇ ಈಚೆಗೆ ಗೆಳೆಯರೊಬ್ಬರ ತೋಟಕ್ಕೆ ಹೋದಾಗ ಮೂವರು ಸಾಬರು ಮಾಡುತ್ತಿದ್ದ ಚೌಕಾಸಿಗೆ ದಂಗುಬಡಿದು ಹೋದೆ. 95 ಗಿಡದ ಮಾವಿನ ತೋಟದ ಕಾಯಿಗಳನ್ನು ಕಿತ್ತುಕೊಳ್ಳಲು 7 ಸಾವಿರದಿಂದ ಚೌಕಾಸಿ ಮಾಡಿ 8 ಸಾವಿರಕ್ಕೆ ಗಂಟು ಬಿದ್ದರು. ಅಲ್ಲದೆ "ನೀನು ಹಾಕಿರುವ ಮಾವು ಸರಿಯಿಲ್ಲ, ಜನ ಕೊಳ್ಳಲ್ಲ, ಇದು ಹೈಬ್ರಿಡ್ ತಳಿ. ನಾಟಿ ಬಾದಾಮಿ ಹಾಕಿದ್ರೆ ನೀನು ಕೇಳಿದಷ್ಟು ಕೊಡತಿದ್ವೊ" ಎಂದು ರೈತನ ಆತ್ಮವಿಶ್ವಾಸ ಹಾಳು ಮಾಡತೊಡಗಿದರು. 45 ಸಪೋಟ ಗಿಡಗಳ ಹಣ್ಣುಗಳನ್ನು ಕೇವಲ ಒಂದೂವರೆ ಸಾವಿರಕ್ಕೆ ಕೇಳತೊಡಗಿದರು. ಇನ್ನ ಹಲಸಿನ ಮರಕ್ಕೆ ಕೇವಲ 350 ರೂ. ಬೆಲೆ ಕಟ್ಟಿ ಇದರಿಂದ ತಾವು ಮಾಡಿಕೊಳ್ಳುವ ಲಾಸನ್ನು ಮನ ಮುಟ್ಟುವಂತೆ ವಿವರಿಸತೊಡಗಿದರು.

ಸಿಟ್ಟಾದ ರೈತ ಮಿತ್ರ "ನನ್ನ ತೋಟದ ಕಾಯಿಹಣ್ಣುಗಳೆಲ್ಲಾ ಮರದಲ್ಲೇ ಇರಲಿ. ನೀವಿಲ್ಲಿಂದ ಹೋಗಿ" ಎಂದ. ಆ ನಂತರ ತಾನೇ ಗೆಳೆಯರಿಗೆಲ್ಲಾ ಫೋನ್ ಮಾಡಿ ಮಾವು, ಸಪೋಟ, ಹಲಸು ಸರಬರಾಜು ಮಾಡಿದ. ಮಾವಿನಿಂದ 30 ಸಾವಿರ ಬಂತು. ಸಪೋಟದಿಂದ 15 ಸಾವಿರ ಬಂತು. ಹಲಸಿನಿಂದ 5 ಸಾವಿರ ಸಂಪಾದಿಸಿದರು. ದಲ್ಲಾಳಿಗಳು ಕೇಳಿದ್ದ 8,500 ರೂ. ಬದಲಿಗೆ ರೈತ ಮಿತ್ರ ತಾನೇ ಮಾರ್ಕೆಟಿಂಗ್ ಮಾಡಿ ಸಂಪಾದಿಸಿದ್ದು 50 ಸಾವಿರ. ಜೊತೆಗೆ ಇದರ ಅರ್ಧದಷ್ಟು ಬೆಲೆಯ ಹಣ್ಣು ಕಾಯಿಗಳನ್ನು ಪುಕ್ಕಟೆಯಾಗಿ ಗೆಳೆಯರಿಗೆ ಹಂಚಿದ್ದಾರೆ.

ಸರ್ಕಾರ ಮತ್ತು ನಮ್ಮ ಕೃಷಿ ಇಲಾಖೆ, ಅದರ ಮಂತ್ರಿ ಮತ್ತು ಕೃಷಿ ಸಹಾಯಕರು ಹಾಗು ರೈತ ಸಂಘಟನೆಗೂ, ರೈತರಿಗೂ ಯಾವ ಸಂಬಂಧವೂ ಇಲ್ಲದೇ ಇರುವುದರಿಂದ ರೈತರ ಆತ್ಮಹತ್ಯೆಗಳು ನಿಂತಿಲ್ಲ.

■ಬಿ.ಚಂದ್ರೇಗೌಡ

ನೂರ್-ಸಿರಿಮನೆ ಇಟ್ಟ ಹೆಜ್ಜೆ ವಿಶಾಲ ಜನಾಂದೋಲನಕ್ಕೆ ಸಿದ್ಧತೆ



ನೂರ್ ಶ್ರೀಧರ್


ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಎಂಬ ಇಬ್ಬರು ನಕ್ಸಲ್ ನಾಯಕರು ನಕ್ಸಲ್ ಚಳವಳಿಯ ಭೂಗತ ಜೀವನದಿಂದ 2014ರ ಡಿಸೆಂಬರ್ 8ರಂದು ಪ್ರಜಾತಾಂತ್ರಿಕ ಮುಖ್ಯವಾಹಿನಿಗೆ ಬಂದಿದ್ದು ತಿಳಿದ ಸಂಗತಿ. ಈಗಾಗಲೇ ಘೋಷಿಸಿರುವಂತೆ ಅವರು ಭೂಗತ ಜೀವನವನ್ನು ತೊರೆದು ಮುಖ್ಯವಾಹಿನಿಗೆ ಬಂದಿದ್ದರ ಉದ್ದೇಶವೇ ಮುಖ್ಯವಾಹಿನಿಯಲ್ಲಿದ್ದುಕೊಂಡು ಪ್ರಜಾತಾಂತ್ರಿಕ ಜನಾಂದೋಲನವನ್ನು ರೂಪಿಸಬೇಕೆಂದು. ಸ್ವಾತಂತ್ರ್ಯ ಹೋರಾಟಗಾರರಾದ ದೊರೆಸ್ವಾಮಿ, ಚಿಂತಕರು, ಲೇಖಕರೂ ಆದ ದೇವನೂರು ಮಹಾದೇವ ಮುಂತಾದವರು ಈ ಪ್ರಕ್ರಿಯೆಗೆ ಒತ್ತಾಸೆಯಾಗಿ ನಿಂತಿದ್ದು ಕೂಡ ಇದೇ ಕಾರಣಕ್ಕೆ.

ಹೀಗೆ ಹೊರಬಂದ ನಂತರ ನೂರ್ ಮತ್ತು ಸಿರಿಮನೆಯವರು ಕರ್ನಾಟಕದಾದ್ಯಂತ ಸುತ್ತಾಡಿದ್ದಾರೆ. ಹಲವು ಸಂಘ - ಸಂಸ್ಥೆಗಳ ಪ್ರಮುಖರೊಂದಿಗೆ ಚರ್ಚಿಸಿದ್ದಾರೆ. ಬಿಡಿಬಿಡಿ ವ್ಯಕ್ತಿಗಳೊಂದಿಗೂ ವಿಸ್ತೃತ ಸಭೆಗಳನ್ನು ನಡೆಸಿದ್ದಾರೆ. ಬೇರೆ ಬೇರೆ ಊರುಗಳಲ್ಲಿ ಅಂದರೆ ತಾಲೂಕು ಕೇಂದ್ರ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಇದುವರೆಗೆ 50ಕ್ಕೂ ಹೆಚ್ಚು ಸಭೆಗಳನ್ನು ಆಯೋಜಿಸಿದ್ದಾರೆ. ಈ ಸಭೆಗಳಲ್ಲಿ ವಿವಿಧ ಸೈದ್ಧಾಂತಿಕ - ಸಂಘಟನಾ ಹಿನ್ನೆಲೆಯ ನಾನಾ ವ್ಯಕ್ತಿಗಳು ಒಟ್ಟಿಗೆ ಭಾಗವಹಿಸಿ, ಈ ಮಾಜಿ ನಕ್ಸಲ್ ಮುಖಂಡರ ಆಶಯಗಳಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ವಿದ್ಯಮಾನ ಸಮಕಾಲೀನ ಕರ್ನಾಟಕದಲ್ಲಿ ವಿಶಿಷ್ಟವಾದುದು. ಕರ್ನಾಟಕದ ಸಾಮಾಜಿಕ, ರಾಜಕೀಯ ಬದುಕಿನಲ್ಲಿ ವಿಶೇಷ ಹೆಜ್ಜೆ ಗುರುತನ್ನು ಮೂಡಿಸಿದ್ದ ದಲಿತ ಚಳವಳಿ, ರೈತ ಚಳವಳಿಗಳು ಮಾತ್ರವಲ್ಲದೆ ಇನ್ನಿತರ ಸಂಘಟನೆಗಳು ಕೂಡ ಒಡೆದು ಛಿದ್ರವಾಗುವ ಅನಪೇಕ್ಷಿತ ಪ್ರಕ್ರಿಯೆಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ, ವಿವಿಧ ಧಾರೆಗಳ ಸಂಘಟನೆಗಳು ಮತ್ತು ವ್ಯಕ್ತಿಗಳು ಒಂದೇ ಐಕ್ಯ ವೇದಿಕೆಯಡಿ ಬಂದು ವಿಶಾಲ ಜನಾಂದೋಲನ ಕಟ್ಟಲು ನಡೆಸುತ್ತಿರುವ ಪ್ರಯತ್ನ ಸಮಯೋಚಿತವಾದುದು.

ಹಲವಾರು ಸಂಘಟನೆಗಳು ಹಾಗೂ ವಿವಿಧ ಗಣ್ಯರ ಅಭಿಪ್ರಾಯಗಳನ್ನು ಆಧರಿಸಿ ಆಗಸ್ಟ್ 15 ಮತ್ತು 16ರಂದು ಒಂದು ರಾಜ್ಯ ಮಟ್ಟದ ಸಮಾವೇಶವನ್ನು ಸಂಘಟಿಸಲು ತೀರ್ಮಾನಿಸಲಾಗಿದೆ. ಈ ಸಮಾವೇಶದ ಉದ್ದೇಶ ಮಾಮೂಲಿಯಂತೆ ಹೆಚ್ಚಿನ ಜನರನ್ನು ಸೇರಿಸುವುದಲ್ಲ, ವಿವಿಧ ಸಾಮಾಜಿಕ ಕಾರ್ಯಕರ್ತರು ಹಾಗೂ ಗಣ್ಯರು ಒಂದೆಡೆ ಕಲೆತು ಭವಿಷ್ಯದಲ್ಲಿ ಒಂದು ಐಕ್ಯ ಜನಾಂದೋಲನವನ್ನು ರೂಪಿಸುವ ಕುರಿತು ವಿಸ್ತೃತವಾದ ಚರ್ಚೆ ನಡೆಸಲು ಈ ಸಮಾವೇಶವನ್ನು ಸಂಘಟಿಸಲಾಗುತ್ತಿದೆ. ಹಾಗೆ ನೋಡಿದರೆ ಇದೊಂದು ವಿಶಿಷ್ಟವಾದ ಮತ್ತು ಸಮಯೋಚಿತವಾದ ಪ್ರಯೋಗ ಎನ್ನಬಹುದು.

ಈ ಸಮಾವೇಶದ ಸಿದ್ಧತೆಯ ಭಾಗವಾಗಿ ಸಮಾನ ಮನಸ್ಕರ ಸಭೆಯೊಂದನ್ನು ಜುಲೈ 19ರಂದು ಬೆಂಗಳೂರಿನಲ್ಲಿ ಕರೆಯಲಾಗಿತ್ತು. ಕರ್ನಾಟಕದ ವಿವಿಧ ಜಿಲ್ಲೆಗಳಿಂದ ವಿವಿಧ ಸಾಮಾಜಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಸಂಘಟನಾ ಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು. ಈ ಸಭೆಗೆ 'ಸಮಾವೇಶದ ಸಿದ್ಧತಾ ಸಭೆ'ಯೆಂದು ಹೆಸರಿಸಲಾಗಿತ್ತು.


ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್ ದೊರೆಸ್ವಾಮಿ, ಶಿಕ್ಷಣ ತಜ್ಞ, ಚಿಂತಕ ಡಾ.ಜಿ.ರಾಮಕೃಷ್ಣ ಡಾ.ವಿಜಯಮ್ಮ, ಲೇಖಕ ಬಸವರಾಜ ಸೂಳಿಭಾವಿ, ಮಾನವ ಹಕ್ಕು ಹೋರಾಟಗಾರರಾದ ನಗರಗೆರೆ ರಮೇಶ್, ನಗರಿ ಬಾಬಯ್ಯ, ಪಿಯುಸಿಎಲ್‌ನ ಪ್ರೊ.ರಾಮದಾಸ್‌ರಾವ್, ಪತ್ರಕರ್ತೆ ಗೌರಿ ಲಂಕೇಶ್, ಕೋಮು ಸೌಹಾರ್ದ ವೇದಿಕೆಯ ಕೆ.ಎಲ್.ಅಶೋಕ್, ರೈತ ಹೋರಾಟಗಾರ ನಂಜೇಗೌಡ, ದಲಿತ ಸಂಘರ್ಷ ಸಮಿತಿಯ ಎನ್.ವೆಂಕಟೇಶ್, ರಾಜಾಕಾಂತ್, ಸಿಜಿ ಗಂಗಪ್ಪ, ರಾಮಚಂದ್ರ, ಕರ್ನಾಟಕ ಜನಶಕ್ತಿಯ ಡಾ.ವಾಸು, ಗೌರಿ, ಕುಮಾರ್ ಸಮತಳ, ಸಂಜಯ್ ಶಿವಮೊಗ್ಗ, ಪರ್ಯಾಯ ಕಾನೂನು ವೇದಿಕೆಯ ವಿನಯ್, ಪತ್ರಕರ್ತರಾದ ಶೃಂಗೇಶ್, ಪ್ರತಿಭ, ರೆಡ್‌ಸ್ಟಾರ್ ಪಕ್ಷದ ಪ್ರತಿನಿಧಿ ರುದ್ರಯ್ಯ, ನಿರ್ವಾಣಪ್ಪ, ಕಂದೇಗಾಲ




ಸಿರಿಮನೆ ನಾಗರಾಜ್

ಶಿವಣ್ಣ, ಶ್ರಮಿಕ ಶಕ್ತಿ ಸಂಘಟನೆಯ ತ್ರಿಮೂರ್ತಿ - ಹೀ[...] ವಿವಿಧ ಧಾರೆಗಳ ಸುಮಾರು 70ಕ್ಕೂ ಹೆಚ್ಚು ಕಾರ್ಯಕರ್ತ[...] ಅಲ್ಲಿ ನೆರೆದಿದ್ದರು.


ಈ ಪ್ರಕ್ರಿಯೆಯ ಮುಂದಿನ ರೂಪುರೇಷೆಗಳ ಬ[...] ನೂರ್‌ಶ್ರೀಧರ್ ತಮ್ಮ ಪ್ರಸ್ತಾಪವನ್ನು ಮುಂದಿಟ್ಟರು[...] "ಈ ಸಭೆ ಕೇವಲ ಒಂದು ಸಮಾವೇಶವನ್ನು ಯಶ[...] ಮಾಡಲಿಕ್ಕಾಗಿ ಮಾತ್ರವಲ್ಲ, ಮುಂದಿನ ದಿನಗಳ[...] ಕರ್ನಾಟಕದಲ್ಲಿ ಒಂದು ಬಲಿಷ್ಠ ಜನಾಂದೋಲನವ[...] ನಿರ್ಮಿಸುವ ಸುದೀರ್ಘ ಪ್ರಕ್ರಿಯೆಯ ಭಾಗವಾಗಿ ಸಮಾ[...] ಮನಸ್ಕರೆಲ್ಲ ಇಲ್ಲಿ ನೆರೆದಿದ್ದೇವೆ. ಕಾರಣಾಂತರಗಳಿಂದ ಈ[...] ಸಭೆಗೆ ಹಾಜರಾಗಲು ಸಾಧ್ಯವಾಗದೆ ಇರುವ ಎಲ್ಲ ಮಿತ್ರರ[...]



ದೇವನೂರು



ಎ.ಕೆ. ಸುಬ್ಬಯ್ಯ




ರಾಮಕೃಷ್ಣ

ದೊರೆಸ್ವಾಮಿಯವರ ದಿಕ್ಸೂಚಿ ಮಾತುಗಳು

ಈ ಸಭೆಯ ಬಗ್ಗೆ ಒಂದು ಸಂಗತಿಯನ್ನು ವಿಶೇಷವಾಗಿ ದಾಖಲಿಸಲೇಬೇಕು. ಅಂದು ಸಭೆಯ ಉದ್ಘಾಟನೆ ಮಾಡಿ ಮಾತಾಡಿದ ದೊರೆಸ್ವಾಮಿಯವರು ಬಹಳ ಅರ್ಥಪೂರ್ಣವಾದ ಹಾಗೂ ಇಂದಿನ ನಮ್ಮ ಸಂದರ್ಭಕ್ಕೆ ದಿಕ್ಸೂಚಿಯಾಗಬೇಕಾದಂಥ ಮಾತುಗಳನ್ನಾಡಿದರು. ಅದರ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ಯಥಾವತ್ ಉಲ್ಲೇಖಿಸುವುದು ಸೂಕ್ತ.

"ಜಯಪ್ರಕಾಶ್ ನಾರಾಯಣ್ ಅವರು ನಮ್ಮ ಸಮಾಜವನ್ನು ಹೀಗೆ ವಿವರಿಸಿದ್ದರು. ನಮ್ಮ ಸಮಾಜ ಒಂದು ಮರಳಿನ ದಿಬ್ಬದಂತಿದೆ; ಮೇಲುನೋಟಕ್ಕೆ, ಎಲ್ಲವೂ ಒಂದಕ್ಕೊಂದು ಅಂಟಿಕೊಂಡಂತೆ ಕಾಣುತ್ತದೆ. ಆದರೆ ಒಂದು ಬಿರುಗಾಳಿ ಬೀಸಿದರೆ ಎಲ್ಲ ಕಣಗಳೂ ಚೆಲ್ಲಾಪಿಲ್ಲಿಯಾಗಿ ತೂರಿಹೋಗುತ್ತವೆ. ವಾಸ್ತವದಲ್ಲಿ ಅವೆಲ್ಲವೂ ಪ್ರತ್ಯೇಕ ಪ್ರತ್ಯೇಕವಾಗಿ ಬಿಡಿಬಿಡಿ ಘಟಕಗಳಾಗಿರುವುದು ಕಂಡುಬರುತ್ತದೆ. ನಾವು ಮರಳಿನ ದಿಬ್ಬದಂತಿರುವ ಸಮಾಜವನ್ನು ಜೇಡಿಮಣ್ಣಿನ ಗುಣವುಳ್ಳ ಸಮಾಜವನ್ನಾಗಿ ರೂಪಿಸಬೇಕು. ಎಂಥದೇ ಬಿರುಗಾಳಿ, ಮಳೆಗಳಿಗೂ ಜಗ್ಗದೆ, ಪ್ರತಿಯೊಂದು ಕಣಕಣವೂ ಪರಸ್ಪರ ಅಂಟಿಕೊಳ್ಳುವಂಥ ಜಿಗುಟು ಸ್ವಭಾವದ ಸಮಾಜ ನಮ್ಮದಾಗಬೇಕು. ಎಲ್ಲರೂ ನೆಮ್ಮದಿಯಿಂದ ಬಾಳುವಂಥ, ಪರಸ್ಪರ ಸಹಕಾರ, ಸೌಹಾರ್ದದಿಂದ ಬಾಳುವಂಥ ಸಮಾಜ ನಮ್ಮದಾಗಬೇಕು. ಹಾಗೆಂದರೆ ಅದರ ಅರ್ಥವೇನು? ನಮ್ಮ ಸಮಾಜದಲ್ಲಿರುವ ಆರ್ಥಿಕ, ಸಾಮಾಜಿಕ ಕಂದರಗಳನ್ನು ತೊಲಗಿಸಬೇಕು. ಆರ್ಥಿಕ ಸಮಾನತೆಯನ್ನು ಸಾಧಿಸಬೇಕು. ಸಾಮಾಜಿಕ ಸಮಾನತೆಯನ್ನು ಸಾಧಿಸಬೇಕು. ಒಂದು ಉತ್ತಮ ಸಮಾಜ ಕಟ್ಟಬೇಕಾದರೆ ಇವು ಅತ್ಯಗತ್ಯ.



ಇಂದಿನ ನಮ್ಮ ಆರ್ಥಿಕ ವ್ಯವಸ್ಥೆ ಕೊಳೆತು ನಾರುತ್ತಿದೆ. ಆರ್ಥಿಕ ವ್ಯವಸ್ಥೆ ಹರಿಯುವ ನೀರಿನಂತಿರಬೇಕು. ನೀರು ಒಂದೇ ಕಡೆ ಶೇಖರಣೆಯಾದಾಗ ಕೊಳೆಯಲು ಶುರುವಾಗುತ್ತದೆ. ಹಾಗೆಯೇ ಆರ್ಥಿಕತೆ ಚೆನ್ನಾಗಿರಬೇಕಾದರೆ ಹರಿಯುವ ನೀರಿನಂತೆ ಹಣ ಎಲ್ಲೆಡೆ ಚಲಾವಣೆಯಾಗುತ್ತಿರಬೇಕು. ಆದರೆ ಹಳ್ಳದ ಕಡೆ ನೀರು ಹರಿಯುವಂತೆ ಶ್ರೀಮಂತ ಬಂಡವಾಳಿಗರ ಕಡೆಗೆ ಹಣ ಹರಿದು ಹೋಗುವಂತಹ ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾರೆ ಅದು ಒಂದೇ ಕಡೆ ಶೇಖರಣೆಯಾಗುತ್ತಿರುವುದರಿಂದ ಕಲುಷಿತಗೊಂಡಿದೆ, ದಿನೇದಿನೇ ಮತ್ತಷ್ಟು ಮಲಿನಗೊಳ್ಳುತ್ತಿದೆ. ಅದರಲ್ಲಿ ಕ್ರಿಮಿಕೀಟಗಳು ಸೇರಿಕೊಂಡಿವೆ. ಅದು ರೋಗರುಜಿನಗಳನ್ನು ಹರಡುವ ತಾಣವಾಗುತ್ತಿದೆ. ನಮ್ಮಲ್ಲಿ ಒಂದೆಡೆ ತುತ್ತು ಅನ್ನಕ್ಕೂ ಪರದಾಡುವ ಜನರೂ ಇದ್ದಾರೆ. ಸಿರಿವಂತಿಕೆಯ ದರ್ಪದಲ್ಲಿ ಮೆರೆಯುವವರೂ ಇದ್ದಾರೆ. ಒಟ್ಟಾರೆ ಆರ್ಥಿಕತೆ ರೋಗಗ್ರಸ್ತವಾಗಿದೆ. ಸರ್ವನಾಶಕ್ಕೆ ನಾಂದಿಯಾಗ್ತಾ ಇದೆ.

ಈ ಸಮಸ್ಯೆಯನ್ನು ಪರಿಹರಿಸಬೇಕೆಂದರೆ, ಆರ್ಥಿಕತೆಯಲ್ಲಿ ಚಲನಶೀಲತೆ ತರಬೇಕೆಂದರೆ ಹಳ್ಳಗಳನ್ನು ಮುಚ್ಚುವ ಕಾರ್ಯ ಜರೂರಾಗಿ ಆಗಬೇಕು. ಯಾವುದೇ ಸರ್ಕಾರಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುತ್ತಿಲ್ಲ ಯಾಕೆ? ರೋಗಮೂಲವಾಗಿರುವ ಈ ಹಳ್ಳಗಳನ್ನು ಮುಚ್ಚುವಂತ ಚಳವಳಿಗಳನ್ನು ರೂಪಿಸಬೇಕಾದ್ದು ನಮ್ಮ ಜರೂರು ಕರ್ತವ್ಯವಾಗಬೇಕು.

ಹಣ ಎಂಬುದು ಒಂದು ನಿರ್ಜೀವ ವಸ್ತು, ಅದು ನಮ್ಮ ಅನುಕೂಲಕ್ಕಾಗಿ ರೂಪಿಸಿಕೊಂಡಿದ್ದು, ಆದರೆ ಈ ನಿರ್ಜೀವ ವಸ್ತು ಇಂದು ನಮ್ಮ ಮೇಲೆ ಸವಾರಿ ಮಾಡ್ತಾ ಇದೆಯಲ್ಲಾ? ಅದನ್ನು ಹೇಗೆ ನಿಯಂತ್ರಣ ಮಾಡಬೇಕು ಎಂಬುದೇ ತಿಳಿದಿಲ್ಲ ಎಂಬಂತೆ ನಾವು ಅದರ ದಾಸರಾಗುತ್ತಿದ್ದೇವಲ್ಲಾ? ಈ ನಿರ್ಜೀವ ವಸ್ತುವಿನ ದಾಸ್ಯವನ್ನು ಹೋಗಲಾಡಿಸಲು ಏನು ಮಾಡಬೇಕು?

ಇನ್ನು ಶಿಕ್ಷಣದ ವಿಚಾರ. ವಿದ್ಯೆ ಎಂಬುದು ಮಾರಾಟ ಮಾಡುವ ಹಾಗೂ ಕೊಂಡುಕೊಳ್ಳುವ ಸರಕಾಗಿ ಪರಿಣಮಿಸಿದೆ. ಬಹುತೇಕ ರಾಜಕಾರಣಿಗಳು ವಿದ್ಯೆ ಮಾರಾಟ ಮಳಿಗೆಗಳನ್ನು ತೆರೆದಿದ್ದಾರೆ. ದೊಡ್ಡದೊಡ್ಡ ಬಂಡವಾಳಿಗರು ಭಾರೀ ವಿದ್ಯಾ ಸಂಸ್ಥೆಗಳನ್ನು ತೆರೆದು ದಂಧೆ ನಡೆಸುತ್ತಿದ್ದಾರೆ. ಸ್ವತಂತ್ರ ವಿಶ್ವವಿದ್ಯಾಲಯಗಳನ್ನು ತೆರೆಯುತ್ತಿದ್ದಾರೆ. ಅದರಿಗೆ ಬೇಕಾದ ರೀತಿಯ ಪಠ್ಯಗಳನ್ನು ಅವರೇ ರೂಪಿಸಿಕೊಳ್ಳುತ್ತಿದ್ದಾರೆ. ಶಿಕ್ಷಣ ಕ್ಷೇತ್ರವನ್ನು ಈ ರಾಜಕಾರಣಿ ಹಾಗೂ ಬಂಡವಾಳಿಗರ ಕೂಟದಿಂದ ಕಿತ್ತುಕೊಂಡು ಶಿಕ್ಷಣ ತಜ್ಞರ ಕೈಗೆ ಒಪ್ಪಿಸಬೇಕಲ್ಲವೆ? ಈ ಮಹತ್ಕಾರ್ಯ ಸಾಧಿಸಲೂ ಕೂಡ ಪ್ರಬಲವಾದ ಚಳವಳಿಗಳು ರೂಪುಗೊಳ್ಳಬೇಕಲ್ಲವೆ?

5 ವರ್ಷಕ್ಕೊಮ್ಮೆ ಓಟು ಹಾಕ್ತೀವಿ, ಇದನ್ನೆ ಪ್ರಜಾತಂತ್ರ ಅಂತ ಅಂದುಕೊಂಡು ಸುಮ್ಮನಾಗಿದ್ದೀವಿ. ಆದರೆ ಈ ದೇಶದಲ್ಲಿ ಆಳುವವರಿಗೂ ಜನರಿಗೂ ಎಂಥ ಸಂಬಂಧವಿದೆ? ಅದು ಒಂದು ರೀತಿಯಲ್ಲಿ ಹುಲಿ - ಹುಲ್ಲೆ ಸಂಬಂಧದಂತಾಗಿದೆ. ಈ ಹುಲಿ - ಹುಲ್ಲೆ ಸಂಬಂಧವನ್ನು ಬದಲಿಸಲು ನಾವೇನು ಮಾಡಬೇಕು?

ನಮ್ಮ ಸಮಾಜದಲ್ಲಿ ಜಾತಿ ಭೇದ, ಮತ ಭೇದ, ಲಿಂಗ ಭೇದ, ವರ್ಗ ಭೇದ ಮುಂತಾದ ನಾನಾ ಭೇದಾಸುರರ ಹಾವಳಿ ಹೆಚ್ಚಾಗಿಬಿಟ್ಟಿದೆ. ಈ ಭೇದಾಸುರರನ್ನು ಸಂಹಾರ ಮಾಡಲು ನಾವು ಸಜ್ಜಾಗಬೇಕಲ್ಲವೆ?

ಹರಿಜನರು ಎಂದು ಕರೆಸಿಕೊಂಡವರು ಎಲ್ಲಿದ್ದಾರೋ ಅಲ್ಲೇ ಇದ್ದಾರೆ. ಮೀಸಲಾತಿ ಅನ್ನೋದು ಕೂಡ ಯಾರೋ ಕೆಲವರಿಗೆ ಮಾತ್ರ ದಕ್ಕಿದೆ. ಕೆಲವರು ಶಿಕ್ಷಣ, ಉದ್ಯೋಗ ದಕ್ಕಿಸಿಕೊಂಡಿದ್ದಾರೆ. ಇನ್ನೂ ಕೆಲವರ ಮಕ್ಕಳ ವಿದೇಶಗಳಿಗೂ ಹೋಗಿದ್ದಾರೆ. ಆದರೆ ಬಹುಪಾಲು ಮಂದಿ ತಲೆತಲಾಂತರಗಳಿಂದ ಎಲ್ಲಿದ್ದಾರೋ ಅಲ್ಲೇ ಇದ್ದಾರಲ್ಲಾ, ಅವರ ಬಗ್ಗೆ ಗಂಭೀರವಾದ ಚರ್ಚೆಗಳೇ ಇಲ್ಲವಾಗಿದೆ. ಕಟ್ಟಕಡೆಯ ವ್ಯಕ್ತಿಗೂ ಶಿಕ್ಷಣ ಮತ್ತಿತರ ಸವಲತ್ತುಗಳು ಸಿಗೋದು ಯಾವಾಗ? ಇನ್ನೂ ಎಷ್ಟು ದಶಕಗಳು ಬೇಕು? ಕಟ್ಟಕಡೆಯ ಮನುಷ್ಯನನ್ನು ತಲುಪಲು ಒಂದು ಸಮಗ್ರ ಯೋಜನೆ ಮಾಡಬೇಡವೆ? ಈ ಬಗ್ಗೆ ನಮ್ಮ ಅಸೆಂಬ್ಲಿ, ಪಾರ್ಲಿಮೆಂಟುಗಳಲ್ಲಿ ಯಾಕೆ ಚರ್ಚೆ ನಡೆಯುತ್ತಿಲ್ಲ? ಆಳುವವರಂತೂ ಮಾಡೋದಿಲ್ಲ, ನಾವಾದರೂ ಇದನ್ನು ಸಾಧಿಸಲು ಕಾರ್ಯೋನ್ಮುಖರಾಗೋದು ಬೇಡವೆ? ಈ ನಿಟ್ಟಿನಲ್ಲಿ ಪಂಚವಾರ್ಷಿಕ ಯೋಜನೆಗಳ ರೀತಿಯಲ್ಲಿ ಒಂದು ಕಾಲಬದ್ಧ ಯೋಜನೆ ರೂಪಿಸಿ, ಆಗಾಗ್ಗೆ ಸಮೀಕ್ಷೆಗೊಳಪಡಿಸಿ ಆದ್ಯತೆಯ[...] ಮೇರೆಗೆ ಇದನ್ನು ಜಾರಿ ಮಾಡುವ ಕೆಲಸ ನಾವು ಕೈಗೆತ್ತಿಕೊಳ್ಳಬೇಕಾಗಿದೆ.

ಹೀಗೆ ಹೇಳುತ್ತಾ ಹೋದರೆ ಒಂದೆರಡಲ್ಲ; ಎಲ್ಲವೂ ಕೆಟ್ಟುಹೋಗಿ[...] ಅವೆಲ್ಲವನ್ನೂ ಸಮಗ್ರವಾಗಿ ಬದಲಿಸಬೇಕಿದೆ. ಅಂಥ ಒಂದು ಸಮ[...] ಚಳವಳಿಯನ್ನು ನಾವು ರೂಪಿಸಬೇಕಾಗಿದೆ. ಈ ಮಹತ್ಕಾರ್ಯ[...] ಕಟಿಬದ್ಧರಾಗಿರುವ ಯುವಕರ ಪಡೆಯನ್ನು ನಾವು ತಯಾರು ಮಾಡಬೇಕಾಗಿ[...] ಅಂಥಾ ಉದ್ದೇಶ ಇಟ್ಟುಕೊಂಡು ನಾವು ಹೊರಟಿದ್ದೇವೆ.

ಇಲ್ಲಿ ಸೇರಿರುವವರಲ್ಲಿ ನನ್ನದೊಂದು ಮನವಿ. ನಾವು ಹತ್ತಾರು ಸಂಘಟನೆ[...] ಹಿನ್ನೆಲೆಯವರು ಇಲ್ಲಿ ಸೇರಿದ್ದೇವೆ. ನಾನಾ ಸೈದ್ಧಾಂತಿಕ ಹಿನ್ನೆಲೆಯವರಿದ್ದೇ[...] ನಮ್ಮ ಮುಂದಿರುವ ಚಾರಿತ್ರಿಕ ಕರ್ತವ್ಯವನ್ನು ಈಡೇರಿಸಲು ನಾವೆಲ್ಲರ[...] ಕಲೆತು ಒಂದು ಪ್ರಬಲ ಜನಾಂದೋಲನ ರೂಪಿಸಬೇಕು. ಇದ[...] ಸಾಧ್ಯವಾಗಬೇಕಾದರೆ ನಾವು ನಮ್ಮ ನಮ್ಮ 'ಇಸಂ'ಗಳನ್ನು ಕಟ್ಟಿಡಬೇಕಾಗುತ್ತ[...] ಈಗ ಅಗತ್ಯವಿರುವುದು ಒಂದು ಪ್ರಬಲವಾದ ಐಕ್ಯ ಜನಾಂದೋಲನ. ಆದ್ದರಿಂ[...] ನಾವು ನಮ್ಮ ನಮ್ಮ 'ಇಸಂ'ಗಳನ್ನು ಈ ವೇದಿಕೆಯಲ್ಲಿ ತರದಂತೆ ಎಚ್ಚರ[...] ವಹಿಸಬೇಕು. ಅವುಗಳನ್ನು ನಮ್ಮ ನಮ್ಮ ಸಂಘಟನೆಗಳಿಗೆ ಸೀಮಿತಗೊಳಿಸಿಕೊಂ[...] ಈ ವಿಶಾಲ ಜನಾಂದೋಲನಕ್ಕೆ ಹೆಚ್ಚಿನ ಶಕ್ತಿ ತುಂಬಬೇಕು ಎಂದು ನಿಮ್ಮೆಲ್ಲರಲ[...] ನನ್ನ ಮನವಿ.

ನಾವು ಚಳವಳಿ ನಡೆಸುವಾಗ ತಕ್ಷಣಕ್ಕೆ ಕೈಗೆತ್ತಿಕೊಳ್ಳಬೇಕಾದ ವಿಷ[...] ಯಾವುದು? ದೀರ್ಘಕಾಲದ ವಿಷಯ ಯಾವುದು? ಇತ್ಯಾದಿ ವಿಚಾರ[...] ಬಗ್ಗೆ ಚರ್ಚೆಯಾಗಬೇಕು. ನಾವು ಕೈಗೆತ್ತಿಕೊಂಡ ಚಳವಳಿ ಫಲ ಕೊಡಬೇಕ[...] ಅದೆಷ್ಟೇ ಸಣ್ಣದಿದ್ದರೂ ಪರವಾಗಿಲ್ಲ, ಇದರಿಂದ ಕಾರ್ಯಕರ್ತರಿಗೆ ಹುರು[...] ಬರುತ್ತದೆ. ಮುಂದೆ ದೊಡ್ಡದೊಡ್ಡ ಜವಾಬ್ದಾರಿಗಳನ್ನು ಹೊರುವ ಆತ್ಮಸ್ಥೈರ್ಯ[...] ಬರುತ್ತದೆ. ಈ ಬಗ್ಗೆ ಚರ್ಚೆಯಾಗಲಿ.

ನನ್ನ ಮಾತು ಮುಗಿಸೋಕೆ ಮುಂಚೆ ಚಳವಳಿಗಳ ಬಗ್ಗೆ ಒಂದು ಮಾ[...] ಹೇಳಬೇಕಾಗಿದೆ. ಇಂದಿನ ಚಳವಳಿಗಳು ಒಂದುರೀತಿಯಲ್ಲಿ 'ಟಚ್ ಅಂ[...] ಗೋ' ವಿಧಾನ ಅಳವಡಿಸಿಕೊಂಡಂತೆ ಕಾಣುತ್ತದೆ. ಒಂದು ಸಮಸ್ಯೆಯ[...] ಕೈಗೆತ್ತಿಕೊಳ್ಳುವುದು, ಒಂದಷ್ಟು ಜನರನ್ನು ಸೇರಿಸಿ ಪ್ರತಿಭಟನೆ ಮಾಡುವುದ[...] ಪೇಪರ್‌ಗಳಲ್ಲಿ ಟಿವಿಗಳಲ್ಲಿ ಕಾಣಿಸಿಕೊಳ್ಳುವುದು - ಇಷ್ಟಾದರೆ ಅಲ್ಲಿಗೆ ಎ[...] ಮುಗಿದಂತೆ. ಮತ್ತೆ ಬೇರೊಂದು ಸಮಸ್ಯೆ ಕೈಗೆತ್ತಿಕೊಳ್ಳುವುದು, ಅದಾ[...] ನಂತರ ಮಗದೊಂದು. ಹೀಗೇ ಪುನರಾವರ್ತನೆ ಆಗ್ತಾಯಿದೆ. ಇಂಥ 'ಟ[...] ಅಂಡ್ ಗೋ' ಚಳವಳಿಗಳಿಂದ ಮೂರು ಕಾಸಿನ ಪ್ರಯೋಜನವಿಲ್ಲ, ಹೀಗಾದ[...] ಯಾವ ಸಮಸ್ಯೆ ಬಗೆಹರಿಯಲು ಸಾಧ್ಯ? ಆದ್ದರಿಂದ ನಮ್ಮ ಚಳವಳಿಗ[...] ಯಾವುದೇ ಸಮಸ್ಯೆಯನ್ನು ಅದರ ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವ[...] ಯೋಜನೆಗಳನ್ನು ರೂಪಿಸುವಂತಾಗಬೇಕು. ನಮಗೆ ಎಂಥ ಚಳವಳಿ ಬೇ[...] ಎಂಬುದು ಬಹುಮುಖ್ಯ ಸವಾಲು. ಅಂಥಾ ಸುಸ್ಥಿರ ಚಳವಳಿಯನ್ನು ನಾ[...] ರೂಪಿಸಬೇಕು. ನಿಜವಾದ ಜನನಾಯಕರನ್ನು ರೂಪಿಸಬೇಕು.

ಪುಟ್ಟಪ್ಪನವರ ಸರ್ವೋದಯ ಪದ್ಯದ ಕೆಲ ಸಾಲುಗಳನ್ನು ನೆನ[...] ಮಾಡಿ ನನ್ನ ಮಾತು ಮುಗಿಸುತ್ತೇನೆ.

"ಕೊನೆಗೊಂಡಿತು ಓರೋರ್ವರ ಗರ್ವದ ಕಾಲ
ಇದು ಸಮತೆಯ ಕಾಲ, ಸರ್ವರ ಕಾಲ
ಸರ್ವೋದಯ ಯುಗಮಂತ್ರ"

...ಗೊಳ್ಳಲು ಎಲ್ಲರೂ ಶಕ್ತಿಮೀರಿ ಶ್ರಮ ಹಾಕಬೇಕಾದ" ...ತ್ಯದ ಬಗ್ಗೆ ವಿವರಿಸಿ ಹೇಳಿದರು.

20ನೇ ಶತಮಾನದ ಅನುಭವವನ್ನು ಅವರು ...ಶ್ಲೇಷಿಸಿದ್ದು ಹೀಗೆ : ಸಾಮ್ರಾಜ್ಯಶಾಹಿ ಶಕ್ತಿಗಳು ಜಗತ್ತಿನ ...ಟಗಾಗಿ ಕಚ್ಚಾಡಿ ಎರಡು ಪ್ರಪಂಚ ಯುದ್ಧಗಳನ್ನು ...ಸಿದರು. ಜನಕಂಟಕ ಶಕ್ತಿಗಳು ಹೀಗೆ ಪರಸ್ಪರ ...ಡೆದಾಡುತ್ತಿದ್ದ ಸಂದರ್ಭದಲ್ಲಿ ಜನರು ಈ ಶತ್ರುಗಳ ...ದ್ಧ ಐಕ್ಯ ಹೋರಾಟ ನಡೆಸಿ, ಶೋಷಕ ವ್ಯವಸ್ಥೆಯನ್ನೇ ...ರಲಿಸಿದರು. ರಷ್ಯಾ, ಚೀನಾ, ಪೋಲೆಂಡ್, ಹಂಗೆರಿ ...ಂತಾದ ಜಗತ್ತಿನ ಮೂರನೇ ಒಂದು ಭಾಗದಷ್ಟು ...ಪ್ರದೇಶದಲ್ಲಿ ಕಾರ್ಮಿಕ - ರೈತರ ಸರ್ಕಾರಗಳು ...ಚನೆಯಾದವು. ಭಾರತವನ್ನೂ ಒಳಗೊಂಡು ಜಗತ್ತಿನ ...ರ್ಧ ಭಾಗಕ್ಕಿಂತಲೂ ಹೆಚ್ಚು ದೇಶಗಳು ...ಸಾಹತುಶಾಹಿಗಳನ್ನು ಒದ್ದೋಡಿಸಿ ಸ್ವತಂತ್ರ ...ಡೆದುಕೊಂಡವು.

ಇದು ಹೇಗೆ ಸಾಧ್ಯವಾಯಿತು? ಹೇಗೆಂದರೆ ಅಂದಿನ ...ಸ್ಥಿತಿಯಲ್ಲಿ ಜನರ ಶತ್ರುಗಳು ಪರಸ್ಪರ ಕಚ್ಚಾಡುತ್ತಿದ್ದರು. ...ಸಂದರ್ಭದಲ್ಲಿ ಜನರು ಒಂದಾಗಿದ್ದರು. ಸಾಮ್ರಾಜ್ಯಶಾಹಿ ...ಗಳು, ಶೋಷಕ ಶಕ್ತಿಗಳು ಇತಿಹಾಸದಿಂದ ಪಾಠ ...ಲಿತಿದ್ದಾರೆ. ಅವರಲ್ಲಿ ಹೊಂದಾಣಿಕೆ, ಒಗ್ಗಟ್ಟು ...ಡುಕೊಂಡಿದ್ದಾರೆ. ಗ್ಯಾಟ್ ಒಪ್ಪಂದ, ಜಾಗತೀಕರಣ ...ದಲಾದ ವಿಧಾನಗಳ ಮೂಲಕ ತಮ್ಮ ಶೋಷಣೆಯನ್ನು ...ಂದುವರೆಸುವ ವ್ಯವಸ್ಥೆ ರೂಪಿಸಿಕೊಳ್ಳುತ್ತಿದ್ದಾರೆ. ಆದರೆ ...ದೇ ಸಂದರ್ಭದಲ್ಲಿ ಶೋಷಿತರಾದ ನಾವು ಒಡೆದು ...ಛಿದ್ರವಾಗಿದ್ದೇವೆ. ಇಂದಿನ ನಮ್ಮ ದುಸ್ಥಿತಿಗೆ ಇದೇ ...ಮುಖ ಕಾರಣ" ಎಂಬುದನ್ನು ಅರ್ಥವತ್ತಾಗಿ ...ವರಿಸಿದರು.

ಇಡೀ ದಿನ ಹಲವಾರು ವಿಚಾರಗಳ ಬಗ್ಗೆ ಗಂಭೀರ ...ರ್ಚೆ ನಡೆದು ಕೆಲವು ಪ್ರಮುಖ ತೀರ್ಮಾನಗಳನ್ನು ...ಗೊಳ್ಳಲಾಗಿದೆ. ಆರಂಭಿಸಲು ಉದ್ದೇಶಿಸಿರುವ ನೂತನ ...ವಳಿಗೆ 'ಸಮಾನತೆಗಾಗಿ ಜನಾಂದೋಲನ' ಎಂದು ...ಸರಿಡಲಾಗಿದೆ. ಎಲ್ಲ ಪ್ರಗತಿಪರ, ಜನಪರ ಶಕ್ತಿಗಳನ್ನು ...ಗೂಡಿಸಿ ಜನಾಂದೋಲನ ರೂಪಿಸುವುದು; ಜನರ ...ಜಾತಂತ್ರಕ್ಕಾಗಿ ಹೋರಾಡುವುದು - ಈ ಹೊಸ ...ನಾಂದೋಲನದ ಧ್ಯೇಯವಾಕ್ಯವೆಂದು ತೀರ್ಮಾನಿಸಲಾಗಿದೆ.

ಆಗಸ್ಟ್ 15 ಮತ್ತು 16ರಂದು ಎರಡು ದಿನಗಳ ...ಮಾವೇಶ ನಡೆಸಬೇಕೆಂದು ತೀರ್ಮಾನಿಸಲಾಗಿದೆ. ಇದು ...ಜನಾಂದೋಲನದ ಆಶಯಕ್ಕೆ ಸ್ಪಂದಿಸುವ ಸಾಮಾಜಿಕ ...ರ್ಯಕರ್ತರು ಹಾಗೂ ಚಿಂತಕರ ಸಮಾವೇಶವಾಗಿರಲಿದೆ.

ಸಮಾವೇಶ ಮಾಮೂಲಿಯಂತೆ ರಾಜಧಾನಿ ...ಂದ್ರಿತವಾಗಿರಬಾರದೆಂಬುದರ ಬಗ್ಗೆಯೂ ಸ್ವಾರಸ್ಯಕರ ...ರ್ಚೆ ನಡೆಯಿತು. ಚರ್ಚೆಯ ಕೊನೆಯಲ್ಲಿ ಅಂತಿಮವಾಗಿ ...ಜ್ಯದ ಎಲ್ಲ ಭಾಗಗಳ ಜನರು ಬಂದು ಸೇರಲು ...ನುಕೂಲವಾಗುತ್ತದೆ ಎಂಬ ಕಾರಣಕ್ಕೆ ದಾವಣಗೆರೆಯಲ್ಲಿ ...ಡೆಸಲು ಬಹುಮತದ ತೀರ್ಮಾನ ಕೈಗೊಳ್ಳಲಾಗಿದೆ.

ಈ ಸಭೆಯಲ್ಲಿ ಭಾಗವಹಿಸದೆ ಇರುವ, ಆದರೆ ...ಮುಂದಿನ ಜನಾಂದೋಲನದ ಭಾಗವಾಗಬೇಕಿರುವ ...ಘಟನೆಗಳನ್ನು ಹಾಗೂ ವ್ಯಕ್ತಿಗಳನ್ನು ಆಗಸ್ಟ್ 15 ಮತ್ತು ...ರ ಸಮಾವೇಶದಲ್ಲಿ ಭಾಗವಹಿಸುವಂತೆ ಮಾಡಲು ಒಂದು ...ಮಿತಿಯನ್ನು ರಚಿಸಲಾಯ್ತು. ಅದಕ್ಕೆ 'ಐಕ್ಯತಾ ಸಮಿತಿ' ...ಂಬ ಅರ್ಥಪೂರ್ಣ ಹೆಸರಿಡಲಾಗಿದೆ. 7 ಜನರ ಐಕ್ಯತಾ ...ಮಿತಿಯಲ್ಲಿ ದೊರೆಸ್ವಾಮಿ, ದೇವನೂರು, ಎಕೆ ಸುಬ್ಬಯ್ಯ ...ಂಧೂಧರ, ಡಾ. ವಿಜಯಮ್ಮ, ಸಿರಿಮನೆ ಮತ್ತು ...ಆರ್.ಶ್ರೀಧರ್ ಸದಸ್ಯರಾಗಿರುತ್ತಾರೆ. ಇದಲ್ಲದೆ, 'ಸಮಾವೇಶ ...ದ್ಧತಾ ಸಮಿತಿ'ಯೊಂದನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ...ಆರ್ ಶ್ರೀಧರ್, ಸಿರಿಮನೆ ನಾಗರಾಜ್‌ರನ್ನೊಳಗೊಂಡು ...ಟ್ಟು 15 ಮಂದಿ ಸದಸ್ಯರಿದ್ದಾರೆ.

ಸಮಾವೇಶದ ಅಜೆಂಡಾ ಬಗ್ಗೆಯೂ ಸಾಕಷ್ಟು ಚರ್ಚೆ ...ಡೆಯಿತು. ಮೊದಲ ದಿನ ಜನಾಂದೋಲನದ ಗುರಿ ಮತ್ತು ದಿಕ್ಕುಗಳ ಕುರಿತು ಚಿಂತನ - ಮಂಥನ ...ಡೆಸುವುದೆಂದೂ, ಎರಡನೇ ದಿನ ಮುಂದಿನ ...ವಾಬ್ದಾರಿಗಳನ್ನು ಹೊರಲು ಒಂದು ವಿಶಾಲ ಸಮಿತಿಯನ್ನು ...ಹಾಗೂ ವಿವಿಧ ಉಪಸಮಿತಿಗಳನ್ನು ಆಯ್ಕೆ ...ಮಾಡುವುದೆಂದು ನಿರ್ಣಯವಾಯ್ತು.

ಕೊನೆಯದಾಗಿ ಒಂದು ಮಾತು. ಇಂಥಾ ಹೊಸ ...ಕ್ರಿಯೆಗಳು ಶುರುವಾದಾಗ ಇದು ಆರಂಭ ಶೂರತ್ವ ...ಗಬಹುದೆ ಎಂಬ ಸಿನಿಕ ಅನುಮಾನ ಮೂಡುವುದು ...ಹಜ. ಆದರೆ ತಳಮಟ್ಟದ ಸ್ಪಂದನೆಯನ್ನು ಸೂಕ್ಷ್ಮವಾಗಿ ...ಮನಿಸಿದಾಗ ಚಳವಳಿಯ ಸರಿ ಮೊಳಕೆಯಲ್ಲಿ ಎಂಬ ...ಂತ ಕಂಡುಬರುತ್ತದೆ. ಹೊಸ ತಲೆಮಾರಿನ ಕಾರ್ಯಕರ್ತರಿಂದ ...ಪ್ರಕ್ರಿಯೆಗೆ ಹೆಚ್ಚಿನ ಸ್ಪಂದನೆ ವ್ಯಕ್ತವಾಗುತ್ತಿದೆ. ಮುಂದಿನ ...ನಗಳಲ್ಲಿ ದೊಡ್ಡ ಚಳವಳಿಯಾಗಿ ಈ ಪ್ರಕ್ರಿಯೆ ಬೆಳೆಯಲಿ; ...ಲಿತ, ರೈತ, ಕಾರ್ಮಿಕ, ಮಹಿಳಾ ಎಲ್ಲಾ ಧಾರೆಗಳನ್ನು ...ಳಗೊಂಡು ಕಟ್ಟಿ, ಕೇಡಿನ ಹಾದಿಯಲ್ಲಿರುವ ವ್ಯವಸ್ಥೆಗೆ ...ರ್ಯಾಯ ಪರಿಹಾರ ಕಂಡುಕೊಳ್ಳಲಿ ಎಂದು ಆಶಿಸೋಣ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಹಾಗೆ ಬಂದು ಹೀಗೆ ಹೋದ ರಮ್ಯಾ, ಅಂಬಿ

2014ರ ಮೇ ತಿಂಗಳಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಜಾತ್ಯತೀತ ಜನತಾ ದಳದ ಸಿ.ಎಸ್.ಪುಟ್ಟರಾಜು ಎದುರು ಸೋತು ಮಕಾಡೆ ಮಲಗಿದ ಚಿತ್ರನಟಿ, ಮಾಜಿ ಸಂಸದೆ ರಮ್ಯಾ ಬರೋಬ್ಬರಿ 14 ತಿಂಗಳಾದರೂ ಮಂಡ್ಯದತ್ತ ತಲೆಹಾಕಿಯೂ ನೋಡಿರಲಿಲ್ಲ. ಚುನಾವಣೆಯಲ್ಲಿ ಸೋತ ನಂತರ ವರ್ಷಗಟ್ಟಲೆ ಆಕೆ ಎಲ್ಲಿದ್ದಾರೆಂಬುದೇ ಗೊತ್ತಿರಲಿಲ್ಲ. ಜಿಲ್ಲೆಯ ನಾಯಕರಿಗಿರಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ನಾಯಕರಿಗೂ ರಮ್ಯಾ ಎಲ್ಲಿದ್ದಾರೆಂಬ ಬಗ್ಗೆ ಸಣ್ಣ ಸುಳಿವು ಕೂಡ ಇರಲಿಲ್ಲ. ಲಂಡನ್‌ನಲ್ಲಿ ರಮ್ಯಾ ಅದೇನೋ ಓದುತ್ತಿದ್ದಾರೆ ಅಂತ ಕೆಲವರು ಹೇಳಿದರೆ, ಇನ್ನಾರ್ರೋ ಕೆಲವರು ರಾಹುಲ್ ಗಾಂಧಿ ವಿಶ್ರಾಂತಿ ಪಡೆಯಲು ವಿದೇಶದಲ್ಲಿದ್ದಾಗ ರಮ್ಯಾ ಕೂಡ ಅವರ ಜೊತೆಯೇ ಇದ್ದರು ಎಂಬಂತೆ ಮಾತನಾಡುತ್ತಿದ್ದರು. ಮತ್ತೆ ಕೆಲವರು ರಮ್ಯಾ ಲೋಕಸಭೆ ಚುನಾವಣೆಯ ಸೋಲಿನ ಹಿನ್ನೆಲೆಯಲ್ಲಿ ಎಲ್ಲೂ ಕಾಣಿಸಿಕೊಳ್ಳದೆ ರೆಸ್ಟ್ ಪಡೆಯುತ್ತಿದ್ದಾರೆ ಎಂದೂ ಮಾತನಾಡಿಕೊಳ್ಳುತ್ತಿದ್ದರು. ಇವೆಲ್ಲ ಅಂತೆ-ಕಂತೆ-ಗುಸು-ಗುಸು ಮಾತಿನ ಮಧ್ಯೆಯೇ ಒಂದು ತಿಂಗಳ ಹಿಂದೆ ಬೆಂಗಳೂರಿಗೆ ವಾಪಸ್ ಆದ ರಮ್ಯಾ ಸಾರ್ವಜನಿಕವಾಗಿ ಹೆಚ್ಚಾಗಿ ಕಾಣಿಸಿಕೊಳ್ಳದೆ ನಿಗೂಢವಾಗಿಯೇ ಇದ್ದರು. ಕಾಂಗ್ರೆಸ್ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅಜ್ಞಾತವಾಸ ಮುಗಿಸಿ ದೆಹಲಿಗೆ ಬಂದ ಒಂದೆರಡು ದಿನದ ನಂತರ ರಮ್ಯಾ ಕೂಡ ಬೆಂಗಳೂರಿಗೆ ಬಂದಿಳಿದದ್ದು ರಾಜ್ಯದಲ್ಲಿ ಬಿಸಿಬಿಸಿ ಚರ್ಚೆಯನ್ನೇ ಹುಟ್ಟು ಹಾಕಿತ್ತು.

ದಿಢೀರನೆ ಪ್ರತ್ಯಕ್ಷ

ಚುನಾವಣೆಯಲ್ಲಿ ಸೋತ ನಂತರ ಮಂಡ್ಯದ ಜನರನ್ನು ಮೂಸಿಯೂ ನೋಡದ ರಮ್ಯಾ ಕಳೆದ ಒಂದೂವರೆ ತಿಂಗಳಿನಿಂದ ಮಂಡ್ಯದಲ್ಲಿ ದಿನನಿತ್ಯ ರೈತರು ಸಾಯುತ್ತಿದ್ದರೂ ರಮ್ಯಾ ಮಂಡ್ಯಕ್ಕೆ ಕಾಲಿಟ್ಟಿರಲೇ ಇಲ್ಲ. ರಮ್ಯಾಳ ರಾಜಕೀಯ ಗುರು 85ರ ಇಳಿ ವಯಸ್ಸಿನ ಎಸ್.ಎಂ. ಕೃಷ್ಣ ಎರಡು ದಿನ ಮಂಡ್ಯ ಜಿಲ್ಲೆಯ ತುಂಬೆಲ್ಲಾ ಓಡಾಡಿ ಮೃತ ರೈತರ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿ, 50 ಸಾವಿರ ಪರಿಹಾರ ವಿತರಿಸಿ, ಜಿಲ್ಲೆಯ ರೈತ ಬಾಂಧವರಿಗೆ ಆತ್ಮಹತ್ಯೆ ಮಾಡಿಕೊಳ್ಳದಂತೆ ಆತ್ಮವಿಶ್ವಾಸ ತುಂಬಿದ್ದರು.

ಕೃಷ್ಣ ಬಂದನಂತರ ಸಿಎಂ ಸಿದ್ದರಾಮಯ್ಯ ಕೂಡ ಮೃತಪಟ್ಟ ಇಬ್ಬರು ರೈತರ ಮನೆಗಳಿಗೆ ತೆರಳಿ ಸಾಂತ್ವನ ಹೇಳಿ ಆತ್ಮವಿಶ್ವಾಸ ಕಳೆದುಕೊಳ್ಳದೆ ಆತ್ಮಸ್ಥೈರ್ಯ ಬೆಳೆಸಿಕೊಳ್ಳಿ ಎಂದು ಹೇಳಿಹೋಗಿದ್ದರು. ರಾಜ್ಯದಲ್ಲಿ ನಡೆದ ಆತ್ಮಹತ್ಯೆಗಳ ಬಗ್ಗೆ ಕೃಷ್ಣರಿಂದ ಮಾಹಿತಿ ಪಡೆದ ಸೋನಿಯಾ ಗಾಂಧಿ ಸರ್ಕಾರಕ್ಕೆ ಸಲಹೆ ನೀಡುವಂತೆ ಸೂಚಿಸಿದ್ದರು. ಸಿದ್ದರಾಮಯ್ಯ ಕೂಡ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಗೆ ರೈತರ ಆತ್ಮಹತ್ಯೆಯ ಕಾರಣಗಳನ್ನು ವಿವರಿಸಿದ್ದರು. ಇಷ್ಟೆಲ್ಲಾ ನಡೆಯುತ್ತಿದ್ದರೂ ರಮ್ಯಾ ಮಾತ್ರ ಜಿಲ್ಲೆಗೆ ಬಂದು ನೊಂದ ರೈತರ ಬಾಂಧವರನ್ನು ಭೇಟಿ ಮಾಡಿ ಸಾಂತ್ವನ ಹೇಳಲಿಲ್ಲ.

ಕೊನೆಗೆ ಅದ್ಯಾರು ರಮ್ಯಾಗೆ ಮಂಡ್ಯಕ್ಕೆ ತೆರಳುವಂತೆ ಸೂಚಿಸಿದರೋ ಗೊತ್ತಿಲ್ಲ. ಜುಲೈ 28ರಂದು ರಾಜ್ಯ ಹಾಗೂ ಜಿಲ್ಲಾ ಕಾಂಗ್ರೆಸ್ ಮುಖಂಡರಿಗೆ ಸಣ್ಣ ಸುಳಿವೂ ನೀಡದೆ ದಿಢೀರನೆ ಮಂಡ್ಯಕ್ಕೆ ಆಗಮಿಸಿದ ರಮ್ಯಾ ಕುದುರುಗುಂಡಿ ಗ್ರಾಮಕ್ಕೆ ತೆರಳಿ ಮೃತ ರೈತ ಕೆ.ಮೂರ್ತಿ ಪತ್ನಿ ಪುಟ್ಟಲಿಂಗಮ್ಮ, ಸಾದೊಳಲು ಗ್ರಾಮದ ಶಿವಣ್ಣನ ಪತ್ನಿ ಪುಷ್ಪ, ಮಂಡ್ಯ ತಾಲ್ಲೂಕು ಹನಕನಹಳ್ಳಿ ಗ್ರಾಮದ ಮಹೇಶ್ ಹಾಗೂ ಪಾಂಡವಪುರ ತಾಲ್ಲೂಕಿನ ಗಾಣದ ಹೊಸೂರಿನ ಮೃತ ರೈತ ನಿಂಗೇಗೌಡನ ಪತ್ನಿ ಬೋರಮ್ಮನಿಗೆ ತಲಾ 50 ಸಾವಿರ ರೂ. ಚೆಕ್ ನೀಡಿ ಬೆಂಗಳೂರಿಗೆ ಹೊರಟುಹೋಗಿದ್ದಾರೆ.

ಜಿಲ್ಲೆಯಾದ್ಯಂತ 35ಕ್ಕೂ ಹೆಚ್ಚು ರೈತರು ಸಾವನ್ನಪ್ಪಿದ್ದು ಕೃಷ್ಣರಂತೆ ಎಲ್ಲಾ ರೈತರ ಮನೆಗಳಿಗೆ ತೆರಳಿ ರಮ್ಯಾ ಸಾಂತ್ವನ ಹೇಳಿ ಪರಿಹಾರ ನೀಡುತ್ತಾರೆಂದು ಭಾವಿಸಿದ ಮೃತ ರೈತರ ಕುಟುಂಬದವರು ರಮ್ಯಾ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೇವಲ ನಾಲ್ಕೈದು ಮಂದಿ ಮೃತ ರೈತರ ಮನೆಗೆ ಭೇಟಿ ನೀಡಿ ಪರಿಹಾರ ವಿತರಿಸಿ ತೆರಳಿರುವ ರಮ್ಯಾ ರಾಜಕೀಯ ಮಾಡುತ್ತಿದ್ದಾರೆಂದು ಜಿಲ್ಲೆಯ ಜನ ಮಾತನಾಡುತ್ತಿದ್ದಾರೆ.

ಮಾಹಿತಿಯೇ ಇರಲಿಲ್ಲ


ಜುಲೈ 28ರ ಮಂಗಳವಾರ ಬೆಳ್ಳಂಬೆಳಗ್ಗೆ ದಿಢೀರನೇ ಮಂಡ್ಯದಲ್ಲಿ ಪ್ರತ್ಯಕ್ಷರಾದ ರಮ್ಯಾ ಜೊತೆ ಆಕೆಯ ಸಹಾಯಕಿ ಹಾಗೂ ಡ್ರೈವರ್ ಇಬ್ಬರೇ ಇದ್ದರು. ಮಂಡ್ಯಕ್ಕೆ ಭೇಟಿ ಕೊಡುವ ಬಗ್ಗೆ ಸ್ಥಳೀಯ ಕಾಂಗ್ರೆಸ್ ಮುಖಂಡರಿಗಾಗಲೀ, ಕಾರ್ಯಕರ್ತರಿಗಾಗಲೀ ಸಣ್ಣ ಮಾಹಿತಿಯೂ ಇರಲಿಲ್ಲ. ರಮ್ಯಾ ಬರುವ ವಿಷಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೂ ತಿಳಿದಿರಲಿಲ್ಲ. ತಳ್ಳ ಪಾಟಿಗೆ ಬಂದ ರಮ್ಯಾ ಆತ್ಮಹತ್ಯೆ ಮಾಡಿಕೊಂಡ ನಾಲ್ಕೈದು ಮಂದಿ ರೈತರ ಮನೆಗೆ ತೆರಳಿ ಬಂದಷ್ಟೇ ವೇಗದಲ್ಲಿ ಮಾಯವಾಗಿದ್ದಾರೆ.

ಲೋಕಸಭಾ ಉಪಚುನಾವಣೆಯಲ್ಲಿ ಗೆದ್ದು ಸಂಸದೆಯಾದ ರಮ್ಯಾ ಆಗಲೂ ಸಹ ತಾನೊಬ್ಬಳೇ ಜಿಲ್ಲೆಯಾದ್ಯಂತ ತಿರುಗುತ್ತಿದ್ದರು. ಸ್ಥಳೀಯ ಮುಖಂಡರಿಗೆ ಮಾಹಿತಿ ನೀಡದೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತೆರಳುತ್ತಿದ್ದ ರಮ್ಯಾ ವರ್ತನೆ ಬಗ್ಗೆ ಸ್ಥಳೀಯ ಮುಖಂಡರು ತೀವ್ರ ಅಸಹನೆ ವ್ಯಕ್ತಪಡಿಸಿದ್ದರು. ಕಾಂಗ್ರೆಸ್ ಉಪಾಧ್ಯಕ್ಷ



ರಾಹುಲ್ ಗಾಂಧಿಯ ಜೊತೆ ನೇರ ಸಂಪರ್ಕ ಹೊಂದಿದ್ದೇನೆ ಎಂಬ ಅಹಂನಿಂದ ಸ್ಥಳೀಯ ಮುಖಂಡರು ನನಗ್ಯಾವ ಲೆಕ್ಕ ಎಂಬ ದುರಹಂಕಾರದ ಧೋರಣೆ ಬೆಳೆಸಿಕೊಂಡ ರಮ್ಯಾ ಸರ್ವಾಧಿಕಾರಿಯಂತೆ ನಡೆದುಕೊಂಡಿದ್ದರಿಂದಲೇ ಜಿಲ್ಲಾ ಕಾಂಗ್ರೆಸ್‌ನ ನಾಯಕರೇ ಕಳೆದ ಲೋಕಸಭಾ ಚುನಾವಣೆಯಲ್ಲಿ ರಮ್ಯಾರ ಸೋಲಿಗೆ ಒಳಗೊಳಗೆ ಸ್ಕೆಚ್ ಹಾಕಿ ಯಶಸ್ವಿಯಾಗಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಮಾತಿಗೆ ನಕರಾ ತೋರಿದ್ದ ರಮ್ಯಾರನ್ನು ಸೋಲಿಸಿಯೇ ತೀರಬೇಕೆಂದು ಪ್ರತಿಜ್ಞೆ ಮಾಡಿದ ಅಂಬರೀಶ್ ಶಿಷ್ಯರು ಜಾ.ದಳ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಜೊತೆ ಶಾಮೀಲಾಗಿ ಭರ್ಜರಿ ಕಾಣಿಕೆಯನ್ನು ಪಡೆದು ರಮ್ಯಾರ ಸೋಲಿಗೆ ಕಾರಣರಾಗಿಬಿಟ್ಟರು.

ಈ ಸೋಲಿನಿಂದ ತೀರ ಜರ್ಜರಿತರಾದ ರಮ್ಯಾ ಮಂಡ್ಯ ನಗರದಿಂದಲೇ ಕಣ್ಮರೆಯಾಗಿ ಬರೋಬ್ಬರಿ ಒಂದುಕಾಲು ವರ್ಷ ಕಳೆದುಹೋಗಿತ್ತು. ಅದಾದ ನಂತರ ಈಗ ಬಂದಿದ್ದು ಕೂಡ ರಾಜಕಾರಣದ ಭಾಗವಾಗಿಯೇ ಹೊರತು ಜನರ ಮೇಲಿನ ಕಾಳಜಿಯಿಂದಲ್ಲ. ಯಾವಾಗ ಜಿಲ್ಲಾ ಕಾಂಗ್ರೆಸ್ ಮುಖಂಡರೇ ತನ್ನ ಸೋಲಿಗೆ ಕಾರಣ ಎಂಬುದು ತಿಳಿಯಿತೋ ಅಂದಿನಿಂದ ರಮ್ಯಾ ಜಿಲ್ಲೆಯ ಯಾವೊಬ್ಬ ಮುಖಂಡರ ಬಳಿಯೂ ಮಾತನಾಡಿರಲಿಲ್ಲ. ಲೋಕಸಭಾ ಉಪಚುನಾವಣೆಯಲ್ಲಿ 23 ಸಾವಿರ ಹಾಗೂ ಕಳೆದ ಚುನಾವಣೆಯಲ್ಲಿ 15 ಸಾವಿರದಷ್ಟು ಮತಗಳ ಲೀಡ್ ಕೊಡಿಸಿದ ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಯನ್ನು ಕೂಡ ಮಾತನಾಡಿಸುವ ಸೌಜನ್ಯವನ್ನು ರಮ್ಯಾ ತೋರಿರಲಿಲ್ಲ.



ಹಾಗೆಯೇ ರೈತಸಂಘದ ಮುಖಂಡ ಹಾಗೂ ಶಾಸಕ ಕೆ.ಎಸ್. ಪುಟ್ಟಣ್ಣಯ್ಯನವರನ್ನೂ ಮಾತನಾಡಿಸಿರಲಿಲ್ಲ. ನರೇಂದ್ರಸ್ವಾಮಿ ಮತ್ತು ಪುಟ್ಟಣ್ಣಯ್ಯನವರನ್ನೇ ಮಾತನಾಡಿಸದ ರಮ್ಯಾ ಸ್ಥಳೀಯ ಮುಖಂಡರನ್ನು ಮಾತನಾಡಿಸುತ್ತಾರೆಯೇ? ಇದರಿಂದ ರಮ್ಯಾಳ ಧಿಮಾಕು ಎಂತಹದೆಂದು ಜಿಲ್ಲೆಯ ಜನರಿಗೆ ಗೊತ್ತಾಗಿದೆ. ಹೋಗಲಿ ತನ್ನನ್ನು ಬೆಂಬಲಿಸುವ ಶಿಷ್ಯ ಪಡೆಯ ಯಾರೊಬ್ಬನಿಗೂ ರಮ್ಯಾ 14 ತಿಂಗಳುಗಳಿಂದ ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದೇ ಗೊತ್ತಿರಲಿಲ್ಲ. ಇದನ್ನು ಕಂಡ ಮಂಡ್ಯದ ಮತದಾರರು ಬೇಸತ್ತು ಈ ಸಿನಿಮಾದವರ ಸಹವಾಸವೇ ಬೇಡಪ್ಪ ಎಂದು ಗೋಳಾಡು ತ್ತಿದ್ದಾರೆ. ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ರಮ್ಯಾಳ ನಡವಳಿಕೆಯಿಂದ ಬೇಸತ್ತು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಕನ್ನಡ ಚಿತ್ರರಂಗದ ಇಬ್ಬರು ಸ್ಟಾರ್‌ಗಳಾದ ಅಂಬರೀಶ್ ಮತ್ತು ರಮ್ಯಾ ಮಂಡ್ಯದ ಅಭಿವೃದ್ಧಿಗೆ ಎಷ್ಟೆಲ್ಲಾ ಕೊಡುಗೆಗಳನ್ನು ನೀಡುತ್ತಾರೆಂದು ಭಾವಿಸಿದ ಜಿಲ್ಲೆಯ ಜನ ಈ ಇವರಿಬ್ಬರ ವರ್ತನೆ ಕಂಡು ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ.

ಹಸಿಹಸಿ ಸುಳ್ಳು

ಜೊನ್ನೆ ಮಂಡ್ಯಕ್ಕೆ ಬಂದ ರಮ್ಯಾ "ನಾನು ಮೃತ ರೈತರ ಮನೆಗಳಿಗೆ ಭೇಟಿ ನೀಡಲು ಇಲ್ಲಿಗೆ ಬಂದಿಲ್ಲ, ಕಾಲಿಗೆ ಪೆಟ್ಟಾಗಿದ್ದರೂ ಅದನ್ನು ಲೆಕ್ಕಿಸದೆ ಜನರ ಕಷ್ಟ-ಸುಖ ಆಲಿಸಲು ಬಂದಿದ್ದೇನೆ. ಕಾಲುನೋವು ವಾಸಿಯಾದ ನಂತರ ಸಕ್ರಿಯ ರಾಜಕಾರಣದಲ್ಲಿ ಮುಂದುವರೆದು ಪಕ್ಷ ಬಲಪಡಿಸುತ್ತೇನೆ. ನಾನು ಜಿಲ್ಲೆಯ ಜನರ ಸೇವೆ ಮಾಡಲು ರಾಜಕೀಯ ಬಂದಿದ್ದೇನೆಯೇ ಹೊರತು, ಅಧಿಕಾರದ ಆಸೆಯಿಂದಲ್ಲ" ಎಂದು ಎಲ್ಲಾ ರಾಜಕಾರಣಿಗಳು ಹೇಳುವಂತೆ ಹಸಿ-ಹಸಿ ಸುಳ್ಳುಗಳನ್ನೇ ಹೇಳಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋತ ನಂತರ ಮಂಡ್ಯ ಜಿಲ್ಲೆಯಿಂದಷ್ಟೇ ಅಲ್ಲ ದೇಶವನ್ನೇ ಬಿಟ್ಟು ಹೋಗಿದ್ದ ರಮ್ಯಾ ಜನರ ಸೇವೆ ಮಾಡಲು ರಾಜಕೀಯಕ್ಕೆ ಬಂದೆ ಎಂದು ಹೇಳುತ್ತಿರುವುದು ಎಷ್ಟು ಹಸಿ ಸುಳ್ಳು ಎಂಬುದು ಗೊತ್ತಾಗುತ್ತದೆ. ಕಳೆದ ಒಂದೂವರೆ ತಿಂಗಳಿನಿಂದ ಜಿಲ್ಲೆಯಲ್ಲಿ ಪ್ರತಿನಿತ್ಯ ರೈತರು ತರಗೆಲೆಗಳಂತೆ ಆತ್ಮಹತ್ಯೆಗೆ ಶರಣಾಗು ತ್ತಿದ್ದರೂ ಮಂಡ್ಯದಿಂದ ಕೇವಲ ನೂರು ಕಿ.ಮೀ. ದೂರದ ಬೆಂಗಳೂರಿನಲ್ಲಿದ್ದ ರಮ್ಯಾ ಒಂದು ದಿನವೂ ಮಂಡ್ಯಕ್ಕೆ ಬಂದು ರೈತರೇ ಆತ್ಮಹತ್ಯೆಗೆ ಶರಣಾಗಬೇಡಿ ಎಂದೇಳಲಿಲ್ಲ. ಕೃಷ್ಣರ ಉಪದೇಶದ ನಂತರವಷ್ಟೆ ಕಾಟಾಚಾರಕ್ಕೆಂಬಂತೆ ನಾಲ್ಕೈದು ರೈತರ ಮನೆಗಳಿಗಷ್ಟೆ ಭೇಟಿ ನೀಡಿ ಕಣ್ಮರೆಯಾಗಿರುವ ಆಕೆಯ ಮಾತನ್ನು ನಂಬುವಷ್ಟು ಮಂಡ್ಯ ಜನರ ಮೂರ್ಖರಲ್ಲ ಎಂಬುದು ರಮ್ಯಾರಿಗೆ ಗೊತ್ತಿರಲಿ.

ಇನ್ನು ಜಿಲ್ಲೆಯಲ್ಲಿ ನಡೆದಿರುವ ರೈತರ ಆತ್ಮಹತ್ಯೆ ಕುರಿತಂತೆ ಸರ್ಕಾರಕ್ಕೆ ವರದಿ ಸಲ್ಲಿಸಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಜೊತೆ ಚರ್ಚಿಸುತ್ತೇನೆ ಎಂದು ರಮ್ಯಾ ಹೇಳಿದ್ದಾರೆ. ನಾಲ್ಕೈದು ಮಂದಿ ಮೃತ ರೈತರ ಮನೆಗಳಿಗೆ ತೆರಳಿದ ಮಾತ್ರಕ್ಕೆ ಜಿಲ್ಲೆಯ ಅಷ್ಟೂ ರೈತರ ಸಮಸ್ಯೆಗಳನ್ನು ತಿಳಿಯಲು ಸಾಧ್ಯವಿದೆಯೇ? ರೈತರ ಆತ್ಮಹತ್ಯೆಗೆ ಕಾರಣಗಳೇನು; ಅದಕ್ಕೆ ಕೈಗೊಂಡಿರುವ ಕ್ರಮಗಳೇನು ಎಂಬ ಬಗ್ಗೆ ಜಿಲ್ಲಾಡಳಿತ, ರೈತ ಮುಖಂಡರು ಹಾಗೂ ಆತ್ಮಹತ್ಯೆಗೆ ಶರಣಾದ ಎಲ್ಲಾ ರೈತರ ಮನೆಗಳಿಗೆ ತೆರಳಿ ನಿಜವಾದ ಕಾರಣಗಳನ್ನು ತಿಳಿದುಕೊಳ್ಳಬೇಕಿತ್ತು, ಅದಕ್ಕೆ ಕನಿಷ್ಠವೆಂದರೂ 5-6 ದಿನಗಳು ಬೇಕಾಗುತ್ತಿತ್ತು. ಆದರೆ ರಮ್ಯಾ 5-6 ಗಂಟೆಗಳಲ್ಲೇ ರೈತರ ಎಲ್ಲಾ ಸಮಸ್ಯೆಗಳನ್ನು ಅರಿತು ಸಿಎಂ ಸಿದ್ದರಾಮಯ್ಯ ಹಾಗೂ ರಾಹುಲ್ ಗಾಂಧಿ ಜೊತೆ ಮಾತನಾಡಿ ರೈತರ ಸಮಸ್ಯೆಗಳನ್ನು ಬಗೆಹರಿಸುತ್ತೇನೆ ಎಂದಿರುವುದು ಹಾಸ್ಯಾಸ್ಪದವಾಗಿದೆ.

ಎರಡು ಗಂಟೆಯ ಸಿನಿಮಾದಲ್ಲಿ ನಟಿಸಿದಂತೆ ರೈತರ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎನ್ನುವ ರಮ್ಯಾರಂತಹವರಿಗೆ ಜಿಲ್ಲೆಯ ರೈತರ ನಿಜವಾದ ಕಷ್ಟ ಎಂದು ಅರ್ಥವಾಗುವುದೋ?

ಅಂಬರೀಶ್ ನಿರ್ಲಕ್ಷ್ಯ


ಮಂಡ್ಯ ಜನರ ವಿಷಯದಲ್ಲಿ ಅಂಬರೀಶ್ ಹಾಗೂ ರಮ್ಯಾರದ್ದು ನಿರ್ಲಕ್ಷ್ಯ ಭಾವನೆ. ಮೃತ ರೈತರ ಕುಟುಂಬಗಳಿಗೆ ಸಾಂತ್ವನ ಹೇಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಎಲ್ಲಾ ಸಚಿವರಿಗೂ ಸ್ಪಷ್ಟವಾಗಿ ನಿರ್ದೇಶನ ನೀಡಿದ್ದರೂ ಕೂಡ ಅಂಬರೀಶ್ ಜಿಲ್ಲೆಯಲ್ಲಿ ಮೃತಪಟ್ಟ ರೈತರ ಮನೆ ಬಾಗಿಲಿಗೆ ಹೋಗಿ ಸಾಂತ್ವನ ಹೇಳಲೇ ಇಲ್ಲ. ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಯಡಿಯೂರಪ್ಪ ಭೇಟಿ ನೀಡುತ್ತಾರೆಂಬುದು ಗೊತ್ತಾಗಿ ಅಂಬರೀಶ್ ಕೂಡ ಭೇಟಿ ನೀಡಿದ್ದರು. ಅವತ್ತು ಬಂದ ಅಂಬರೀಶ್ ಮತ್ತೆ ಜಿಲ್ಲೆಗೆ ಬಂದಿದ್ದು ಸಿದ್ದರಾಮಯ್ಯ ಭೇಟಿ ಕೊಟ್ಟಾಗಲೇ. ಆಗ ಬಂದ ಅಂಬರೀಶ್ ರೈತರ ಮನೆಯೊಳಗೆ ತೆರಳಿ ಸಾಂತ್ವನ ಹೇಳದೆ ಕಾರಿನಲ್ಲೇ ಕುಳಿತು ಹಾಗೆ ಬಂದು ಹೀಗೆ ಹೋಗಿಬಿಟ್ಟರು. ಅಧಿವೇಶನ ಮುಗಿದ ನಂತರವೂ ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆ ನಿಂತಿಲ್ಲ. ಆದರೆ ಸೋಮಾರಿ ಸಚಿವ ಅಂಬರೀಶ್ ಮಾತ್ರ ರೈತರತ್ತ ತಿರುಗಿಯೂ ನೋಡುತ್ತಿಲ್ಲ. ಸಿನಿಮಾ ನಟರಾದ ಅಂಬರೀಶ್ ಮತ್ತು ರಮ್ಯಾರಿಗೆ ಜಿಲ್ಲೆಯ ಜನರ ಕಷ್ಟಗಳು ಅರ್ಥವಾಗುತ್ತಿಲ್ಲ. ಅಂಬರೀಶ್ ಅವರಿಗೆ ಉತ್ತಮವಾದ ಖಾತೆ ದೊರಕಿದ್ದರೂ ಅದನ್ನು ಬಳಸಿಕೊಂಡು ಜಿಲ್ಲೆಯನ್ನು ಅಭಿವೃದ್ಧಿ ಮಾಡುವ ಉದ್ದೇಶವೂ ಅವರಿಗಿಲ್ಲ.

ರಮ್ಯಾ ಕೂಡ ಅಂಬರೀಶ್‌ಗಿಂತ ಏನೂ ಭಿನ್ನವಾಗಿಲ್ಲ. ಅವರೂ ಕೂಡ ಜಿಲ್ಲೆಯ ಜನರನ್ನು ನಿರ್ಲಕ್ಷಿಸಿದ್ದಾರೆ. ಪತ್ರಕರ್ತರಿಗೂ ಸಿಗದೆ ತನಗಿಷ್ಟ ಬಂದಂತೆ ನಡೆದುಕೊಂಡ ರಮ್ಯಾ ಕೂಡ ಜನಪ್ರತಿನಿಧಿಯಾಗಲು ಅರ್ಹಳಲ್ಲ ಎಂಬುದು ಈ ನೆಲದ ಜನರ ಮಾತು. ಆದರೂ ರಮ್ಯಾ ಮುಂಬರುವ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿದೆ. ರಾಹುಲ್ ಗಾಂಧಿಯ ಕೃಪೆಯಿಂದ ರಮ್ಯಾ ಎಂಎಲ್‌ಸಿಯಾದರೂ ಅಚ್ಚರಿಯೇನಿಲ್ಲ. ಈ ಸಿನಿಮಾ ಮಂದಿಯನ್ನು ನಂಬಿಕೊಂಡು ಜಿಲ್ಲೆಯ ಜನ ಕಂಗೆಟ್ಟಿರುವುದಂತೂ ನೂರಕ್ಕೆ ನೂರರಷ್ಟು ಸತ್ಯ.


■ ವರದಿಗಾರ

ಜಲಮಂಡಳಿ ಸೊತ್ತಿಗೆ ಭೂಗಳ್ಳರ ಕನ್ನ





ಪಾಳೇಗಾರ್ ಆಕ್ರಮಿಸಿದ ಜಲಮಂಡಳಿ ಸೊತ್ತು



ಪಾಳೇಗಾರನ ಕುಮಾರಪಾರ್ಕ್ ಕಾಂಪ್ಲೆಕ್ಸ್

ಕೆರೆ ಕಳ್ಳರು, ಸರ್ಕಾರಿ ಭೂಮಿಯ ಕಂಟಕರ ವಿರುದ್ಧದ ಸರ್ಕಾರದ ಹೋರಾಟ ಇಲ್ಲಿ ಮಾತ್ರ ಅದೇಕೆ ಸೊರಗಿ ಸಪ್ಪಗಾಯಿತೋ ಗೊತ್ತಾಗುತ್ತಿಲ್ಲ!


ಕಬಳಿಕೆಯಾಗಿರುವುದು ಎಕರೆಗಳ ಲೆಕ್ಕದಲ್ಲಲ್ಲದೇ ಹೋದರೂ ಅದರ ಮಹತ್ವವಿದೆಯಲ್ಲ, ಮುಖ್ಯಮಂತ್ರಿ ಸಿದ್ದು ಸಾಹೇಬರ ಗೃಹಕಚೇರಿ ಕೃಷ್ಣಾದ ಹಿಂಭಾಗದಲ್ಲೇ ಅಂದರೆ ಕುಮಾರ ಪಾರ್ಕ್‌ನಂಥ ಪ್ರತಿಷ್ಠಿತ ಬಡಾವಣೆಯೊಂದರಲ್ಲಿ ಯಾರೋ ಆಸ್ತಿದಾಹಿಯೊಬ್ಬ ಆರೂವರೆ ಕೋಟಿ ರೂಪಾಯಿ ಮೌಲ್ಯದ ಜಲಮಂಡಳಿ ಸೊತ್ತನ್ನಾಕ್ರಮಿಸಿ ಐಷಾರಾಮೀ ಕಾಂಪ್ಲೆಕ್ಸ್ ಎಬ್ಬಿಸುತ್ತಾನೆಂದರೆ, ಅದನ್ನು ತಡೆಯಲೆತ್ನಿಸಿದ ಜಲಮಂಡಳಿ ಸಿಬ್ಬಂದಿಯ ಮೇಲೆ ಪೊಲೀಸರೆದುರೇ ಗೂಂಡಾಗಿರಿ ನಡೆಯುತ್ತದೆಯೆಂದರೆ ಏನರ್ಥ?

ಪಾಲಿಕೆ, ಬಿಡಿಎ, ನಗರಾಭಿವೃದ್ಧಿ ಇಲಾಖೆ, ಸರ್ಕಾರ, ಕಾಯ್ದೆ ಕಾನೂನು ಯಾವುದನ್ನೂ ಲೆಕ್ಕಿಸದೆ ನಗರದ ನಡುವಿನ ಜಲಮಂಡಳಿ ಸೊತ್ತಿಗೆ ರಾಜಾರೋಷವಾಗಿ ಬುಲ್ಡೋಜರ್ ನುಗ್ಗಿಸಿದ್ದು ಮೈಸೂರಿನ ಕುಖ್ಯಾತ ಗ್ರಾನೈಟ್ ಕುಳ ಅಶ್ವಿನ್ ಮತ್ತು ಆತನ ಗಾಡ್‌ಫಾದರ್ ಮಲ್ಲೇಶ್ ಎಂಬ ಢೋಂಗಿ ರೈತನಾಯಕ ಕರೆತಂದಿದ್ದ ಗೂಂಡಾಪಡೆ. ಬೇಲಿ ಸುತ್ತಿದ್ದು ಯಾವುದೋ ಕೆರೆ ಭೂಮಿಯೋ, ಗೋಮಾಳವೋ ಆಗಿದ್ದರೆ ಆ ಮಾತು ಬೇರೆ, ಪಶ್ಚಿಮ ಕುಮಾರಪಾರ್ಕ್ ಒಂದನೇ ಬ್ಲಾಕ್ ಜಲಮಂಡಳಿಯ ಓವರ್‌ಹೆಡ್ ಟ್ಯಾಂಕ್ ಎಂದರೆ ಅದು ಕುಮಾರಕೃಪಾ ಗೆಸ್ಟ್‌ಹೌಸ್, ಅಶೋಕಾ ಹೊಟೇಲ್, ಮುಖ್ಯಮಂತ್ರಿ ನಿವಾಸ, ಚಿತ್ರಕಲಾ ಪರಿಷತ್, ಬಿಡಿಎ ಕೇಂದ್ರ ಕಚೇರಿ ಸೇರಿದಂತೆ ಶಿವಾನಂದ ಸ್ಟೋರ್ಸ್, ಕುಮಾರಪಾರ್ಕ್, ಶೇಷಾದ್ರಿಪುರಂ, ಗಾಂಧಿಭವನ ಮುಂತಾದ ಏರಿಯಾಗಳಿಗೆ ಪ್ರತಿನಿತ್ಯ ಕಾವೇರಿ ನೀರೊದಗಿಸುವ ಜೀವಸೆಲೆಯಿದ್ದಂತೆ.


ರೈಲ್ವೇ ಪ್ಯಾರಲಲ್ ರಸ್ತೆ ಅಂದರೆ ಶಿವಾನಂದ ಸರ್ಕಲ್‌ನಿಂದ ಬಿಡಿಎಗೆ ಹೋಗುವ ವಿಶಾಲ ರಸ್ತೆಗೆ ಹೊಂದಿಕೊಂಡಂತೆ ಜಲಮಂಡಳಿಯ ದೈತ್ಯ ಮುಗಿಲೆತ್ತರದ ಟ್ಯಾಂಕಿಗೆ ನೀರು ಪಂಪ್ ಮಾಡಲು ಮತ್ತು ಅಲ್ಲಿಂದ ಸುತ್ತಮುತ್ತಲ ಏರಿಯಾಗಳಿಗೆ ನೀರೊದಗಿಸಲೆಂದು 13x120 ಉದ್ದ ಕೊಳವೆ ಮಾರ್ಗವೇ ಸದ್ಯ ಮೈಸೂರಿನ ಗ್ರಾನೈಟ್ ಖದೀಮನ ಐಷಾರಾಮೀ ಕಾಂಪ್ಲೆಕ್ಸ್‌ಗಾಗಿ ಒತ್ತುವರಿಯಾಗಿರುವುದು. ಓವರ್‌ಹೆಡ್ ಟ್ಯಾಂಕ್‌ನಿಂದ ಭೂಗರ್ಭದ ಆರಡಿ ಆಳದಲ್ಲಿ ಹಾದುಹೋದ ಕೊಳವೆ ಮಾರ್ಗಕ್ಕೆ ಹೊಂದಿಕೊಂಡಂತೆಯೇ ಅಶ್ವಿನ್‌ನ 26ನೇ ನಂಬರಿನ ನಿವೇಶನವಿದೆ. ಅದು 1956ರಲ್ಲಿ ಅಶ್ವಿನ್ ತಾತ ಹೆಚ್‌ಎನ್ ಪಾಳೇಗಾರ್ ಹೆಸರಿಗೆ ಸಿಐಟಿಬಿಯಿಂದ ಮಂಜೂರಾದ ಸೈಟು.

ಈ ಹಿಂದೆ ಸಿಐಟಿಬಿಯಾಗಿದ್ದು ಕ್ರಮೇಣ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಾಗಿ ಅಸ್ತಿತ್ವಕ್ಕೆ ಬಂದ ಬಿಡಿಎ ದಾಖಲೆಗಳ ಪ್ರಕಾರವೇ ಪಾಳೇಗಾರ್ ಹೆಸರಿಗೆ ಮಂಜೂರಾದ ಸೈಟಿನ ವಿಸ್ತಾರ 70x120 ಅಡಿಗಳು ಮಾತ್ರ. ಇದಕ್ಕೆ ಹೊಂದಿಕೊಂಡಂತೆ ಜಲಮಂಡಳಿಯ 120x13 ಚದುರ ಅಡಿಗಳ ಕೊಳವೆ ಮಾರ್ಗದಲ್ಲಿ ಲಾರಿಯೊಂದು ಸಲೀಸಾಗಿ ಹೋಗಿ ನೀರು ತುಂಬಿಸಿಕೊಂಡು ಬರಬಹುದಾದಷ್ಟು ಸ್ಥಳಾವಕಾಶವಿತ್ತು, ನಿನ್ನೆಮೊನ್ನೆಯ ತನಕ ಜಲಮಂಡಳಿಯ ಸೊತ್ತೆಂದೇ ಜನ ಬಳಸುತ್ತಿದ್ದ ಈ ಖಾಲಿ ಜಾಗವನ್ನು ಅಕ್ಕಪಕ್ಕದ ನಿವೇಶನದಾರರ್‍ಯಾರೂ ಮುಟ್ಟರಲಿಲ್ಲ, ಆದರೆ 2015ರ ಮಾರ್ಚ್ ಹೊತ್ತಿಗೆ ತಾತ ಪಾಳೇಗಾರನ ಹಳೇ ಬಂಗಲೆ ನೆಲಸಮಗೊಳಿಸಿ ಅಲ್ಲೊಂದು ವಾಣಿಜ್ಯ ಮಳಿಗೆಯನ್ನೆಬ್ಬಿಸಲು ಅಶ್ವಿನ್ ಬುಲ್ಡೋಜರ್ ನುಗ್ಗಿಸಿದ್ದೇ ಬಂತು.

ಮೊದಮೊದಲು ತನ್ನ 70x120 ಸೈಟಿನಲ್ಲಿ ಕಾಮಗಾರಿ ಶುರುವಿಟ್ಟ ಅಶ್ವಿನ್ 2015ರ ಜೂನ್ ಹೊತ್ತಿಗೆ ಪಕ್ಕದ 10x120 ಅಡಿಗಳ ವಿಸ್ತಾರದ ಜಲಮಂಡಳಿ ಕೊಳವೆ ಮಾರ್ಗವನ್ನೂ ಸೇರಿಸಿ ಕಾಂಪೌಂಡ್ ಎಬ್ಬಿಸಿಬಿಟ್ಟ. ಆ ತನಕ ಸಹಿಸಿಕೊಂಡು ಬಂದಿದ್ದ ಅಕ್ಕಪಕ್ಕದ ಜನ ಪ್ರಶ್ನಿಸಿದರೆ ಒಂದು ಡಜನ್ ಮೈಸೂರಿನ ರೌಡಿಗಳನ್ನೂ ಸೋಕಾಲ್ಡ್ ರೈತನಾಯಕನೆಂಬ ತೋಲಾಂಡಿ ಮಲ್ಲೇಶ್‌ನನ್ನೂ ಛೂಬಿಡುತ್ತಿದ್ದ. ಈ ಬಗ್ಗೆ ಜನ ಜಲಮಂಡಳಿಗೆ ದೂರು ಕೊಟ್ಟಿದ್ದಾರೆ. ಜನ ಇನ್ನೇನು ಬೀದಿಗಿಳಿದು ಪ್ರತಿಭಟಿಸಬೇಕೆನ್ನುವಷ್ಟರಲ್ಲಿ ಎಚ್ಚೆತ್ತ ಜಲಮಂಡಳಿಯ ಚೀಫ್ ಇಂಜಿನಿಯರ್ ಕೃಷ್ಣಪ್ಪ ಆಸ್ತಿ ರಕ್ಷಣೆಗೆಂದು ಜೆ.ಇ. ಲಕ್ಷ್ಮಿನರಸಿಂಹಯ್ಯ ಮತ್ತು ಎಇಇ ಸೋಮಸುಂದರ್‌ರನ್ನು ಕಳಿಸಿದ್ದಾರೆ.



ಸೋಮಸುಂದರ್



ಲಕ್ಷ್ಮಿನರಸಿಂಹಯ್ಯ

ಮೊನ್ನೆ ಜೂನ್ 19ರಂದು ಜಲಮಂಡಳಿಯ ಇಂಜಿನಿಯರ್‌ಗಳಿಬ್ಬರೂ ರೈಲ್ವೇ ಪ್ಯಾರಲಲ್ ರಸ್ತೆಯ ಸೊತ್ತಿಗೆ ಬರುತ್ತಿದ್ದಂತೆ ಅಶ್ವಿನ್ ಪಾಳೇಗಾರ್‌ನ ರೌಡಿಪಡೆ ಜಲಮಂಡಳಿ ಅಳವಡಿಸಿದ್ದ ಗೇಟನ್ನೇ ಕಿತ್ತೆಸೆಯಲೆತ್ನಿಸುತ್ತಿತ್ತು. ಇದಕ್ಕೆ ಇಂಜಿನಿಯರ್‌ಗಳಿಬ್ಬರು ಅಡ್ಡ ನಿಂತು ಪ್ರತಿಭಟಿಸಿದ್ದಾರೆ. ಅದೆಲ್ಲಿದ್ದನೋ ಮೈಸೂರಿನ ಬಿಜೆಪಿ ಪುಢಾರಿ ಮಲ್ಲೇಶ್ ಹತ್ತಾರು ಗೂಂಡಾಗಳೊಂದಿಗೆ ನುಗ್ಗಿದ್ದೇ ಇಂಜಿನಿಯರ್‌ಗಳಿಬ್ಬರನ್ನೂ ಅಟ್ಟಾಡಿಸಿ 'ನಾನ್ಯಾರು ಗೊತ್ತಾ? ಒಂದ್ ಫೋನ್ ಮಾಡ್ದೆ ಅಂದ್ರೆ ಸಿಯೆಮ್ಮೇ ಇಲ್ಲಿಗೆ ಬರ್ತಾರೆ. ನಿಮ್ಮನ್ನೆಲ್ಲ ಈಗ್ಲೇ ಸಸ್ಪೆಂಡ್ ಮಾಡಿಸ್ತೀನಿ. ಲೋಕಾಯುಕ್ತಕ್ಕೆ ಹಾಕಿ ಕೊಡ್ತೀನಿ...!' ಎಂದೆಲ್ಲಾ ಕುಣಿದುಬಿಟ್ಟ.

ಸ್ಥಳಕ್ಕೆ ಶೇಷಾದ್ರಿಪುರಂ ಪೊಲೀಸರು ಬಂದರಾದರೂ ಮಲ್ಲೇಶನ ಅವತಾರ ನೋಡಿದ್ದೇ ಯಾರೋ ಪ್ರಭಾವಿಯಿರಬೇಕೆಂದು ಜಲಮಂಡಳಿಯ ಅಧಿಕಾರಿಗಳನ್ನೇ ಸಮಾಧಾನ ಮಾಡಿ ಹೇಳಿಕೆಗೆ ಸಹಿ ಹಾಕಿಸಿಕೊಂಡರು. ವಿಚಿತ್ರವೆಂದರೆ ಅಶ್ವಿನ್ ಪಾಳೇಗಾರ್ ಇದು ತನ್ನ ಸೊತ್ತೆಂದೂ ಜಲಮಂಡಳಿ ಇಂಜಿನಿಯರ್‌ಗಳೇ ಬೆದರಿಕೆ ಹಾಕುತ್ತಿದ್ದಾರೆಂದೂ ಪೊಲೀಸರಿಗೆ ದೂರು ಕೊಟ್ಟಿದ್ದ!

ಈಗ ನೋಡಿದರೆ ತಮ್ಮದೇ ಸೊತ್ತಿಗೆ ಹೋಗಲು ಜಲಮಂಡಳಿ ಸಿಬ್ಬಂದಿಗೆ ಒಂದೆಡೆ ಪೊಲೀಸರ ಭಯ ಮತ್ತೊಂದೆಡೆ ಪಾಳೇಗಾರನ ರೌಡಿ ಪಡೆಯ ಭೀತಿ. ಅನಾದಿಕಾಲದಿಂದಲೂ ಜಲಮಂಡಳಿಯ ಸೊತ್ತಾಗಿದ್ದ ಕುಮಾರಪಾರ್ಕ್ ಕೊಳವೆ ಮಾರ್ಗದ ಆಸ್ತಿ ಅದ್ಯಾವತ್ತು ಅಶ್ವಿನ್ ಪಾಳೇಗಾರನ ಸೊತ್ತಾಯಿತೆಂದು ಜನ ಕೆದಕ ಹೊರಟರೆ ಗೊತ್ತಾಗಿದ್ದು ಬಿಡಿಎ ಮತ್ತು ಜಲಮಂಡಳಿಯ ಪೂರ್ವಿಕ ಅಧಿಕಾರಿಗಳು ಎಸಗಿದ ಘಾತುಕ. 1956ರಲ್ಲಿ ಹೆಚ್.ಎನ್. ಪಾಳೇಗಾರ್ ಹೆಸರಿಗೆ ಸಿಐಟಿಬಿ ಮಂಜೂರು ಮಾಡಿದ್ದು ರೈಲ್ವೇ ಪ್ಯಾರಲಲ್ ರಸ್ತೆಯ 120x70 ಅಳತೆಯ ಸೈಟಾದರೂ 1961ರಲ್ಲಿ ಜಲಮಂಡಳಿಗೆ ಸೇರಿದ್ದ 13x120 ಅಡಿಯಲ್ಲಿ 10x120 ಭಾಗ ತನಗೇ ಸೇರಬೇಕೆಂದು ಪಾಳೇಗಾರ್ ಕೋರ್ಟ್ ಮೊರೆ ಹೊಕ್ಕಿದ್ದ, ಜಲಮಂಡಳಿ ಮತ್ತು ಸಿಐಟಿಬಿಯವರನ್ನು ಬುಟ್ಟಿಗೆ ಹಾಕಿಕೊಂಡೇ ಪಾಳೇಗಾರ್ ಈ ತಂತ್ರ ಬಳಸಿದ್ದನಾದರೂ ಕೋರ್ಟು ನೆತ್ತಿಗೆ ಬಡಿದಂತೆ ಇದು ಜಲಮಂಡಳಿ ಸೊತ್ತೆಂದೇ ತೀರ್ಪಿತ್ತಿತ್ತು;

ಪಾಳೇಗಾರ್ ನಿಧನಾನಂತರ ಆತನ ಸೈಟು ಮಗ ರಾಜಶೇಖರ್ ವಶಕ್ಕೆ ಬಂದು ಆತನೂ ಕಾಯಿಲೆ ಬಿದ್ದು ಸತ್ತನಂತರ ಪತ್ನಿ ವಾಸಂತಿ ರಾಜಶೇಖರ್ ಸೊತ್ತಾಯಿತು. ಆಕೆಗೂ ಮಾವನದ್ದೇ ವಂಶವಾಹಿ ಭೂದಾಹ. ಇಸವಿ 2000ರಲ್ಲಿ ಪಕ್ಕದ 10x120 ಜಲಮಂಡಳಿ ಸೊತ್ತು ತನಗೆ ಸೇರಿದ್ದು ಇದಕ್ಕೆ ಜಲಮಂಡಳಿಯವರು ಅತಿಕ್ರಮಿಸಿ ಕಿರುಕುಳ ನೀಡುತ್ತಿದ್ದಾರೆಂದು ಮತ್ತೆ ಕೋರ್ಟ್ ಮೊರೆ ಹೊಕ್ಕಳು. ಸಿಐಟಿಬಿ ಮಂಜೂರು ಮಾಡಿದ್ದು 70x120 ಸೈಟಾದರೂ ಈ ಬಾರಿ ವಾಸಂತಿ ತನ್ನ ಸೈಟು 80x120 ಅಳತೆಯದ್ದೆಂದು ಪಕ್ಕದ ಜಲಮಂಡಳಿಯದ್ದನ್ನೂ ಸೇರಿಸಿ ದಾವೆ ಹೂಡಿದ್ದಳು.

ಇದನ್ನು ಸೂಕ್ಷ್ಮವಾಗೇ ಗಮನಿಸಿದ ಕೋರ್ಟು ಆಕ್ರಮಿಸಿದ್ದ 10x120 ಜಾಗ ಜಲಮಂಡಳಿಗೆ ಸೇರಿಕೊಂಡು ಇದರಲ್ಲಿ ಪಾಳೇಗಾರ್ ಸೊಸೆಗೆ ಯಾವುದೇ ಹಕ್ಕಿಲ್ಲವೆಂದು ಸ್ಪಷ್ಟಪಡಿಸಿತ್ತು, ಹಾಗಿದ್ದೂ ಬಿಡಿಎ ಬಕಾಸುರರು ಬಿಡಬೇಕಲ್ಲ, ಕಾಸುಕೊಟ್ಟರೆ ವಿಧಾನ ಸೌಧಕ್ಕೇ ಖಾತೆ ಮಾಡಿಕೊಡುವಂಥ ಖದೀಮರು ಬಿಡಿಎನಲ್ಲಿಲ್ಲವೆ? ಅದೇನು ಡೀಲು ಕುದುರಿತೋ 2011ರ ಹೊತ್ತಿಗೆ ಬಿಡಿಎ ಮತ್ತು ವಾಸಂತಿ ರಾಜಶೇಖರ್ ಹೆಸರಿಗೆ ವಿಚಿತ್ರ ಕ್ರಯಪತ್ರವೊಂದು ಸೃಷ್ಟಿಯಾಯಿತು.

2011ರ ಸೆಪ್ಟೆಂಬರ್ 16ರಂದು ಗಾಂಧಿನಗರದ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾವಣೆಗೊಂಡ ಬಿಡಿಎ ಶುದ್ಧ ಕ್ರಯಪತ್ರದ ಪ್ರಕಾರ ಹಿಂದಿದ್ದ 70x120 ಅಳತೆಯ ನಿವೇಶನಕ್ಕೆ ಪಕ್ಕದ ಜಲಮಂಡಳಿಯ ಹತ್ತಡಿ ಸೇರಿಸಿ 80x120 ನಿವೇಶನವನ್ನಾಗಿ ಬದಲಾಯಿಸಲಾಗಿತ್ತು, ಹಿಂದಿದ್ದ 70x120 ಈಗ 80x120 ಆಗಿದ್ದು ಹೇಗೆಂಬ ಬಗ್ಗೆ ಯಾವುದೇ ಕಾರಣ, ವಿವರಣೆಯಿರ[...] ಹಿಂದೆ ಪಾಳೇಗಾರ್ ಹೆಸರಿಗೆ ಮಂಜೂ[...] ನೋಂದಾಯಿಸಲಾಗಿದ್ದನ್ನು ಈಗ ಮತ್ತೆ ಬಿಡಿಎ ಎರ[...] ಬಾರಿ ಹತ್ತಡಿ ವಿಸ್ತರಿಸಿದ್ದೇಕೆಂಬ ಬಗ್ಗೆ ಎ[...] ಮಾಹಿತಿಯಿರಲಿಲ್ಲ, ಅದಕ್ಕೆಂದು ಬಿಡಿಎ ಕಟ್ಟಿಸಿಕೊಂ[...] ಕೇವಲ 8 ಸಾವಿರದ ನಾನೂರ ಅರವತ್ತು ರೂಪಾ[...] ಮಾತ್ರ.

ಆ ಹೊತ್ತಿಗೆ ಪ್ರತಿಷ್ಠಿತ ಕುಮಾರಪಾರ್ಕ್‌ನಲ್ಲಿ ಚ[...] ಅಡಿಯೊಂದಕ್ಕೆ 18 ಸಾವಿರ ರೂಪಾಯಿ ಮಾರು[...] ಮೌಲ್ಯವಿತ್ತು, ಆ ಪ್ರಕಾರ ಇದರ ಮೌಲ್ಯವೇ ಆರೂ[...] ಕೋಟಿ. ಹೆಚ್ಚುವರಿ ಹತ್ತಡಿಯನ್ನೇ ಹಿಂದಿದ್ದ ಸೈ[...] ಸೇರಿಸುವುದಾದರೆ ಅದಕ್ಕೆ 8 ಸಾವಿರ ಚಿಲ್ಲರೆಯ[...] ಯಾವ ಕಾರಣಕ್ಕೆ ವಿಧಿಸಲಾಯ್ತೆಂಬ ಯಾವ ವಿವರಣೆ[...] ಇಲ್ಲ, ಅಲ್ಲಿಗಿದು ಬಿಡಿ ಭ್ರಷ್ಟಾಚಾರವಲ್ಲದೇ ಮತ್ತೇ[...] ಯಾರ ಗಮನಕ್ಕೂ ಬಾರದೇ ಒಳಗಿಂದೊಳಗೆ ಸದ್ದಿ[...] ನಡೆದುಹೋದ ಈ ದಾಖಲೆಗಳನ್ನಿಟ್ಟುಕೊಂಡೇ ಅಶ್ವಿನ್ ಪಾಳೇಗಾರ್ ಬುಲ್ಡೋಜರ್ ನುಗ್ಗಿ[...] ಜಲಮಂಡಳಿ ಸೊತ್ತಿಗೆ ಬೇಲಿ ಸುತ್ತಿದ್ದು!

ಅವತ್ತು ಬಿಡಿಎ ಖದೀಮರು ಎಸಗಿದ ದ್ರೋ[...] ಫಲವನ್ನು ಈಗ ಕುಮಾರಪಾರ್ಕ್ ನಿವಾಸಿ[...] ಅನುಭವಿಸಬೇಕಾಗಿದೆ. ಮುಂದೊಮ್ಮೆ ಪಾಳೇಗಾ[...] ಕಾಂಪ್ಲೆಕ್ಸ್‌ನಿಂದಾಗಿ ಭೂಗರ್ಭದ ಜಲಮಂ[...] ಕೊಳವೆಗಳಿಗೇನಾದರೂ ಜಖಮ್ಮಾದರೆ [...] ಕುಮಾರಪಾರ್ಕ್ ಏರಿಯಾಕ್ಕೇ ಕಾವೇರಿ ನ[...] ದಕ್ಕದಂತಾಗುತ್ತದೆ. ಮುಖ್ಯಮಂತ್ರಿ ನಿವಾಸವಷ್ಟೇ [...] ಕುಮಾರ ಕೃಪಾ, ಅಶೋಕಾ ಹೊಟೇಲ್, ಚಿತ್ರಕಲಾ ಪರಿ[...] ಮತ್ತು ಬಿಡಿಎಗೂ ಹನಿ ನೀರಿಲ್ಲದೆ ಪರದಾಡಬ[...] ಅಷ್ಟಕ್ಕೂ ಜಲಮಂಡಳಿ ಸೊತ್ತನ್ನೇ ಖದೀಮರ ಸೊ[...] ಮಾಡಿದ ಬಿಡಿಎ ಖದೀಮರನ್ನು ಶಿಕ್ಷಿಸುವವರ್‍ಯಾರು[...]

ಜಲಮಂಡಳಿಯ ಸೊತ್ತನ್ನೇ ತನ್ನ ಖಾಸಗಿ ಸೊತ್ತ[...] ಆಕ್ರಮಿಸಿದ ಅಶ್ವಿನ್ ಪಾಳೇಗಾರರನ್ನು ಬಿಡಿಎ, ಪಾ[...] ಜಲಮಂಡಳಿ, ಸರ್ಕಾರ ಯಾರಿಂದಲೂ ಶಿಕ್ಷಿಸಲಾಗ[...] ಏಕೆ?

■ ರಾ. ಸೋಮನಾ[...]


ಮೈಸೂರಿನ ಪುಢಾರಿ ಮಲ್ಲೇಶ್ ಹಾವಳಿ, ಎತ್ತುವ[...]

ಅಷ್ಟಕ್ಕೂ ಬೆಂಗಳೂರಿನ ಜಲಮಂಡಳಿ ಸೊತ್ತಿಗೂ ಮೈಸೂರಿನ ಪುಢಾರಿ ಮಲ್ಲೇಶ್‌ಗೂ ಏನಕೇನ ಸಂಬಂಧವೆಂಬು[...] ಕೆದಕ ಹೊರಟರೆ ಅದು ಗಡಿ ಜಿಲ್ಲೆ ಚಾಮರಾಜನಗರದ ದಟ್ಟಾರಣ್ಯದ ಗ್ರಾನೈಟ್ ಲೂಟಿಯ ಕತೆಯಾಗುತ್ತದೆ. ಅ[...] ಪಾಳೇಗಾರ್ ತನ್ನ ತಾಯಿಯ ತವರೂರು ಮೈಸೂರಿನಲ್ಲಿ ನೆಲೆಗೊಂಡು ಅಲ್ಲಿಂದ ಚಾಮರಾಜನಗರದ ಕ[...] ಕಾಲಿಟ್ಟದ್ದು 1995ರಲ್ಲಿ, ಇತ್ತ ವೀರಪ್ಪನ್ ಅಟ್ಟಹಾಸ ಒಂದು ಹಂತಕ್ಕೆ ಬಂದು ನಿಲ್ಲುತ್ತಿದ್ದಂತೆ ಸದ್ದಿಲ್ಲದೆ ಗ್ರಾ[...] ಲೂಟಿ ಚಿಗುರಲಾರಂಭಿಸಿತು.

ಇದರ ಪ್ರತಿಫಲವೆಂಬಂತೆ ಅಶ್ವಿನ್ ಕಳ್ಳ ದಾಖಲೆ ಸೃಷ್ಟಿಸಿ ಬಿಳಿಗಿರಿರಂಗನ ಬೆಟ್ಟದ ತಪ್ಪಲಲ್ಲಿ ಗ್ರಾನೈಟ್ ಲೂಟಿಗ[...] ಇದಕ್ಕೆ ಕುಮ್ಮಕ್ಕಾಗಿ ನಿಂತವನೇ ಮಾಜಿ ರೈತನಾಯಕ ಹಾಲಿ ಬಿಜೆಪಿ ಪುಢಾರಿ ಮಲ್ಲೇಶ್. ಮೊದಮೊದಲು ರೈತನಾ[...] ನಂಜುಂಡಸ್ವಾಮಿಗೆ ಮಲ್ಲೇಶ್ ನಿಯತ್ತಾಗೇ ಇದ್ದ, ಕಬ್ಬು ಬೆಳೆಗಾರರ ಉದ್ಧಾರದ ಹೆಸರಲ್ಲಿ ಟನ್ನು ಕಬ್ಬಿಗೆ ಎ[...] ರೂಪಾಯಿ ಸಂಗ್ರಹಿಸುತ್ತಿದ್ದ ಮಲ್ಲೇಶ್ ರೈತರ ದುಡ್ಡು ಕಬಳಿಸಿದ್ದು ಗೊತ್ತಾಗಿದ್ದೇ ನಂಜುಂಡಸ್ವಾಮಿ ಸಿಟ್ಟಿಗೆದ್ದು ಟ[...] ಕಿತ್ತು ಹೊರದಬ್ಬಿದ್ದರು.

ಆದರೆ ಮಲ್ಲೇಶ್ ಅಷ್ಟಕ್ಕೇ ಬುದ್ಧಿ ಕಲಿಯುವವನಲ್ಲವಲ್ಲ, ಬಿಜೆಪಿ ಸೇರಿಕೊಂಡ. ಯಡ್ಡಿ ಮುಖ್ಯಮಂತ್ರಿಯಾ[...] ತಾನೂ ಲಿಂಗಾಯತ ಯಡ್ಡಿಗೆ ಪರಮಾಪ್ತ ಎಂದು ಹಾವಳಿಗಿಳಿದ. ಎತ್ತುವಳಿ ಮಾಡಿಯೇ ಮೈಸೂರಿನಲ್ಲೊ[...] ಬಂಗಲೆಯೆಬ್ಬಿಸಿದ. ಅಶ್ವಿನ್ ಪಾಳೇಗಾರ್ ಒಂದೆಡೆ ಗ್ರಾನೈಟ್ ಲೂಟಿಗಿಳಿದರೆ ಮತ್ತೊಂದೆಡೆ ಮಲ್ಲೇಶನ ಜಲ[...] ಕ್ವಾರಿ, ಕ್ರಷರ್ ದಂಧೆಯೂ ಶುರುವಾಯಿತು. ರೈತ ಹೋರಾಟದಿಂದ ಬಂದು ಪರಿಸರ ಲೂಟಿ ಮಾಡೋದು ಸ[...] ಎಂದು ಜನ ಪ್ರಶ್ನೆಯಿಟ್ಟರೆ ನಾನು ಬಿಜಿನೆಸ್ ಮಾಡ್ಲೇಬಾರ್ದೇನ್ರೀ....? ಎಂದು ಮೂಗು ಮುರಿಯುತ್ತಿದ್ದ. [...] ಕಾಂಗ್ರೆಸ್ ಸರ್ಕಾರವಿದೆಯಲ್ಲ ಬಹುಶಃ ಮಲ್ಲೇಶನ ಸವಾರಿ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಮನೆಯತ್ತ ಸಾಗಿರಬ[...] ಜಲಮಂಡಳಿ ಸೊತ್ತಿಗೆ ಕೈಹಾಕಿದ್ದಾನೆ...!

ಗುಮಾನಿಯ ಮೇಲೆ ಗಲ್ಲಿಗೇರಿಸುವುದು ಸರಿಯೇ?



ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಕೊಲೆ ...ರಿಯಲ್ಲಿ ಪಾಲ್ಗೊಂಡಿದ್ದ ಎಂದು ಆರೆಸ್ಸೆಸ್‌ನ ...ಮು ನಾಯಕ ವಿನಾಯಕ್ ದಾಮೋದರ್ ...ರ್ಕರ್‌ನನ್ನೂ ಇತರೆ ಏಳು ಜನರೊಂದಿಗೆ ...ಸಲಾಗಿತ್ತು. ಆದರೆ ಸಾವರ್ಕರ್ ವಿರುದ್ಧ ...ವುದೇ ಸಾಕ್ಷ್ಯಗಳಿಲ್ಲವೆಂದು ಆನಂತರ ಬಿಡುಗಡೆ ...ಲಾಗಿತ್ತು. ಉಳಿದ ಎಂಟು ಜನರಲ್ಲಿ ಗಾಂಧಿಯ ...ಯಲ್ಲಿ ನೇರವಾಗಿ ಭಾಗಿಯಾಗಿದ್ದ ನತ್ತುರಾಮ್ ...ಡ್ಸೆ ಮತ್ತು ನಾರಾಯಣ್ ಆಪ್ಟೆ ಎಂಬ ಇಬ್ಬರಿಗೆ ...ತ್ರ ಗಲ್ಲುಶಿಕ್ಷೆಯನ್ನು ವಿಧಿಸಲಾಗಿತ್ತು.

...ಗೋಡ್ಸೆಯ ಸಹೋದರ ಗೋಪಾಲ್ ಗೋಡ್ಸೆ ...ತ್ರ ಇತರೆ ಐವರಿಗೆ ಜೀವಾವಧಿ ಶಿಕ್ಷೆಯನ್ನು ಮಾತ್ರ ...ಸಲಾಗಿತ್ತು. ಅವರೆಲ್ಲ ಹಲವು ವರ್ಷಗಳ ಕಾಲ ...ನಲ್ಲಿದ್ದು ಬಿಡುಗಡೆಗೊಂಡಿದ್ದರು. ಗೋಪಾಲ್ ...ಡ್ಸೆ 18 ವರ್ಷ ಜೈಲಿನಲ್ಲಿದ್ದು 1964ರಲ್ಲಿ ...ರಬಂದಿದ್ದ. ಆತ 1998ರಲ್ಲಿ ಕೊಟ್ಟ ...ರ್ಶನದಲ್ಲಿ ಗಾಂಧಿಯನ್ನು ಕೊಲೆ ಮಾಡಿದ್ದರ ಬಗ್ಗೆ ...ತ್ತೂ ಪಶ್ಚಾತ್ತಾಪ ಇಲ್ಲವೆಂದೇ ಹೇಳಿದ್ದ. ಅಷ್ಟೇ ಬಿಡುಗಡೆಗೊಂಡ ನಂತರ 'ಜೀವಾವಧಿ ಶಿಕ್ಷೆಗೆ ಗುರಿಯಾಗಿರುವವರು ಜೈಲಿನಲ್ಲೇ ಸಾಯಬೇಕೆ?' ಎಂಬ ಪುಸ್ತಕವನ್ನೂ ಬರೆದಿದ್ದ.

ಅಂದರೆ ಈ ಹಿಂದೆ ನಮ್ಮ ದೇಶದಲ್ಲಿ ಕೊಲೆಯಲ್ಲಿ ನೇರವಾಗಿ ಭಾಗಿಯಾದವರಿಗೆ ಮಾತ್ರ - ಅದರಲ್ಲೂ ಅಪರೂಪದಲ್ಲಿ ಅಪರೂಪದ ಕೊಲೆ ಪ್ರಕರಣ ಎಂದಾದಲ್ಲಿ ಮಾತ್ರ - ಮರಣದಂಡನೆಯನ್ನು ವಿಧಿಸಲಾಗುತ್ತಿತ್ತೇ ಹೊರತು, ಕೊಲೆ ಸಂಚಿನಲ್ಲಿ ಭಾಗಿಯಾದವರಿಗೆ ಹೆಚ್ಚೆಂದರೆ ಹಲವು ವರ್ಷಗಳ ಜೀವಾವಧಿ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಆದರೆ ಇಂದಿರಾ ಗಾಂಧಿ ಕೊಲೆಯ ನಂತರ ಪರಿಸ್ಥಿತಿ ಬದಲಾಗಿದೆ. ಇಂದಿರಾ ಗಾಂಧಿಯ ಕೊಲೆಯಲ್ಲಿ ಸತ್ವಂತ್ ಸಿಂಗ್ ಮತ್ತು ಬಿಯಾಂತ್ ಸಿಂಗ್ ನೇರವಾಗಿ ಭಾಗಿಯಾಗಿದ್ದರು. ಕೊಲೆ ಆದ ನಂತರ ಬಿಯಾಂತ್ ಸಿಂಗ್ ಇತರೆ ಪೊಲೀಸರನ್ನು ಕೊಲ್ಲಲು ಯತ್ನಿಸಿದ ಎಂಬ ಕಾರಣಕ್ಕೆ ಅಲ್ಲಿದ್ದ ಇತರೆ ಅಂಗರಕ್ಷಕರು ಆತನನ್ನು ಕೊಂದು ಹಾಕಿದ್ದರು. ಆಮೇಲೆ ಸತ್ವಂತ್ ಸಿಂಗ್‌ನನ್ನು ಮತ್ತು ಕೊಲೆ ಸಂಚು ರೂಪಿಸುವಲ್ಲಿ ಭಾಗಿಯಾಗಿದ್ದ ಎಂಬ ಆರೋಪದಡಿ ಕೇಹರ್ ಸಿಂಗ್ ಎಂಬಾತನನ್ನೂ ಬಂಧಿಸಲಾಗಿತ್ತು. ಅಂತಿಮವಾಗಿ ಸುಪ್ರೀಮ್ ಕೋರ್ಟ್ ಅವರಿಬ್ಬರಿಗೂ ಮರಣದಂಡನೆಯನ್ನು ವಿಧಿಸಿತ್ತು. ಅಂದರೆ ಕೊಲೆ ಪಿತೂರಿಯಲ್ಲಿ ಭಾಗಿಯಾಗಿದ್ದ ಎಂಬ ಕಾರಣಕ್ಕೇ ಕೇಹರ್ ಸಿಂಗ್‌ನಿಗೂ ನೇಣುಗಂಬ ಎದುರಾಗಿತ್ತು. ಆಗ ಕೆಲವರು ಕೇಹರ್ ಸಿಂಗ್ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ ಎಂದು ವಾದಿಸಿದರೂ ಸುಪ್ರೀಂಕೋರ್ಟ್ ಅದನ್ನು ಕಿವಿ ಮೇಲೆ ಹಾಕಿಕೊಂಡಿರಲಿಲ್ಲ. ಅದಾದ ಬಹಳ ವರ್ಷಗಳ ನಂತರವೇ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಯೊಬ್ಬರು "ಕೇಹರ್ ಸಿಂಗ್‌ಗೆ ಮರಣದಂಡನೆ ವಿಧಿಸುವ ಮೂಲಕ ನಮ್ಮ ನ್ಯಾಯಾಲಯ ಎಡವಿತು" ಎಂದು ಒಪ್ಪಿಕೊಂಡಿದ್ದರು. ಆದರೆ ಅಷ್ಟು ಹೊತ್ತಿಗಾಗಲೇ ಸತ್ವಂತ್ ಸಿಂಗ್ ಮತ್ತು ಕೇಹರ್ ಸಿಂಗ್ ಅವರಿಬ್ಬರನ್ನು ಗಲ್ಲಿಗೇರಿಸಿ ಅದೆಷ್ಟೋ ವರ್ಷಗಳೇ ಆಗಿದ್ದವು. ಇಂತಹ ತಪ್ಪೊಪ್ಪಿಗೆಯಿಂದ ಕೇಹರ್ ಸಿಂಗ್‌ನ ಪ್ರಾಣ ವಾಪಸ್ಸು ಬರುತ್ತದೆಯೇ?

ಇದಾದ ನಂತರ ರಾಜೀವ್ ಗಾಂಧಿ ಹತ್ಯಾ ಪ್ರಕರಣದಲ್ಲೂ ಹೀಗೆಯೇ ಆಗಿತ್ತು. ರಾಜೀವ್ ಹತ್ಯೆಯ ಸಂಚನ್ನು ರೂಪಿಸಿದ್ದು ಎಲ್‌ಟಿಟಿಇ ನಾಯಕ ಪ್ರಭಾಕರನ್. ಅದರಂತೆ ಬಾಂಬ್ ಒಂದನ್ನು ಸ್ಫೋಟಿಸುವ ಮೂಲಕ ರಾಜೀವ್ ಗಾಂಧಿಯನ್ನು ಕೊಂದದ್ದಲ್ಲದೆ ತನ್ನ ಪ್ರಾಣವನ್ನೂ ಕಳೆದುಕೊಂಡಾಕೆ ಧನು. ಈ ಕೊಲೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಸಿವರಸನ್, ಸುಭಾ ಮತ್ತು ಇತರರನ್ನು ಬೆಂಗಳೂರಿನ ಪೊಲೀಸರು ಸುತ್ತುವರಿದಾಗ ಎಲ್ಲರೂ ಆತ್ಮಹತ್ಯೆಗೆ ಶರಣಾಗಿದ್ದರು. ಕೊನೆಗೂ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದು ಕೊಲೆಯ ಸಂಚಿನಲ್ಲಿ ಚಿಕ್ಕಪುಟ್ಟ ಪಾತ್ರವಹಿಸಿದ್ದ ಸಂಥಾನ್, ಮುರುಗನ್ ಮತ್ತು ಪೆರರಿವಲನ್. ಪೆರರಿವಲನ್ ಮೇಲಿರುವ ಆರೋಪ ಯಾವುದು ಗೊತ್ತಾ? ಆತ ಕೊಲೆ ತಂಡಕ್ಕೆ ಎರಡು ಚಿಕ್ಕ ಬ್ಯಾಟರಿ ಕೊಡಿಸಿದ್ದ ಎಂಬುದು. ಆ ಕಾರಣಕ್ಕೇ ನ್ಯಾಯಾಲಯ ಆತನಿಗೂ ಮರಣದಂಡನೆಯನ್ನು ವಿಧಿಸಿದೆ!

ಮಹಾತ್ಮ ಗಾಂಧಿಯವರ ಕೊಲೆಗೆ ಸೈದ್ಧಾಂತಿಕ ಪ್ರೇರಣೆ ಮತ್ತು ಇತರೆ ರೀತಿಯ ನೆರವು ನೀಡಿದ ಸಾವರ್ಕರ್ ಭಾವಚಿತ್ರ ಇಂದು ಸಂಸತ್ ಭವನದಲ್ಲಿ ರಾರಾಜಿಸುತ್ತಿದೆ. ಆದರೆ ಧನುಗೆ ಎರಡು ಬ್ಯಾಟರಿ ಕೊಡಿಸಿದ್ದಕ್ಕೆ ಪೆರರಿವಲನ್ ಗಲ್ಲುಗಂಬದ ಭೀತಿಯಲ್ಲಿ ಇವತ್ತಿಗೂ ನರಳುತ್ತಿದ್ದಾನೆ. ಇದು ಯಾವ ನ್ಯಾಯ?

ಕೊನೆಯದಾಗಿ, ಒಂದು ಮಾತನ್ನು ಎಲ್ಲರೂ ನೆನಪಿಟ್ಟುಕೊಳ್ಳಬೇಕು. ನಾತ್ತುರಾಮ್ ಗೋಡ್ಸೆಯನ್ನು ಗಲ್ಲಿಗೇರಿಸಿದ ನಂತರ ನಮ್ಮ ದೇಶದಲ್ಲಿ ಭಯೋತ್ಪಾದಕ ಕೃತ್ಯಗಳಲ್ಲಿ ಮತ್ತು ಕೋಮುಗಲಭೆಗಳಲ್ಲಿ ಭಾಗಿಯಾಗಿದ್ದಕ್ಕೆ ಯಾವ ಹಿಂದೂಗೂ ಗಲ್ಲುಶಿಕ್ಷೆ



ಆಗಿಲ್ಲ. ಆದರೆ ಅಂತಹ ಶಿಕ್ಷೆ ಗುರಿಯಾಗಿರುವವರೆಲ್ಲರೂ ಮುಸಲ್ಮಾನರು.


275 ಅಮಾಯಕರ ಸಾವಿಗೆ ಪರೋಕ್ಷವಾಗಿ ನೆರವಾಗಿದ್ದಿರಬಹುದು ಎಂಬ ಕಾರಣಕ್ಕೆ ಮೆನನ್‌ಗೆ ಗಲ್ಲು. ಆದರೆ ಮುಂಬೈ ಗಲಭೆಯಲ್ಲಿ 900 ಅಮಾಯಕರ ಕಗ್ಗೊಲೆಗೆ 'ಕಮ್ಯಾಂಡ್' ನಾಯಕತ್ವ ವಹಿಸಿದ ಶಿವಸೇನೆಯ ಬಾಳಾಠಾಕ್ರೆ ಮತ್ತು ಅವರ ಅನುಚರರನ್ನು ನ್ಯಾಯಾಧೀಶ ಶ್ರೀಕೃಷ್ಣ ಆಯೋಗ ನೇರವಾಗಿ ಹೆಸರಿಸಿದರೂ ಆತನಿಗೆ ಶಿಕ್ಷೆ ಇರಲಿ ಬಂಧನವೂ ಆಗಲಿಲ್ಲ. ಕೋರ್ಟುಗಳಲ್ಲಿ ಮಾಯಾ ಕೊಡ್ನನಿ, ಬಾಬಾ ಭಜರಂಗಿ ನೂರಾರು ಅಮಾಯಕರ ಹತ್ಯಾಕಾಂಡಕ್ಕೆ ನಾಯಕತ್ವ ವಹಿಸಿದ್ದು ಸಾಬೀತಾಗಿದ್ದರೂ ಕೋರ್ಟು ಅವರಿಗೆ ಮರಣದಂಡನೆ ವಿಧಿಸಲಿಲ್ಲ. ಇದರ ಹಿಂದಿನ ರಾಜಕೀಯವೇನು? ಈ ತಾರತಮ್ಯದ ಪರಿಣಾಮವೇನು?

ಒಂದು ಸ್ಪಷ್ಟನೆ: ಇಲ್ಲಿ ಪ್ರಶ್ನಿಸುತ್ತಿರುವುದು ನಮ್ಮ ವ್ಯವಸ್ಥೆ ಮಾಡುತ್ತಿರುವ ತಾರತಮ್ಯವನ್ನು. ಯಾರಿಗೂ ಮರಣಧಂಡನೆ ಕೊಡದು ಎಂಬುದೇ ನಮ್ಮ ನಿಲುವು.

ಗಲಭೆಕೋರರಿಗೆ ರಕ್ಷಣೆ

ಇದೆಂತಹ ವ್ಯಂಗ್ಯ ನೋಡಿ: ಸಂಸತ್ ಮೇಲಿನ ದಾಳಿಯಲ್ಲಿ ಭಾಗವಹಿಸಿದ್ದ ಎಂಬ ಗುಮಾನಿ ಮೇಲೆ ಅಫ್ಜಲ್ ...ವಿಗೆ ಗಲ್ಲು; ಸ್ವಯಂಪ್ರೇರಿತವಾಗಿ ಭಾರತಕ್ಕೆ ವಾಪಸ್ ಬಂದು ಶರಣಾದ ಯಾಕೂಬ್ ಮೆಮೆನ್‌ಗೂ ಗಲ್ಲುಗಂಬ ...ಟ್ಟ ಬುತ್ತಿ. ಆದರೆ 1984 ಸಿಖ್ ನರಮೇಧ, 1992-93ರ ಮುಂಬೈ ಕೋಮು ಗಲಭೆ, 2002ರ ಗುಜರಾತ್ ...ಕಾಂಡಕ್ಕೆ ಪ್ರೇರಣೆ ನೀಡಿದ, ಕುಮ್ಮಕ್ಕು ಕೊಟ್ಟ 'ನಾಯಕ'ರಿಗೆ ರಕ್ಷಣೆ ಮಾತ್ರವಲ್ಲ, ದೇಶವನ್ನು ಆಳುವ ಅಧಿಕಾರ!

ಇಂದಿರಾ ಗಾಂಧಿಯ ಹತ್ಯೆ ನಂತರ ಸಂಭವಿಸಿದ 1984ರ ಸಿಖ್ ನರಮೇಧದಲ್ಲಿ ಸುಮಾರು ಮೂರು ಸಾವಿರ ...ರನ್ನು ಕೊಂದು ಹಾಕಲಾಗಿತ್ತು. ಈ ನರಮೇಧಕ್ಕೆ ಸಂಬಂಧಿಸಿದಂತೆ 447 ಜನರನ್ನು ಬಂಧಿಸಲಾಗಿತ್ತು. ಅವರಲ್ಲಿ ...ಲ 49 ಜನರಿಗೆ ಜೀವಾವಧಿ ಶಿಕ್ಷೆಯನ್ನು ನಮ್ಮ ನ್ಯಾಯಾಲಯಗಳು ವಿಧಿಸಿವೆ. ಒಬ್ಬರಿಗೂ ಮರಣದಂಡನೆ ಸಿಕ್ಕಿಲ್ಲ. ಅಂದಹಾಗೆ, ಶಿಕ್ಷೆಗೆ ಗುರಿಯಾಗಿರುವವರೆಲ್ಲರೂ ಚಿಕ್ಕಪುಟ್ಟ ಕ್ರಿಮಿಗಳೇ ಹೊರತು ಆ ನರಮೇಧಕ್ಕೆ ಕುಮ್ಮಕ್ಕು ಕೊಟ್ಟ ಯಾವ ಹಿರಿಯ ನಾಯಕನನ್ನೂ ಪೊಲೀಸರು ಬಂಧಿಸುವುದಿರಲಿ, ಮುಟ್ಟಲೂ ಇಲ್ಲ.



ಇನ್ನು ಬಾಬ್ರಿ ಮಸೀದಿಯನ್ನು ಹಿಂದೂತ್ವವಾದಿಗಳು ಕೆಡವಿದ ನಂತರ ದೇಶದ ಇತರೆ ಕಡೆಗಳಲ್ಲಿ ನಡೆದಂತೆ ಮುಂಬೈನಲ್ಲಿ ದೊಡ್ಡ ಕೋಮುಗಲಭೆ ಸಂಭವಿಸಿತ್ತು. ಆಗ ಸುಮಾರು 900 ಜನ - ಹೆಚ್ಚಿನ ಸಂಖ್ಯೆಯಲ್ಲಿ ಮುಸಲ್ಮಾನರು - ಸಾವಿಗೀಡಾಗಿದ್ದರು. ತೀಸ್ತಾ ಸೆಟಿಲ್ವಾಡ್ ಮತ್ತು ಇತರರು ಕೋಮುಗಲಭೆಗೆ ಯಾರು ಕಾರಣ ಎಂದು ತನಿಖೆ ಮಾಡಲು ನ್ಯಾಯಾಂಗ ವಿಚಾರಣೆ ನಡೆಯಬೇಕೆಂದು ಒತ್ತಾಯಿಸಿದ್ದರಿಂದ ನ್ಯಾಯಮೂರ್ತಿ ಶ್ರೀಕೃಷ್ಣ ಅವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಲಾಗಿತ್ತು. ವಿಚಾರಣೆ ನಡೆಸಿದ ಆಯೋಗವು ಗಲಭೆಗೆ ಶಿವಸೇನೆಯ ನಾಯಕರೇ ಕಾರಣ ಎಂದು ಹೇಳಿತ್ತು ಕೂಡ. ಆದರೆ ಇಲ್ಲಿಯ ತನಕ ಮುಂಬೈ ಕೋಮುಗಲಭೆಗೆ ಸಂಬಂಧಿಸಿದಂತೆ ಯಾವ ಹಿಂದೂ ನಾಯಕನನ್ನೂ ಮಹಾರಾಷ್ಟ್ರ ಪೊಲೀಸರು ಬಂಧಿಸಿಯೇ ಇಲ್ಲ.

2002ರ ಗುಜರಾತ್ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ 120 ಜನರಿಗೆ ಶಿಕ್ಷೆ ವಿಧಿಸಿದೆ. ಮಾಯಾ ...ಡ್ನಾನಿ ಎಂಬ ಮಾಜಿ ಸಚಿವೆಗೆ 28 ವರ್ಷಗಳ ಸೆರೆವಾಸ ಮತ್ತು ಬಾಬು ಭಜರಂಗಿಗೆ ಜೀವಾವಧಿ ಶಿಕ್ಷೆಯನ್ನು ...ಧಿಸಿದೆ. ಇದೆಲ್ಲ ಸಾಧ್ಯವಾಗಿದ್ದು ಗುಜರಾತಿನ ಸರ್ಕಾರದಿಂದಾಗಿ ಅಲ್ಲ, ಬದಲಾಗಿ ತೀಸ್ತಾ ಎಂಬ ಮಾನವ ಹಕ್ಕುಗಳ ...ಹೋರಾಟಗಾರ್ತಿಯಿಂದಾಗಿ. ತೀಸ್ತಾ ಇಲ್ಲದಿದ್ದರೆ ಗುಜರಾತ್ ಮರಣಹೋಮಕ್ಕೆ ಸಂಬಂಧಪಟ್ಟಂತೆ ಯಾರೊಬ್ಬರಿಗೂ ...ಆಗುತ್ತಿರಲಿಲ್ಲ.

ಈಗ ಕೊಲೆಗಾರ್ತಿ ಮಾಯಾ ಕೊಡ್ನಾನಿ ಅನಾರೋಗ್ಯದ ಕಾರಣ ನೀಡಿ ಜಾಮೀನು ಮೇಲೆ ಹೊರಬಂದಿದ್ದಾಳೆ.

ಇದೆಲ್ಲದರ ಅರ್ಥ ಏನು? ನಮ್ಮ ದೇಶದಲ್ಲಿ ಕೋಮುಗಲಭೆ ಮಾಡಿಸಿ ನೂರಾರು ಜನರ ಸಾವಿಗೆ ಕಾರಣವಾದರೆ ...ವಾಗಿಲ್ಲ, ಆದರೆ ನೀವ ಅಮಾಯಕರಾಗಿದ್ದರೂ ನಿಮ್ಮ ಮೇಲೆ ಅಧಿಕಾರದಲ್ಲಿರುವವರಿಗೆ ಕಿಂಚಿತ್ ಗುಮಾನಿ ...ದರೂ ಸಾಕು ನೀವು ಗಲ್ಲಿಗೇರುತ್ತೀರಿ ಎಂಬ ಅರ್ಥವಲ್ಲವೇ?

ಯಾಕೂಬ್ ಮೆಮನ್ ಮಾಡಿದ ಅಪರಾಧಕ್ಕೆ ಶಿಕ್ಷೆಯಾಗಬೇಕು; ಅದನ್ನು ಆತ ಅನುಭವಿಸುತ್ತಿದ್ದಾನೆ. 'ಮರಣ ...ಡನೆ' ಆತ ಮಾಡದೇ ಇರುವ ಅಪರಾಧಕ್ಕೆ, ನಮ್ಮ ಹೆಸರಲ್ಲಿ ಕೋರ್ಟು ಶಿಕ್ಷೆ ನೀಡುತ್ತಿದೆ. ನಮ್ಮ ಕೈಗೆ ರಕ್ತ ...ಸುತ್ತಿದೆ. ಯಾಕೂಬ್ ಮಾಡಿರಬಹುದಾದ ಅಪರಾಧವನ್ನೇ ಅಡ್ವಾನಿ, ಮೋದಿ ಇನ್ನಿತರ ಗ್ಯಾಂಗ್ ಮಾಡಿದೆ. ಆದರೆ ...ಸಾಜದ ಸಾಮೂಹಿಕ ಪ್ರಜ್ಞೆ (ಪ್ರಜ್ಞೆ)'ಯನ್ನು ತಣಿಸಲು ಮೆಮೆನ್‌ನನ್ನು ಗಲ್ಲಿಗೇರಿಸುವ ಕೋರ್ಟು, ಈ ತಾರತಮ್ಯಕ್ಕೆ ...ನ್ನು ಕಾಲುಗಾರರನ್ನಾಗಿ ಮಾಡಿದೆ.

ದಲಿತರು ಮತ್ತು ಅಲ್ಪಸಂಖ್ಯಾತರಿಗೆ ಮಾತ್ರ ಮರಣದಂಡನೆ ಯಾಕೆ?



ಇತ್ತೀಚೆಗೆ ದೆಹಲಿಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ದೇಶದಾದ್ಯಂತ ಮರಣದಂಡನೆಗೆ ಗುರಿಯಾಗಿರುವ ಕೈದಿಗಳ ಸಮೀಕ್ಷೆಯನ್ನು ನಡೆಸಿದರು. ದೇಶದಲ್ಲೇ ಇಂತಹ ಒಂದು ಸಮೀಕ್ಷೆ ನಡೆದದ್ದು ಅದೇ ಮೊದಲ ಬಾರಿ. ವಿವಿಧ ಜೈಲುಗಳಲ್ಲಿರುವ ಒಟ್ಟು 373 ಕೈದಿಗಳನ್ನು ಮತ್ತು ಅವರ ಕುಟುಂಬಗಳ ಸದಸ್ಯರನ್ನು ಸಂದರ್ಶಿಸಿದ ನಂತರ ಗೊತ್ತಾಗಿದ್ದೇನೆಂದರೆ ಅವರಲ್ಲಿ ಶೇ. 75 ಜನ ಬಡವರು, ದಲಿತರು, ಹಿಂದುಳಿದ ವರ್ಗದವರು ಅಥವಾ ಅಲ್ಪಸಂಖ್ಯಾತರಾಗಿದ್ದರು. ಅಷ್ಟೇ ಅಲ್ಲ, ಅವರಲ್ಲಿ ಶೇ. 94 ಜನ ಒಂದೋ ದಲಿತರಾಗಿದ್ದರು ಅಥವಾ ಅಲ್ಪಸಂಖ್ಯಾತ ಕೋಮಿನವರಾಗಿದ್ದರು.

ಇದಕ್ಕೆ ಹಲವು ಕಾರಣಗಳೂ ಇದ್ದವು. ಮೊದಲನೆಯದು ಆರ್ಥಿಕ ಸಂಕಷ್ಟದಿಂದಾಗಿ ಅವರಿಗೆ ಸೂಕ್ತವಾದ ಕಾನೂನಿನ ನೆರವು ಸಿಗದಿರುವುದು. ಉದಾಹರಣೆಗೆ ಸಂಸತ್ತಿನ ಮೇಲಿನ ದಾಳಿಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ಅಫ್ಜಲ್ ಗುರು ಮತ್ತು ಎಸ್.ಎ.ಆರ್.ಜಿಲಾನಿಗೆ ಮರಣದಂಡನೆಯನ್ನು ವಿಧಿಸಿತ್ತು. ಆಗ ಮಾನವ ಹಕ್ಕುಗಳ ಹೋರಾಟಗಾರ್ತಿ ನಂದಿತಾ ಹಕ್ಸರ್ ಅವರು ಒಂದು ತಂಡವನ್ನು ಕಟ್ಟಿಕೊಂಡು ಜಿಲಾನಿ ಪರ ಖ್ಯಾತ ವಕೀಲ ರಾಮ್ ಜೇಠ್ಮಲಾನಿ ಅವರು ಸುಪ್ರೀಮ್ ಕೋರ್ಟ್‌ನಲ್ಲಿ ವಾದಿಸುವಂತೆ ನೋಡಿಕೊಂಡಿದ್ದರು. ಪರಿಣಾಮವಾಗಿ ಜಿಲಾನಿಯವರು ನಿರ್ದೋಷಿ ಎಂದು ಕೋರ್ಟ್ ತೀರ್ಪು ನೀಡಿತ್ತು. ಆದರೆ ಅದೇ ಸವಲತ್ತು ಅಫ್ಜಲ್ ಗುರುಗೆ ಸಿಗಲಿಲ್ಲ. ದೆಹಲಿಯ ವಕೀಲರು ಅಫ್ಜಲ್ ಪರ ಯಾರೂ ವಾದಿಸಬಾರದೆಂದು ಫತ್ವಾ ಹೊರಡಿಸಿದ್ದರು. ಪರಿಣಾಮವಾಗಿ ಅಫ್ಜಲ್ ಪರ ವಾದಿಸಲು ಸರ್ಕಾರ ನೇಮಿಸಿದ್ದ ವಕೀಲ ಕೂಡ ನ್ಯಾಯಾಲಯದಲ್ಲಿ ತುಟಿಪಿಟಿಕ್ ಎನ್ನದೆ ಕೂತಿರುತ್ತಿದ್ದ. ಇದೆಲ್ಲದರಿಂದಾಗಿ ಅಫ್ಜಲ್ ಗುರುಗೆ ಮರಣದಂಡನೆ ಸಿಕ್ಕಿತಲ್ಲದೆ ಆತನನ್ನು ಸರ್ಕಾರ ಗಲ್ಲಿಗೇರಿಸುವ ಮೂಲಕ ಕೊಂದು ಹಾಕಿತು.

ಬಿಹಾರದಲ್ಲಂತೂ ದಲಿತರ ಕಗ್ಗೊಲೆಗಳನ್ನು ನಡೆಸಿದ ಆರೋಪಿಗಳನ್ನು ನ್ಯಾಯಾಲಯಗಳೇ ಸಾಕ್ಷ್ಯಾಧಾರದ ಕೊರತೆಯ ಹೆಸರಲ್ಲಿ ಸಾಲು ಸಾಲು ಬಿಡುಗಡೆ ಆದೇಶ ನೀಡುತ್ತಿದೆ. ಆದರೆ ಅದಕ್ಕೆ ಪ್ರತಿಯಾಗಿ ನಕ್ಸಲೀಟ್ ಪಕ್ಷಗಳು ಭೂಮಾಲೀಕ ಸೇನೆಗಳ ವಿರುದ್ಧ ನಡೆಸಿದ ದಾಳಿಗಳಲ್ಲಿ ಪಾಲ್ಗೊಳ್ಳದಿದರೂ ಕೇವಲ ಆ ಹಳ್ಳಿಯ ದಲಿತರಾಗಿದ್ದಾರೆಂಬ 'ಸಾಕ್ಷ್ಯ'ದಿಂದ ಹತ್ತಾರು ದಲಿತರಿಗೆ ಇದೇ ನ್ಯಾಯಾಲಯಗಳು ಗಲ್ಲು ಶಿಕ್ಷೆ ವಿಧಿಸಿದೆ.

ಜಾತಿ, ವರ್ಗ, ಧರ್ಮ ತರತಮದ ಬದುಕುಗಳು ನಮ್ಮ ದೇಶದಲ್ಲಿ ಇರುವ ತನಕ ದನಿ ಇಲ್ಲದ ಬಡವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಇಂತಹ ಅನ್ಯಾಯಗಳು ಆಗುತ್ತಲೇ ಇರುತ್ತದೆ.

ಆಪರೇಷನ್ ಎತ್ತುವಳಿ ರಾಕೆಟ್



ಬಲೆಗೆ ಬಿದ್ದ ರಿಯಾಜ್

ಅವಮಾನಕ್ಕೆ ಬಿದ್ದ ಲೋಕಾಯುಕ್ತ ಭಾಸ್ಕರ್ ರಾವ್ ರಜೆ ಹಾಕಿ ಗೂಡು ಸೇರಿದ್ದಾರೆ. ಪುತ್ರ ಅಶ್ವಿನ್ ರಾವ್ ಬಂಧನದ ಆಘಾತಕ್ಕೆ ಅವರಿನ್ನೂ ಚೇತರಿಸಿಕೊಳ್ಳುವುದು ಕಷ್ಟ. ಗಾಯದ ಮೇಲೊಂದು ಬರೆಯೆಂಬಂತೆ ಲೋಕಾಯುಕ್ತ ಜಂಟಿ ಕಮೀಷನರ್ ಸೈಯದ್ ರಿಯಾಜ್‌ರನ್ನು ಎಸ್‌ಐಟಿ ಪೊಲೀಸರು ಸೆರೆ ಹಿಡಿದಾಗಿದೆ. ಟಿವಿ ವರದಿಗಾರ ಶ್ರೀನಿವಾಸ್‌ಗೌಡ, ಆತನ ಬೇನಾಮಿ ಶಂಕರೇಗೌಡ, ಅಶೋಕ್‌ಕುಮಾರ್ ಎಂಬ ನಿಗೂಢ ವ್ಯಕ್ತಿ ಸೇರಿದಂತೆ ಲೋಕಾ ಲಂಚಕಾಂಡದಲ್ಲಿ ಸೆರೆಯಾದವರ ಸಂಖ್ಯೆ ಐದಕ್ಕೇರಿದೆ.

ಫೋರ್‌ಟ್ವೆಂಟಿ ಭಾಸ್ಕರ್ ಮತ್ತು ಹೊಟ್ಟೆ ಕೃಷ್ಣ ಎಂಬ ಇನ್ನಿಬ್ಬರು ಲಂಚಾವತಾರಿಗಳು ಬೋನಿಗೆ





ಸೋನಿಯಾ ನಾರಂಗ್

ಬಿದ್ದಿದ್ದರೆ ಆ ಸಂಖ್ಯೆ ಏಳಕ್ಕೇರುತ್ತಿತ್ತು, ಆದರೆ ಅವರಿಬ್ಬರೂ ಅಡಗಿ ಕೂತ ತಾಣ ಅದ್ಯಾವ ಹುತ್ತವೋ ಬಿಲವೋ ಪತ್ತೆ ಹಚ್ಚುವುದು ಕಷ್ಟ. ಲೋಕಾ ಜಂಟಿ ಆಯುಕ್ತ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ ಸೈಯದ್ ರಿಯಾಜ್‌ರ ಹುದ್ದೆ ಮತ್ತು ಲೋಕಾಯುಕ್ತರ ಪುತ್ರ ಅಶ್ವಿನ್‌ಗಿದ್ದ ಮಹತ್ವ ಲೆಕ್ಕ ಹಾಕಿದರೆ ಎಸ್‌ಐಟಿ ಅಂದರೆ ವಿಶೇಷ ತನಿಖಾ ಪಡೆಯ ಧೈರ್ಯ ಕಮ್ಮಿಯದೇನಲ್ಲ.

ಸದ್ಯ ಅಶ್ವಿನ್‌ರನ್ನು ಲೋಕಾ ವಿಶೇಷ ನ್ಯಾಯಾಲಯ ಒಂಬತ್ತು ದಿನಗಳವರೆಗೆ ಪೊಲೀಸ್ ಕಸ್ಟಡಿಗೊಳಪಡಿಸಿದ್ದಾಗಲಿ, ಸೈಯದ್ ರಿಯಾಜ್‌ಗೆ ಹತ್ತು ದಿನಗಳ ಪೊಲೀಸ್ ಕಸ್ಟಡಿ ವಿಧಿಸಿದ್ದಾಗಲಿ ಸರ್ಕಾರದ ಮಟ್ಟಿಗೆ ಮಾಮೂಲಿನ ಸಂಗತಿಯೇನಲ್ಲ. ಆದರೆ ಹೊರಬರುತ್ತಿರುವ ಸತ್ಯವಿದೆಯಲ್ಲ ಅದು ರಾಜ್ಯದ ಮಟ್ಟಿಗಂತೂ ಸುಲಭಕ್ಕೆ ಜೀರ್ಣಗೊಳ್ಳುವಂಥದ್ದಲ್ಲ!

ಲೋಕಾ ಆಯಕಟ್ಟಿನ ಅಧಿಕಾರಿಗಳು, ಪತ್ರಕರ್ತರು, ಭ್ರಷ್ಟರು ಮತ್ತು ಲೋಕಾಯುಕ್ತರ ಪುತ್ರ ಸೇರಿದಂತೆ ಸೃಷ್ಟಿಯಾದ ಸುಲಿಗೆ ಜಾಲದ ಹೆಸರು ಲೋಕಾ ಎಕ್ಸ್‌ಟಾರ್ಷನ್ ರ್‍ಯಾಕೆಟ್. ಅಂದರೆ ಲೋಕಾ ಎತ್ತುವಳಿ ಜಾಲ. ಭಾಸ್ಕರ್ ರಾವ್ ಪುತ್ರ ಅಶ್ವಿನ್ ಇದರ ಅಧಿಪತಿಯೋ ಅಥವಾ ಸೈಯದ್ ರಿಯಾಜ್ ಸೂತ್ರಧಾರನೋ ಗೊತ್ತಾಗುತ್ತಿಲ್ಲ, ಬಹುಶಃ ಅಶ್ವಿನ್ ಕೈಗೊಂಬೆಯಾಗಿರಲೂಬಹುದು. ಈ ಹಿಂದೆ ಲೋಕಾಯುಕ್ತರಾಗಿದ್ದ ವೆಂಕಟಾಚಲ, ನಂತರ ಬಂದ ಸಂತೋಷ್ ಹೆಗ್ಡೆ ಕಾಲದಿಂದ ಈತನಕ ಸದ್ದಿಲ್ಲದೇ ಸಾಗಿ ಬಂದ ಲೋಕಾ ಎತ್ತುವಳಿ ಜಾಲದ ಆಳ-ಅಗಲ ಕೆದಕಿದಷ್ಟೂ ರೋಚಕ, ಬಗೆದಷ್ಟೂ ಹೀನಾಯಕ.

ಎತ್ತುವಳಿ ರ್‍ಯಾಕೆಟ್!

ಸಂತೋಷ್ ಹೆಗ್ಡೆ ಲೋಕಾಯುಕ್ತರಾಗಿದ್ದಾಗ ಇದೇ ಸೋನಿಯಾ ನಾರಂಗ್ ಹುದ್ದೆಯಲ್ಲಿದ್ದವರು ಮಧುಕರ್ ಶೆಟ್ಟಿ. ಮಂತ್ರಿಯಾಗಿದ್ದ ಕಟ್ಟಾ ನಾಯ್ಡು ಜೈಲಿಗಟ್ಟಿದ ನಂತರ ಇದ್ದಕ್ಕಿದ್ದಂತೆ ರಜೆ ಹಾಕಿ ನಾಪತ್ತೆಯಾಗಿದ್ದ ದಿಟ್ಟ ಅಧಿಕಾರಿ ಮಧುಕರ್ ಶೆಟ್ಟಿ ಮನನೊಂದು ಲೋಕಾಯುಕ್ತರಿಗೊಂದು ಪತ್ರ ಬರೆಯುತ್ತಾರೆ. ಅದನ್ನು ಸಂತೋಷ್ ಹೆಗ್ಡೆ ಬಹಿರಂಗಪಡಿಸುವುದಿಲ್ಲ. ಹಾಗೇ ನೆನೆಗುದಿಗೆ ಬಿದ್ದು ಕಾಲಕ್ರಮೇಣ ಮರೆತು ಮರೆಯಾದ ಆ ಪತ್ರ ಇಂಥಾದೊಂದು ಜಾಲದ ವಿರುದ್ಧ ಮೊದಲ ದನಿಯಾಗಿತ್ತು.

ಫೋರ್‌ಟ್ವೆಂಟಿ ಭಾಸ್ಕರ್, ಹೊಟ್ಟೆ ಕೃಷ್ಣ ಶ್ರೀನಿವಾಸ್ ಗೌಡ, ಶಂಕರೇಗೌಡ, ಮಹೇಶ್, ವಾಸು, ಚಕ್ರವರ್ತಿ, ಚೂಡಾಚಾರಿ, ಸಾರಿಕ್, ನರಸಿಂಹ ರಾವ್, ನರೇಶ್, ಸುನೀಲ್- ಹೀಗೆ ಬೆಳೆಯುವ ಲೋಕಾ ಸುಲಿಗೆಕೋರ ಪಟ್ಟಿಗೆ ಮೊದಲು ಕಾಣಿಸುತ್ತಿದ್ದದ್ದೇ ಲೋಕಾ ಜಂಟಿ ಆಯುಕ್ತ ಸೈಯದ್ ರಿಯಾಜ್. ಸಾರ್ವಜನಿಕ ಸಂಪರ್ಕಾಧಿಕಾರಿಯೂ ಆಗಿದ್ದ ರಿಯಾಜ್ ಮಿತ ಭಾಷಿ, ಶಾಂತಚಿತ್ತ, ಉದಾರಿ, ಸ್ನೇಹಜೀವಿ, ಧಾರಾಳಿ ಎಲ್ಲವೂ ಹೌದು. ವಿಪರ್ಯಾಸವೆಂದರೆ ಅದೇ ಅವರ ದೌರ್ಬಲ್ಯವೂ ಹೌದು. ತಾನು ಇಂಥಾ ಪತ್ರಿಕೆಯ ರಿಪೋರ್ಟರ್, ಸೋಕಾಲ್ಡ್ ಪುಡಿ ಪತ್ರಿಕೆಗೆ ತಾನೇ ಎಡಿಟರ್, ಇಂಥಾ ಟಿವಿಯಲ್ಲಿ ನಾನೇ ಹಗರಣಕೋರ ಎಂದು ಬಿಟ್ಟರೆ ಸಾಕು; ಸಾಹೇಬರಿಗೆ ಫಸ್ಟ್‌ಕ್ಲಾಸ್ ಟೀ ತಂದುಕೊಡೋ ಎಂದು ತನ್ನ ಆರ್ಡರ್ಲಿ ಅಂತೋಣಿಗೆ ಆದೇಶ ನೀಡುತ್ತಾರೆ.

ರಿಯಾಜ್ ಸಾಹೇಬರು ತಮ್ಮ ಛೇಂಬರಿನಲ್ಲಿ ಕೊಡುವ ಲೆಮನ್ ಟೀ ಪತ್ರಕರ್ತರ ವಲಯದಲ್ಲಿ ತುಂಬಾ ಜನಪ್ರಿಯ. ಪತ್ರಕರ್ತರೆಡೆಗಿನ ಅವರ ಈ **obsession** ಅಂತಿಮವಾಗಿ ಅವರನ್ನು ಈ ಗತಿಗೆ ತಂದು ನಿಲ್ಲಿಸಿದೆ. ಯಾವುದೋ ಕಾಲಕ್ಕೆ ಯಾವುದೋ ಅಡ್ರೆಸ್ಸಿಲ್ಲದ ಪತ್ರಿಕೆ ಮಾಡಿಕೊಂಡಿದ್ದ ಭಾಸ್ಕರ್, ಇನ್ನಾವುದೋ ವೆಬ್ ಚಾನಲ್ ನಡೆಸುತ್ತೇನೆನ್ನುವ ಹೊಟ್ಟೆ ಕೃಷ್ಣ, ಪದೇಪದೇ ಚಾನಲ್ ಬದಲಾಯಿಸುವ ಶ್ರೀನಿವಾಸ ಗೌಡ, ಆತನ ಬಂಟ ಶಂಕರೇಗೌಡ, ಹೇಳಹೆಸರಿಲ್ಲದ ಪತ್ರಿಕೆಗೆ ಕಳ್ಳ ಹೆಸರಲ್ಲಿ ಬರೆದು ಸಿನಿಮಾ ನಟಿಯರನ್ನು ಮುಕ್ಕುತ್ತಲೇ ಕುಖ್ಯಾತನಾದ ಚೂಡಾಚಾರಿ, ಅಧಿಕಾರಿಗಳ ಸುಲಿಗೆಯನ್ನೇ ಹೊಟ್ಟೆ ಪಾಡಾಗಿಸಿಕೊಂಡ ಚಕ್ರವರ್ತಿ ಇತ್ಯಾದಿಗಳೆಲ್ಲ ಸ್ವಭಾವತಃ ವಂಚಕರಾದ್ದರಿಂದ ಮಾತೇ ಇವರ ಬಂಡವಾಳ.

ಮಾಗಡಿ ಹಗರಣ

ಇಂಥವರ ಬಣ್ಣದ ಮಾತಿಗೆ ಬಲಿಯಾಗಿದ್ದು ಕೇವಲ ರಿಯಾಜ್ ಮಾತ್ರವೇ ಅಲ್ಲ ಲೋಕಾ ಪುತ್ರ ಅಶ್ವಿನ್ ರಾವ್ ಕೂಡ. ಆಯಕಟ್ಟಿನ ಇಂಜಿನಿಯರ್‌ಗಳು, ಬಿಡಿಎ ಅಧಿಕಾರಿಗಳು, ಪಾಲಿಕೆ, ಕಂದಾಯ ಇಲಾಖೆ, ಲೋಕೋಪಯೋಗಿ, ಅಬಕಾರಿ ಸೇರಿದಂತೆ ಫಲವತ್ತು ಹುದ್ದೆಯಲ್ಲಿದ್ದವರನ್ನು ಒಬ್ಬೊಬ್ಬರಾಗಿ ದೋಚುವ ಇಂಥಾ ಜಾಲವೊಂದು ಕಳೆದ ಹತ್ತು ವರ್ಷದಿಂದ ಸಕ್ರಿಯವಾಗೇ ಕಾರ್ಯ ನಿರ್ವಹಿಸುತ್ತಿತ್ತು. ಈ ಪೈಕಿ ದೊಡ್ಡ ಮಟ್ಟದಲ್ಲಿ ಸುದ್ದಿಯಾಗಿದ್ದು ಬಿಜೆಪಿ ಕಾಲದಲ್ಲಿ ನಡೆದ ಪಾಲಿಕೆ ಬೋಗಸ್ ಬಿಲ್ ಹಗರಣ ಮತ್ತು ಮಾಗಡಿ ವಲಯದಲ್ಲಿ ನಡೆದ ಲೋಕೋಪಯೋಗಿ ರಸ್ತೆ ಕಾಮಗಾರಿ ಕಾಂಡ. 1538 ಕೋಟಿಯ ಪಾಲಿಕೆ ಕಳಪೆ ಕಾಮಗಾರಿ ಹಗರಣದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೆಂಡನ್ ಜೈಲು ಪಾಲಾದ. ಮಿಕ್ಕಂತೆ ಮೂವರು ಶಾಸಕರು ಮತ್ತು ಡಜನ್ ಇಂಜಿನಿಯರ್‌ಗಳನ್ನು ಯಾರೂ ಮುಟ್ಟಲಿಲ್ಲ. ಅದಕ್ಕೆ ಕಾರಣವಾಗಿದ್ದು ಇದೇ ಎತ್ತುವಳಿ ರ್‍ಯಾಕೆಟ್.

ಇದು ಫೋರ್‌ಟ್ವೆಂಟಿ ಭಾಸ್ಕರ್ ಮತ್ತು ಲೋಕಾ ಪಿಆರ್‌ಓ ರಿಯಾಜ್ ಸಂಬಂಧದ ಪರಿಣಾಮ. ಇದರ ಬೆನ್ನಲ್ಲೇ ಮಾಗಡಿ ಬೋಗಸ್ ಬಿಲ್ ಕರ್ಮಕಾಂಡವೂ ಹಳ್ಳ ಹಿಡಿಯಿತು. ಅದೂ ಕೂಡ 1500 ಕೋಟಿ ರೂಪಾಯಿಗಳ ದೈತ್ಯ ಹಗರಣ. ಕಂಟ್ರಾಕ್ಟರ್‌ಗಳಾದ ಕೆಂಪರಾಜು ಮತ್ತು ನಂಜಪ್ಪ ಹೇಳಿಕೇಳಿ ಜೆಡಿಎಸ್ ನಾಯಕರು, ಮಾಗಡಿ ಶಾಸಕ ಬಾಲಕೃಷ್ಣರ

ಪೊಲೀಸ್ ಪಂಜರದಲ್ಲಿ ಅಶ್ವಿನ್‌ರಾವ್



ಫೋರ್‌ಟ್ವೆಂಟಿ ಭಾಸ್ಕರ್ ಜರ್ಮನಿಗೆ ಹಾರಿದ್ದಾನಾ?



ಇಲ್ಲಿಗೆ ವರ್ಷದ ಹಿಂದೆ ಇಡೀ ಬಿಬಿಎಂಪಿಯ ಸಿಬ್ಬಂದಿ ಬೀದಿಗಿಳಿದು ಪ್ರತಿಭಟಿಸಿದ್ದು ವಿ. ಭಾಸ್ಕರ್ ಅಲಿಯಾಸ್ ನಿವಾರಣೆ ಭಾಸ್ಕರ್ ಯಾನೇ ಫೋರ್ ಟ್ವೆಂಟಿ ಭಾಸ್ಕರನ ವಿರುದ್ಧ. ಆಗ ಬಿಬಿಎಂಪಿಯ ನಗರ ಯೋಜನಾ ವಿಭಾಗದ ಜಂಟಿ ನಿರ್ದೇಶಕರಾಗಿದ್ದದ್ದು ಚೌಡೇಗೌಡ ಎಂಬ ಟೌನ್ ಪ್ಲಾನಿಂಗ್ ಅಧಿಕಾರಿ. ಹೊತ್ತಲ್ಲದ ಹೊತ್ತಲ್ಲೂ ಪಾಲಿಕೆಯ ಟೌನ್ ಪ್ಲಾನಿಂಗ್ ಕಚೇರಿಗಳಲ್ಲಿ ಇಟ್ಟಾಡಿಕೊಂಡಿದ್ದ ಭಾಸ್ಕರ್‌ನ ಹೊಟ್ಟೆಪಾಡೇ ಬ್ಲಾಕ್‌ಮೇಲ್ ಮತ್ತು ಖದೀಮ ಬಿಲ್ಡರ್‌ಗಳಿಗೆ ನಕಾಶೆ ಮಂಜೂರಾತಿ ಕೊಡಿಸುವ ದಂಧೆ.

ಬ್ರಿಗೇಡ್ ಗ್ರೂಪ್, ಪ್ರೆಸ್ಟೀಜ್, ರಹೇಜಾ ಮುಂತಾದ ದೈತ್ಯ ಬಿಲ್ಡರ್‌ಗಳ ಅಪಾರ್ಟ್‌ಮೆಂಟು, ಟೌನ್‌ಶಿಪ್‌ಗಳಲ್ಲಿ ಲೋಪದೋಷಗಳನ್ನು ಪತ್ತೆಹಚ್ಚಿ ಭಾಸ್ಕರ್ ರೊಕ್ಕ ಪೀಕುತ್ತಿದ್ದ. ಜಗ್ಗದೇ ಹೋದರೆ ಟೌನ್ ಪ್ಲಾನಿಂಗ್ ಅಧಿಕಾರಿಗಳನ್ನು ಎತ್ತಿಕಟ್ಟಿ ನಕಾಶೆಯೇ ಮಂಜೂರಾಗದ ಹಾಗೆ ಪೀಡಿಸುತ್ತಿದ್ದ. ಭಾಸ್ಕರನ ಕಾಟಕ್ಕೆ ಹೆದರಿಕೊಂಡೇ ಬಹುತೇಕ ಬಿಲ್ಡರುಗಳು ತಮ್ಮ ಪ್ಲಾನ್ ಮಂಜೂರಾತಿ ಕೆಲಸವನ್ನು ಈತನ ಮೂಲಕ ಮಾಡಿಸಿಕೊಳ್ಳುತ್ತಿದ್ದರು. ಹೀಗೆ ಬಿಲ್ಡರುಗಳ ಏಜೆಂಟಾಗಿ ರೂಪುಗೊಂಡ ಭಾಸ್ಕರ್ ಹಿರಿಯ ಟೌನ್ ಪ್ಲಾನಿಂಗ್ ಅಧಿಕಾರಿಯಾಗಿದ್ದ ಗೋವಿಂದರಾಜು ಮೇಲೆ ಹಲ್ಲೆ ನಡೆಸಿ ಪಾಲಿಕೆ ನೌಕರರೆಲ್ಲ ಬೀದಿಗಿಳಿಯಲು ಕಾರಣನಾದ.

ಪಾಲಿಕೆ ಸಿಬ್ಬಂದಿಗಳ ಪ್ರತಿಭಟನೆಗೆ ಮಣಿದ ಪಾಲಿಕೆ ಕಮೀಷನರ್ ಪಾಲಿಕೆ ಆವರಣಕ್ಕೆ ಕಾಲಿಡದಂತೆ ಭಾಸ್ಕರ್ ವಿರುದ್ಧ ಪೊಲೀಸರಿಗೆ ದೂರು ಕೊಟ್ಟರು. ಆವತ್ತು ಪಾಲಿಕೆಯಿಂದ ಹೊರದೂಡಲ್ಪಟ್ಟ ಭಾಸ್ಕರ್ ತದನಂತರ ಕಾಣಿಸಿಕೊಂಡಿದ್ದು ಲೋಕಾಯುಕ್ತ ಜಂಟಿ ಆಯುಕ್ತ ರಿಯಾಜ್ ಸಾಹೇಬರ ಅಡ್ಡೆಯಲ್ಲಿ. ಹಾಗೇ ಲೋಕಾ ಕಾರಿಡರ್‌ನಲ್ಲಿ ಪೈರವಿ ಶುರುವಿಟ್ಟ ಈತನಿಗೆ ಜೊತೆಯಾದವನು ಹೊಟ್ಟೆ ಕೃಷ್ಣ. ಇಬ್ಬರೂ ಸೇರಿಕೊಂಡು ತುಮಕೂರಿನ ಯಾವುದೋ ದೇವಸ್ಥಾನದಲ್ಲಿ ವಿಚಿತ್ರ ಪೂಜೆಯೊಂದನ್ನು ಏರ್ಪಡಿಸಿ ಅದಕ್ಕೆ ಲೋಕಾ ನ್ಯಾಮೂ. ಭಾಸ್ಕರ್‌ರಾವ್‌ರನ್ನು ಕರೆದೊಯ್ದಾಗಲೇ ಏನೋ ಅನಾಹುತ ಕಾದಿದೆ ಎನ್ನಿಸಿತ್ತು.

ಇದಾದನಂತರ ಇದೇ ಭಾಸ್ಕರ್, ಕೃಷ್ಣ ಮತ್ತು ಸುನೀಲ್ ಎಂಬ ಮತ್ತೊಬ್ಬ ಸುಲಿಗೆಕೋರ ಸೇರಿಕೊಂಡು ವೆಬ್ ಚಾನಲ್ಲೊಂದನ್ನು ಶುರುವಿಟ್ಟು ಅದಕ್ಕೆ ಲೋಕಾಪುತ್ರ ಅಶ್ವಿನ್‌ನನ್ನು ಬರಮಾಡಿಕೊಂಡರು. ಒಂದೆಡೆ ರಿಯಾಜ್ ದೋಸ್ತಿ ಆ ಮೂಲಕ ಲೋಕಾಪುತ್ರನ ವಶೀಕರಣ ತನ್ಮೂಲಕ ಅಸಾಧ್ಯ ಎತ್ತುವಳಿ ಕೈಯಿಟ್ಟ ಭಾಸ್ಕರ್ ಸದ್ಯ ಚೆನ್ನೈ ಹೊಕ್ಕಿ ಕೂತಿದ್ದಾನಂತೆ. ಇನ್ನೂ ಕೆಲವರಿಗೆ ಫೋನ್ ಮಾಡಿ ತಾನು ಜರ್ಮನಿಯಲ್ಲಿದ್ದೇನೆ ಎಂದೂ ಹೇಳಿಕೊಂಡಿದ್ದಾನೆ. ಆತ ಜರ್ಮನಿಗಲ್ಲ ವಿಶ್ವದ ಯಾವ ದೇಶಕ್ಕಾದರೂ ಹೋಗಿ ತಲೆ ಮರೆಸಿಕೊಳ್ಳುವಷ್ಟು ತಾಕತ್ತುದಾರ. ಏಕೆಂದರೆ ಕೇವಲ ಬ್ಲಾಕ್‌ಮೇಲ್ ಸುಲಿಗೆಯಿಂದಲೇ ಆತ 500 ಕೋಟಿಯ ಆಸ್ತಿವಂತನೆಂದರೆ ದಿನಕ್ಕೊಂದು ಐಷಾರಾಮಿ ಕಾರನ್ನೇರಿ ಬರುತ್ತಾನೆಂದರೆ ಕೇವಲ ಜರ್ಮನಿಗಲ್ಲ, ಚೈನಾ, ಥೈಲೆಂಡ್ ಯಾವ ದೇಶದಲ್ಲಾದರೂ ಅಡಗಿ ಕೂತಿದ್ದರೆ ಅಚ್ಚರಿಯೇನಿಲ್ಲ.

...ಳಿಗರು ಮತ್ತು ಜೆಡಿಎಸ್ ಅಧಿಪತಿ ಕುಮಾರಣ್ಣನ ...ಮಾಪ್ತರು. ಈ ಹಗರಣದ ರೂವಾರಿಯಲ್ಲದೆ ...ದರೂ ಅದರ ಫಲಾನುಭವಿಗಳಲ್ಲೊಬ್ಬ ...ತಿದ್ದದ್ದು ನಗರ ಜಿಲ್ಲಾ ಪಂಚಾಯ್ತಿಯ ...ಟೀವ್ ಇಂಜಿನಿಯರ್ ಕೃಷ್ಣಮೂರ್ತಿ!

...ಅವರಿಗೆ 2015ರ ಏಪ್ರಿಲ್ ಹೊತ್ತಿಗೆ ನಿಗೂಢ ...ನ್ ಕರೆ ಮತ್ತು ಮೆಸೇಜ್ ಬರಲಾರಂಭಿಸಿದೆ. ... ಕೃಷ್ಣರಾವ್ ಎಂದೂ ಲೋಕಾಯುಕ್ತ ...ಕಾರಿಯೆಂದೂ ಬಂದು ಲೋಕಾ ಜಂಟಿ ...ಷನರ್‌ರನ್ನು ಕಾಣಬೇಕೆಂದು ಇಲ್ಲದೇ ಹೋದರೆ ... ಗ್ಯಾರಂಟಿ ಎಂಬರ್ಥದ ಮೆಸೇಜುಗಳನ್ನು ...ವಿನಲ್ಲಿ ಕೃಷ್ಣಮೂರ್ತಿ ಗಂಭೀರವಾಗಿ ...ಣಿಸುವುದಿಲ್ಲ, ಹಾಗಂತ ಕರೆ ನಿಲ್ಲುವುದಿಲ್ಲ. ಮೇ ... ಈ ಬಗ್ಗೆ ವಿಚಾರಿಸಲೆಂದು ಕೃಷ್ಣಮೂರ್ತಿ ಲೋಕಾ ...ರಿಗೆ ಬರುತ್ತಾರೆ. ಜಂಟಿ ಕಮೀಷನರ್ ರಿಯಾಜ್ ...ಬರಿಗೆ ಬರುವಂತೆ ಸೂಚಿಸಿದ್ದರಿಂದ ಅಲ್ಲಿಗೆ ...ದ್ದೇ ತಡ ರಿಯಾಜ್ ಚೇಂಬರಿನಿಂದ ...ಯೊಬ್ಬ ಹೊರಬಂದಿದ್ದೇ ತಾನೇ ಕೃಷ್ಣರಾವ್



...ಮು ಪರಿಚಯಿಸಿಕೊಳ್ಳುತ್ತಾನೆ.

...ಅವರನ್ನು ರಿಯಾಜ್ ಚೇಂಬರ್ ಪಕ್ಕದ ...ತ್ತೊಂದು ಆ್ಯಂಟಿ ಚೇಂಬರ್‌ಗೆ ಕರೆದೊಯ್ದ ಆ ವ್ಯಕ್ತಿ ...ಕೋಟಿಯ ಡಿಮ್ಯಾಂಡಿಟ್ಟಿದ್ದು ಹಳೇ ಕತೆ. ಈ ಬಗ್ಗೆ ...ಮೂರ್ತಿ ಲೋಕಾ ಎಸ್‌ಪಿ ಸೋನಿಯಾ ನಾರಂಗ್ ... ಕಷ್ಟ ಹೇಳಿಕೊಳ್ಳುತ್ತಾನೆ. ಅಲ್ಲಿಂದಾಚೆಗೆ ಇಡೀ ...ರಣ ಬೇರೆಯದೇ ರೂಪ ತಾಳಿದೆ. ಸೋನಿಯಾ ...ರಂಗ್ ಇದನ್ನು ಗಂಭೀರವಾಗಿ ಪರಿಗಣಿಸಿ ಲೋಕಾ ...ಜಿಪಿ ಪ್ರೇಮ್ ಶಂಕರ್ ಮೀನಾಗೆ ಈ ಬಗ್ಗೆ ಪತ್ರ ...ದು, ಅದು ಪತ್ರಿಕೆಗಳಲ್ಲಿ ಸುದ್ದಿಯಾಗಿ, ಈ ಬಗ್ಗೆ ...ಶೆ ಮಾಡುವಂತೆ ಉಪಲೋಕಾ ಸುಭಾಷ್ ಆಡಿ ...ಶ ಕೊಡುವ ಮೂಲಕ ಲೋಕಾ ಲಂಚಕ್ಕೊಂದು ...ವ್ಯಾಪಿ ಮಹತ್ವ ಬಂದಂತಾಗುತ್ತದೆ.

ಬಲೆಗೆ ಬಿದ್ದ ಅಶೋಕ್

... ಯಾವತ್ತು ಸೋನಿಯಾ ನಾರಂಗ್ ಪ್ರಕರಣದ ...ಗೆ ಬಿದ್ದರೋ ಬಯಲಾದ ಮಹತ್ವದ ಸಂಗತಿಯೆಂದರೆ ಕೃಷ್ಣರಾವ್ ಮತ್ತು ಲೋಕಾಪುತ್ರ ಅಶ್ವಿನ್ ಇಬ್ಬರೂ ಒಂದೇ!

ಇಂಜಿನಿಯರ್ ಕೃಷ್ಣಮೂರ್ತಿಯಿಂದ ದೂರು ದಾಖಲಿಸಿಕೊಂಡ ಸೋನಿಯಾ ಎಫ್‌ಐಆರ್ ಧಾಖಲಿಸುತ್ತಿದ್ದಂತೆ ಇಡೀ ಪ್ರಕರಣವೇ ರಣರಂಪವಾಗಿ ಬಿಟ್ಟಿತ್ತು. ಬಿಜೆಪಿ, ಜೆಡಿಎಸ್‌ಗಳು ಬೀದಿಗಿಳಿದಿದ್ದರಿಂದಾಗಿ ಇದರ ತನಿಖೆಗೆಂದೇ ವಿಶೇಷ ತನಿಖಾ ದಳವೊಂದನ್ನು ರಚಿಸಿದ ಸರ್ಕಾರ ಬಂದಿಖಾನೆ ಎಡಿಜಿಪಿ ಕಮಲ್‌ಪಂತ್‌ರನ್ನು ಅದರ ಮುಖ್ಯಸ್ಥರನ್ನಾಗಿ ನೇಮಿಸಿ ಸೌಮೇಂಧು ಮುಖರ್ಜಿ ಲಾಬೂರಾಮ್‌ರಂಥ ಪೊಲೀಸ್ ಅಧಿಕಾರಿಗಳನ್ನೂ ತನಿಖೆಗಿಳಿಸಿತು. ಲೋಕಾ ಡಿವೈಎಸ್‌ಪಿ ಪ್ರಸನ್ನರಾಜು ಬೇರೆಯದೇ ರೀತಿಯಲ್ಲಿ ತನಿಖೆಗಿಳಿದು ಇಂಜಿನಿಯರ್ ಕೃಷ್ಣಮೂರ್ತಿಯ ಕಾಲ್ ಡಿಟೇಲ್ಸ್ ಪರಿಶೀಲನೆಗಿಳಿದಾಗ ಸಿಕ್ಕಿದ್ದೇ 9066029213 ಎಂಬ ನಿಗೂಢ ಮೊಬೈಲ್ ಸಂಖ್ಯೆ.

ಅದು ಅಶೋಕ್ ಎಂಬ ನಿಗೂಢ ಮಧ್ಯವರ್ತಿಯ ಮೊಬೈಲ್ ನಂಬರ್. ಆತ ಆಂಧ್ರಾ ಮೂಲದ ಆಸಾಮಿ. ಲೋಕಾಪುತ್ರ ಅಶ್ವಿನ್‌ಗೆ ಪರಮಾತ್ಮನಾಗಿದ್ದ ಅಶೋಕ್‌ಕುಮಾರ್ ಮೊಬೈಲಿನ ಟವರ್ ಲೊಕೇಷನ್





ಲೋಕಾ ಭಾಸ್ಕರ್‌ರಾವ್



ಮತ್ತು ಇಂಜಿನಿಯರ್ ಕೃಷ್ಣಮೂರ್ತಿಯ ಟವರ್ ಲೊಕೇಷನ್ ಒಂದೇ ಆಗಿತ್ತು. ಅಶೋಕ್‌ಕುಮಾರ್‌ನನ್ನು ಬಂಧಿಸಿದ ಎಸ್‌ಐಟಿ ಅಧಿಕಾರಿಗಳಿಗೆ ಇನ್ನೂ ಅಚ್ಚರಿ ಕಾದಿತ್ತು. ಅದು ಟಿವಿ ರಿಪೋರ್ಟರ್ ಶ್ರೀನಿವಾಸಗೌಡ ಮತ್ತು ಆತನ ಚೇಲಾ ಶಂಕರೇಗೌಡ! ಇವರಿಬ್ಬರಿಗೂ ಸೈಯದ್ ರಿಯಾಜ್‌ರ ಛೇಂಬರೇ ವಸೂಲಿ ಅಡ್ಡೆಯಾಗಿತ್ತು. ಮಾಹಿತಿ ಹಕ್ಕು ಕಾಯ್ದೆಯಡಿ ಹಗರಣಗಳನ್ನು ಪತ್ತೆ ಹಚ್ಚುವುದು ಲೋಕಾ ಹೆಸರಲ್ಲಿ ದುಡ್ಡು ಕೀಳುವುದು!

ಇಷ್ಟಾಗುತ್ತಿದ್ದಂತೆ ಅಪಾಯದ ವಾಸನೆ ಹತ್ತಿದ್ದು ಲೋಕಾ ಪಿಆರ್‌ಓ ರಿಯಾಜ್‌ಗೆ. ಏಕಾಏಕಿ ರಜೆ ಹಾಕಿದ್ದೇ ಮೆಕ್ಕಾ ಯಾತ್ರೆಗೆ ತೆರಳಿದ ರಿಯಾಜ್ ಎತ್ತುವಳಿ ಜಾಲದ ಕಿಂಗ್‌ಪಿನ್ ಎಂಬ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರಗಳಿದ್ದವು. ಇಂಜಿನಿಯರ್ ಕೃಷ್ಣಮೂರ್ತಿಯ ಹೇಳಿಕೆ, ಬಳಕೆಯಾದ ಫೋನು, ಮೊಬೈಲ್‌ನ ಟವರ್ ಲೊಕೇಷನ್, ಸೆರೆಯಾದ ಶ್ರೀನಿವಾಸಗೌಡನ ಕಾಲ್ ಡಿಟೇಲ್ಸ್ ಮತ್ತು ಅಶ್ವಿನ್‌ರಾವ್ ಮೊಬೈಲಿಗೆ ಹೋದ ಫೋನ್ ಕರೆಗಳ ಆಧಾರದ ಮೇಲೆ ರಿಯಾಜ್ ಬಂಧನಕ್ಕೆ ಎಸ್‌ಐಟಿ ಬಲೆ ಬೀಸಿತ್ತು.

ಅಶ್ವಿನ್ ಬೋನಿಗೆ

ಅತ್ತ ಮೆಕ್ಕಾ ಯಾತ್ರೆ ಮುಗಿಸಿ ಕೆಂಪೇಗೌಡ ಏರ್‌ಪೋರ್ಟ್‌ಗೆ ಕಾಲಿಡುತ್ತಿದ್ದಂತೆಯೇ ಎಸ್‌ಐಟಿ ಪೊಲೀಸ್ ಪಡೆ ರಿಯಾಜ್‌ರನ್ನು ಮುತ್ತಿಗೆ ಹಾಕಿತ್ತು. ಇತ್ತ ರಿಯಾಜ್‌ರನ್ನು ಮರುದಿನ ಲೋಕಾ ವಿಶೇಷ ನ್ಯಾಯಾಲಯದಲ್ಲಿ ಹಾಜರುಪಡಿಸುತ್ತಿದ್ದಂತೆ ಭದ್ರಾ



ಮೇಲ್ದಂಡೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಚನ್ನಭಸಪ್ಪ ಮತ್ತೊಂದು ದೂರು ಹಿಡಿದು ಎಸ್‌ಐಟಿಯ ಬಾಗಿಲು ತಟ್ಟುತ್ತಿದ್ದರು. ಅದು ಅಶ್ವಿನ್‌ರಾವ್ ವಿರುದ್ಧದ ನೇರ ದೂರು.

ಹಾವೇರಿ ಜಿಲ್ಲಾ ಪಂಚಾಯ್ತಿಯ ಮುಖ್ಯ ಇಂಜಿನಿಯರ್ ಆಗಿದ್ದಾಗ ಆದಾಯ ಮೀರಿ ಆಸ್ತಿಗಳಿಕೆಗೆ ಸಂಬಂಧಪಟ್ಟಂತೆ ನಡೆದ ಲೋಕಾ ದಾಳಿಗೆ 'ಬಿ' ರಿಪೋರ್ಟ್ ಸಲ್ಲಿಸುವಂತೆ ನಾನು ಶಿವಯೋಗಿ ಹಿರೇಮಠ್ ಎಂಬ ಕಾಂಗ್ರೆಸ್ ನಾಯಕನ ಮೊರೆ ಹೊಕ್ಕಿದೆ. ಹಿರೇಮಠ್ ನನ್ನನ್ನು ಹೈದರಾಬಾದಿನ ಮನೆಯೊಂದಕ್ಕೆ ಕರೆತಂದು ಅಶ್ವಿನ್ ಎಂಬ ವ್ಯಕ್ತಿಯೊಬ್ಬರನ್ನು ಪರಿಚಯಿಸಿಕೊಟ್ಟು. ಆ ಹೊತ್ತಿಗೆ ಅಶ್ವಿನಿ ಜೊತೆಗಿದ್ದದ್ದು ವಿ. ಭಾಸ್ಕರ್ ಮತ್ತು ಅಶೋಕ್‌ಕುಮಾರ್. ಆವತ್ತು ಅಶ್ವಿನ್ ನಿಮ್ಮ ಸಮಸ್ಯೆಯನ್ನು ಬಗೆಹರಿಸಿಕೊಡುತ್ತೇನೆಂಬ ಮಾತು ಕೊಟ್ಟರು. ನಂಬಿದ ನಾನು ಊರಿಗೆ ವಾಪಸ್ಸಾದರೆ ಕರೆದೊಯ್ದಿದ್ದ ಹಿರೇಮಠ್ ನನ್ನಿಂದ 20 ಲಕ್ಷಕ್ಕೆ ಬೇಡಿಕೆಯಿಟ್ಟರು. ಅಷ್ಟೂ ದುಡ್ಡನ್ನು ತಾನು ಅಶೋಕ್ ಮತ್ತು ಭಾಸ್ಕರ್ ಮೂಲಕ ಅಶ್ವಿನ್‌ಗೆ ತಲುಪಿಸಿದಲ್ಲಿ ಮಾತ್ರ ನಿಮ್ಮ ಕೇಸಿಗೆ 'ಬಿ' ರಿಪೋರ್ಟ್ ಸಾಧ್ಯ ಎಂದು ಸುಲಿಗೆಗೆ ಯತ್ನಿಸಿದ್ದ.

ಈ ದೂರನ್ನಾಧರಿಸಿ ಎಸ್‌ಐಟಿ 2ನೇ ಲೋಕಾ ಸುಲಿಗೆಯ ಎಫ್‌ಐಆರ್ ದಾಖಲಿಸಿದ್ದು ಜುಲೈ 27ರ ಸೋಮವಾರದಂದು. ಅದೇ ಹೊತ್ತಿಗೆ ಎಸ್‌ಐಟಿಯ ವಿಶೇಷ ತಂಡ ಅಶ್ವಿನ್‌ಗಾಗಿ ಬಲೆ ಬೀಸಿ ಹೈದರಾಬಾದ್ ತಲುಪಿತ್ತು. ಸೋಮವಾರ ಬೆಳಗ್ಗೆಯೇ ಆಂಧ್ರದ ರಂಗಾರೆಡ್ಡಿ ಜಿಲ್ಲೆಯ ಕುಕ್ಕಟಪಲ್ಲಿಯ ನಿವಾಸದಲ್ಲಿ ಅಶ್ವಿನ್ ಪೊಲೀಸ್ ವಶವಾಗಿದ್ದ. ಮರುದಿನವೇ ಲೋಕಾ ವಿಶೇಷ ಕೋರ್ಟಿನಲ್ಲಿ ಅಶ್ವಿನ್‌ನನ್ನು ಹಾಜರುಪಡಿಸಲಾಯಿತು. ಒಂಬತ್ತು ದಿನಗಳ ನ್ಯಾಯಾಂಗ ವಶಕ್ಕೆ ಆದೇಶಿಸಿದ ನ್ಯಾಮೂ. ವಿ.ಜಿ. ಬೋಪಯ್ಯ ಲೋಕಾ ಸುಲಿಗೆ ಜಾಲದ ಎಲ್ಲ ಷಡ್ಯಂತ್ರಗಳನ್ನೂ ವಿಫಲಗೊಳಿಸಿದ್ದರು.


ಇನ್ನೇನು ಮಗ ಬೋನಿಗೆ ಬಿದ್ದನೆಂಬ ಸುದ್ದಿ ಕೇಳಿದ್ದೇ ಕೈಚಲ್ಲಿದ ನ್ಯಾಮೂ. ಭಾಸ್ಕರ್ ರಾವ್ ಸುದೀರ್ಘ ರಜೆ ಹಾಕಿದ್ದೇ ನಾಪತ್ತೆಯಾಗಿಬಿಟ್ಟರು. ಅಲ್ಲಿಗೆ ಲೋಕಾ ಸುಲಿಗೆ ಜಾಲದ ಶಿಕಾರಿ ಒಂದು ಹಂತಕ್ಕೇನೋ ಬಂದಿದೆ ನಿಜ. ಹಾಗಂತ ರಿಯಾಜ್ ಬಾಯಿ ಬಿಡಬೇಕಲ್ಲ, ಅಶ್ವಿನ್ ರಾವ್ ಬಾಯಿಂದ ಏನೇನು ಸತ್ಯ ಹೊರಬೀಳುತ್ತೋ ಗೊತ್ತಿಲ್ಲ. ಅಷ್ಟಕ್ಕೂ ಪಳಗಿದ ಪಾತಕಿಗಳಾದ ಭಾಸ್ಕರ್ ಮತ್ತು ಹೊಟ್ಟೆ ಕೃಷ್ಣ ಯಾವ ಬಿಲ ಹೊಕ್ಕು ಕೂತಿದ್ದಾರೋ ಗೊತ್ತಿಲ್ಲ.

ಈ ತಂಡದ ಇತರೇ ಪಾತಕಿಗಳ್ಯಾರು? ಈ ತನಕ ಯಾವ್ಯಾವ ಭ್ರಷ್ಟ ಅಧಿಕಾರಿಗಳಿಂದ ಯಾವ್ಯಾವ ಮೊತ್ತವನ್ನು ಈ ಗ್ಯಾಂಗ್ ಕಿತ್ತಿದೆ? ಲೋಕಾ ತನಿಖೆಯಲ್ಲಿರುವ ಭೂಹಗರಣಗಳನ್ನು ಯಾವ ರಿಯಲ್ ಎಸ್ಟೇಟ್ ಧೊರೆಗಳು ನಿಭಾಯಿಸುತ್ತಿದ್ದರು? ದೋಚಿದ ದುಡ್ಡನ್ನು ಯಾರೆಲ್ಲ ಯಾವ್ಯಾವ ಉದ್ದಿಮೆಗೆ ತೊಡಗಿಸಿದ್ದಾರೆ? ಅವರ ಆಸ್ತಿಪಾಸ್ತಿಯ ವಿವರಗಳೇನು? ಅವನ್ನು ಜಪ್ತಿ ಮಾಡುವವರ್ಯಾರು?

ಕೇವಲ ರಿಯಾಜ್, ಅಶ್ವಿನ್, ಅಶೋಕ್ ಮುಂತಾದವರನ್ನು ಬಂಧಿಸಿದ ಮಾತ್ರಕ್ಕೇ ಸತ್ಯ ಬಯಲಾದಂತಲ್ಲ. ಮೇಲಿನ ಪ್ರಶ್ನೆಗಳಿಗೆಲ್ಲ ಉತ್ತರ ದೊರಕದೆ ಆಪರೇಷನ್ ಎತ್ತುವಳಿ ರ್‍ಯಾಕೆಟ್ ಪೂರ್ಣಗೊಳ್ಳುವುದಿಲ್ಲ.

■ರಾ. ಸೋಮನಾಥ್

ಸಂತೆಯೊಳಗೊಂದು ಮನೆಯ ಮಾಡಿ



ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ?
ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

- ಅಕ್ಕಮಹಾದೇವಿ


ವೀರವಿರಾಗಿಣಿ ಅಕ್ಕಮಹಾದೇವಿಯ ಜೀವನ್ಮುಖಿ ವಚನವಿದು. ಮಾನವರು ತಮ್ಮ ಅನುಭಾವದ (ಮೆಟಾಫಿಜಿಕಲ್ ಎಕ್ಸ್‌ಪೀರಿಯನ್ಸ್) ಒಳಜಗತ್ತಿನಲ್ಲಿ ಪರಿಪೂರ್ಣತೆಯನ್ನು ಸಾಧಿಸಬೇಕಾದರೆ ಅನುಭವದ (ವರ್ಲ್ಡ್ಲೀ ಎಕ್ಸ್‌ಪೀರಿಯನ್ಸ್) ಹೊರಜಗತ್ತಿನಲ್ಲಿ ಎದೆಗುಂದದೆ ಬದುಕುವ ಕಲೆಯನ್ನು ಕಲಿಯಬೇಕಾಗುವುದು. ಧೈರ್ಯದಿಂದ ಬದುಕುವುದು. ಆಪತ್ತುಗಳನ್ನು ಎದುರಿಸುತ್ತ ಬದುಕುವುದು. ಬದಲಿಸಲು ಸಾಧ್ಯವಾಗದಂಥ ಪ್ರತಿಕೂಲ ವಾತಾವರಣವನ್ನು ಸಹಿಸುತ್ತ ಬದುಕುವುದು. ಹೊಗಳಿಕೆಯಿಂದ ಮೇಲುರಿಮೆ (ಸುಪೀರಿಯಾರಿಟಿ ಕಾಂಪ್ಲೆಕ್ಸ್) ಯನ್ನು ಬೆಳೆಸಿಕೊಳ್ಳದೆ, ತೆಗಳಿಕೆಯಿಂದ ಕೀಳುರಿಮೆಗೆ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್) ಒಳಗಾಗದೆ ಬದುಕುವುದು. ಈ ಎರಡು ತೆರನಾದ ಮನೋರೋಗಗಳ ಸಂಕೀರ್ಣ ಅವಸ್ಥೆಯಿಂದಾಗಿ ಮನದಲ್ಲಿ ಉಂಟಾಗುವ ಅಹಂ ಮತ್ತು ಕೋಪದಿಂದ ಮುಕ್ತವಾಗಿ ಸಮಾಧಾನಚಿತ್ತರಾಗಿರಬೇಕು ಎಂಬುದು ಅಕ್ಕನ ಆಶಯವಾಗಿದೆ.

ಬಸವಧರ್ಮಕ್ಕೆ ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರಗಳು ಮೂಲಾಧಾರವಾಗಿವೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರಗಳೆಂಬ ಎಂಟು ಆವರಣಗಳು ನಮ್ಮನ್ನು ಐಹಿಕ ದುರಾಸೆಗಳಿಂದ ರಕ್ಷಿಸುತ್ತವೆ. ಗುರುವೆಂಬ ಜ್ಞಾನ, ಲಿಂಗವೆಂಬ ಸರ್ವಸಮತ್ವದ ತತ್ತ್ವ, ಜಂಗಮವೆಂಬ ವಿಶ್ವಸಮಾಜ ಪ್ರಜ್ಞೆ, ಪಾದೋದಕ ಎಂಬ ಜ್ಞಾನೋದಕ (ಪಾದ ಎಂದರೆ ಜ್ಞಾನ ಎಂಬ ಅರ್ಥವೂ ಇದೆ. ಬಸವಧರ್ಮದಲ್ಲಿ ಪಾದೋದಕ ಜ್ಞಾನೋದಕವಾಗುತ್ತದೆ. ಆಯುರ್ವೇದದ ವಸ್ತುಗಳಿಂದ ತಯಾರಿಸಿದ ಇಷ್ಟಲಿಂಗದಲ್ಲಿ ಮೆದುಳನ್ನು ಚುರುಕುಗೊಳಿಸುವಂಥ ಔಷಧೀಯ ಅಂಶಗಳಿವೆ. ಲಿಂಗದ ಮೇಲಿನ ನೀರಿಗೆ ಪಾದೋದಕ ಎಂದು ಕರೆಯುತ್ತಾರೆ. ಲಿಂಗಕ್ಕೆ ಮಜ್ಜನಕ್ಕೆರೆದುದು ಪಾದೋದಕ ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ.) ನಮ್ಮ ಕಾಯವೂ ಒಳಗೊಂಡಂತೆ ಇಡೀ ವಿಶ್ವ ದೇವರಕೃಪೆ ಎಂದು ಭಾವಿಸುವುದೇ ಪ್ರಸಾದ ಭಾವ. ಈ ವಿಶ್ವ ಒಂದುದಿನ ಬಯಲಾಗುವುದು ಎಂದು ಸಾರುವ ಮತ್ತು ಐಹಿಕ ಕಾಮನೆಗಳನ್ನು ಸುಟ್ಟು ಹಾಕುವುದರ ಸಂಕೇತವೇ ವಿಭೂತಿ, ಶಿವನಾಮ ಜಪಿಸಲು ಅವಶ್ಯವಾದ ರುದ್ರಾಕ್ಷಿ ಮತ್ತು ಮನಸ್ಸನ್ನು ಏಕಾಗ್ರತೆಗೆ ಒಯ್ಯುವ ಶಿವಮಂತ್ರ ಎಂಬ ಅಷ್ಟಾವರಣಗಳು ಮಾನವರ ಬದುಕಿಗೆ ರಕ್ಷಾಕವಚವಾಗಿ ಬಂದು ಐಹಿಕ ಜಗತ್ತಿನ ಅನಾಹುತಗಳಿಂದ ರಕ್ಷಿಸುವ ಮೂಲಕ ಸೃಷ್ಟಿಕರ್ತನ ಮತ್ತು 'ಸೃಷ್ಟಿಯ ಮಹತ್ವವನ್ನು ಅರಿಯಲು ಸಹಾಯ ಮಾಡುವವು.

ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಷಟ್‌ಸ್ಥಲಗಳು ಮಾನಸಿಕ ಬೆಳವಣಿಗೆಯ ಪ್ರಕ್ರಿಯೆಗಳಾಗಿದ್ದು ಮಾನವರನ್ನು ವ್ಯಕ್ತಿತ್ವ ವಿಕಸನದ ಅತ್ಯುನ್ನತ ಮಟ್ಟಕ್ಕೆ ಒಯ್ದು ಶಿವಸ್ವರೂಪಿಯಾಗುವಂಥ ಅಚ್ಚಲಿಂಗೈಕ್ಯ ಸ್ಥಲಕ್ಕೆ ತಲುಪಿಸುತ್ತವೆ.

ಸೃಷ್ಟಿಕರ್ತನು ಸೃಷ್ಟಿಯನ್ನು ಸೃಷ್ಟಿಸಿದ ಮೇಲೆ ಮಾನವ ಮತ್ತು ಒಟ್ಟಾರೆ ಸೃಷ್ಟಿಯ ಜೊತೆ ಅಂತರ್ಗತವಾಗಿದ್ದಾನೆ. ಮಾನವರು ಅನುಭವಿಗಳಾದಾಗ ಮಾತ್ರ ಈ ರಹಸ್ಯವನ್ನು ಕಂಡುಕೊಳ್ಳಲು ಸಾಧ್ಯ. ಆದರೆ ಲಿಂಗಾಂಗಸಾಮರಸ್ಯವಿಲ್ಲದೆ ಅನುಭಾವಿಯಾಗಲು ಸಾಧ್ಯವಿಲ್ಲ. ಲಿಂಗಾಂಗಸಾಮರಸ್ಯಕ್ಕಾಗಿ ಇರುವ ಆರು ಹಂತಗಳೇ ಷಟ್‌ಸ್ಥಲಗಳು. ಆದ್ದರಿಂದ ಸಾಧಕನಾಗ ಬಯಸುವವನು ಲಿಂಗಾಂಗಸಾಮರಸ್ಯದ ಮೊದಲ ಘಟ್ಟವಾದ ಭಕ್ತಸ್ಥಲದಲ್ಲಿ ಸಾಧನೆ ಮಾಡುತ್ತಾನೆ. ಅಹಂ ನಾಶವಾಗದೆ ಭಕ್ತನಾಗಲಾರ. ಈ ಸ್ಥಲದಲ್ಲಿ ಸಾಧಕ ಅಹಂಕಾರದಿಂದ ಮುಕ್ತನಾಗುತ್ತಾನೆ. ಭಕ್ತನು ಎರಡನೆಯದಾದ ಮಹೇಶ ಸ್ಥಲಕ್ಕೆ ಹೋದಾಗ ಮಹೇಶ ಎಂದು ಅನಿಸಿಕೊಳ್ಳುತ್ತಾನೆ ಇಲ್ಲಿ ಭಕ್ತಿಯು ನಿಷ್ಠೆಯ ಪರಾಕಾಷ್ಠೆಯನ್ನು ತಲುಪಿರುತ್ತದೆ. ಮೂರನೆಯದಾದ ಪ್ರಸಾದಿ ಸ್ಥಲದಲ್ಲಿ ಸಾಧಕನು ಶಿವಸಾಕ್ಷಾತ್ಕಾರದ ಮಾರ್ಗದಲ್ಲಿರುತ್ತಾನೆ. ನಾಲ್ಕನೆಯ ಸ್ಥಲವಾದ ಪ್ರಾಣಲಿಂಗಿಯಲ್ಲಿ ಸಾಧಕನಿಗೆ ಜಂಗಮಲಿಂಗ(ಚರಾಚರಗಳಿಂದ ಕೂಡಿದ ಇಡೀ ವಿಶ್ವಸಮಾಜ)ದಲ್ಲಿ ದೇವರು ವ್ಯಾಪಿಸಿದ್ದರ ಬಗ್ಗೆ ಮನವರಿಕೆಯಾಗುತ್ತದೆ. ಐದನೇ ಸ್ಥಲವಾದ ಶರಣಸ್ಥಲವನ್ನು ಸಾಧಕನು ಮನೋಲೋಕದಲ್ಲಿ ತಲುಪಿದ ಸಂದರ್ಭದಲ್ಲಿ ಸತ್ಯ, ದಯೆ, ಕ್ಷಮೆ, ಸಮಾಧಾನ, ಆನಂದ, ಸ್ಥೈರ್ಯ ಮುಂತಾದ ಸಕಲಜೀವಾತ್ಮರಿಗೆ ಲೇಸನ್ನು ಬಯಸುವಂಥ ಅನುಭಾವಿಯ ಗುಣಗಳನ್ನು ಬೆಳೆಸಿಕೊಳ್ಳುವ ಮೂಲಕ ಶಿವನಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವ ಸಾಮರ್ಥ್ಯ ಪಡೆದು ಶರಣನಾಗಿರುತ್ತಾನೆ. ಕೊನೆಯ ಹಂತವಾದ ಐಕ್ಯಸ್ಥಲದಲ್ಲಿ ಸಾಧಕ ಲಿಂಗಾಂಗಸಾಮರಸ್ಯವನ್ನು ಹೊಂದಿ ತನ್ನೊಳಗಿನ ದೇವರ ಜೊತೆ ಒಂದಾಗಿರುತ್ತಾನೆ. ಈ ಪ್ರಕಾರ ಮಾನವರು ಮನೋವಿಕಾಸಗೊಂಡು ಶರಣರಾಗುತ್ತಾರೆ. ಹೀಗೆ ಪಡೆದ ಅರಿವಿನಿಂದ ಒಳ ಮತ್ತು ಹೊರ ಜಗತ್ತುಗಳನ್ನು ಒಂದಾಗಿಸುತ್ತ ಅನುಭಾವಿಗಳಾಗುತ್ತಾರೆ. ಪಂಚಾಚಾರಗಳ ಮೂಲಕ ಅರಿವನ್ನು ಆಚರಣೆಯಲ್ಲಿ ತಂದು ಸಮಾಜಮುಖಿಗಳಾಗುತ್ತಾರೆ. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ' ಎಂಬುದನ್ನು ಲೋಕಕ್ಕೆ ಸಾರುತ್ತಾರೆ.

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳೆಂಬ ಐದು ಬಗೆಯ ಆಚಾರಗಳಿಗೆ ಪಂಚಾಚಾರ ಎಂದು ಕರೆಯುತ್ತಾರೆ. ಏಕದೇವೋಪಾಸನೆಯ ಪ್ರತೀಕವಾದ ಇಷ್ಟಲಿಂಗಪೂಜೆಯನ್ನು ಮಾತ್ರ ಮಾಡುವುದು ಲಿಂಗಾಚಾರ. ಪರಹಿತ ಬಯಸುತ್ತ ಪ್ರಾಮಾಣಿಕವಾಗಿ ಬದುಕುವುದು ಸದಾಚಾರ. ಶಿವಭಕ್ತರಲ್ಲಿ ಜಾತಿಭೇದ ಎಣಿಸದಿರುವುದು ಶಿವಾಚಾರ. ಶಿವಭಕ್ತರ ಜೊತೆ ಸೇವಾಭಾವದಿಂದಿರುವುದು ಭೃತ್ಯಾಚಾರ. ಶಿವನ ಮತ್ತು



ಶಿವಭಕ್ತರ ನಿಂದೆಯನ್ನು ಸಹಿಸದಿರುವುದು ಗಣಾಚಾರ.

ಪಂಚಾಚಾರದಿಂದ ಕೂಡಿದ ಶರಣರು ಸುಂದರ, ಸದೃಢ ಹಾಗೂ ಸರ್ವಸಮತ್ವದ ಸಮಾಜವನ್ನು ನಿರ್ಮಿಸಲು ಸಾಧ್ಯ. ಅದಕ್ಕಾಗಿ ಅಷ್ಟಾವರಣಗಳ ಸಹಾಯದಿಂದ ಐಹಿಕ ದುರಾಸೆಗಳಿಂದ ಮುಕ್ತರಾಗಬೇಕಾಗುತ್ತದೆ ಮತ್ತು ಷಟ್‌ಸ್ಥಲಗಳ ಸಹಾಯದಿಂದ ಮಾನಸಿಕ ಸ್ಥಿತಿಯನ್ನು ಅತ್ಯುನ್ನತ ಮಟ್ಟಕ್ಕೆ ಏರಿಸಬೇಕಾಗುತ್ತದೆ.

ಅಕ್ಕ ಹೇಳುವ "ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು" ಎಂಬ ಮಾತು ಈ ಸಾಧನೆಗೆ ಅಡಿಪಾಯವಾಗುತ್ತದೆ. ಈ ಮಾತು ಷಟ್‌ಸ್ಥಲಗಳಲ್ಲಿನ ಉಪವಿಭಾಗಗಳಲ್ಲಿನ ನೂರೊಂದು ಸ್ಥಲಗಳಲ್ಲಿ ಒಂದಾದ 'ಸ್ತುತಿನಿಂದಾನಿರಶನಸ್ಥಲ'ವನ್ನು ಸೂಚಿಸುತ್ತದೆ. ಹೊಗಳಿಕೆ ತೆಗಳಿಕೆಗಳೆರಡನ್ನೂ ಗಣನೆಗೆ ತೆಗೆದುಕೊಳ್ಳದೆ ಲೋಕದೊಳಗೆ ಹುಟ್ಟಿದ ಬಳಿಕ ಜೀವಕಾರುಣ್ಯ ಕೂಡಿದ ಮನೋಭಾವದೊಂದಿಗೆ ಬದುಕಿನ ಎಲ್ಲ ಅಡೆತಡೆಗಳನ್ನು ಎದುರಿಸುವ ಛಲದೊಂದಿಗೆ ಮುನ್ನಡೆದು ಜೀವನವನ್ನು ಸಾರ್ಥಕಗೊಳಿಸಲು ಅವಶ್ಯವಾಗಿರುವ ಮಾರ್ಗಸೂಚಿಯನ್ನು ಅಕ್ಕನ ಈ ವಚನ ಒಳಗೊಂಡಿದೆ.

"ಊರ ಸೀರೆಗೆ ಅಸಗ ತಡಬಡಗೊಂಡಂತೆ
ಹೊನ್ನೆನ್ನದು, ಮಣ್ಣೆನ್ನದು ಎಂದು ನೆನನೆನದು ಬಡವಾದೆ.
ನಿಮ್ಮನರಿಯದ ಕಾರಣ ಕೆಮ್ಮಗೆ ಕೆಟ್ಟೆನಯ್ಯಾ
ಚೆನ್ನಮಲ್ಲಿಕಾರ್ಜುನಾ."

- ಅಕ್ಕಮಹಾದೇವಿ

ನಾವು ಎಲ್ಲ ಬಗೆಯ ಎಡರುತೊಡರುಗಳನ್ನು ಎದುರಿಸುತ್ತ ಯಾವುದೇ ಕಾಯಕ ಮಾಡುವಾಗ ದೇವಕಾರ್ಯವೆಂದೇ ಮಾಡಬೇಕು. ಸಂಪತ್ತಿನ ಲಾಲಸೆಯಿಂದ ಮಾಡಬಾರದು. ಹಾಗೆ ಮಾಡಿದರೆ ಹೊನ್ನು ಆಸ್ತಿ ಎಂಬ ಕೊರಗಿನಲ್ಲೇ ಸೊರಗಿಹೋಗಬೇಕಾಗುತ್ತದೆ. ಬಟ್ಟೆ ಒಗೆಯುವುದಷ್ಟೇ ಅಗಸನ ಕಾಯಕವಾಗಬೇಕು ಹೊರತಾಗಿ ಆ ಬೆಲೆಬಾಳುವ ವಸ್ತ್ರಗಳು ತನಗೆ ಸಂಬಂಧಿಸಿದವು ಎಂಬ ಭಾವ ಬಂದು ತಡವರಿಸಿದರೆ ದುಃಖ ಕಟ್ಟಿಟ್ಟ ಬುತ್ತಿ ದೇವರ ನಿಜದ ನಿಲುವನ್ನು ಅರಿಯದೆ ಹೋದರೆ ನಾವು ಸಂಪತ್ತಿನ ಗುಲಾಮರಾಗುತ್ತೇವೆ. ನಾವು ಇಹಲೋಕ ಯಾತ್ರೆ ಮುಗಿಸಿದನಂತರವೂ ಆ ಸಂಪತ್ತು ನಮ್ಮ ಜೊತೆಗೇ ಬರುವುದು ಎಂಬಂತೆ ಬದುಕುತ್ತೇವೆ. ಅನುಭಾವದ ಎತ್ತರಕ್ಕೆ ಏರದ ಬದುಕು ಅರ್ಥಹೀನ ಎಂಬುದನ್ನು ಅಕ್ಕ ಈ ವಚನದಲ್ಲಿ ಸೂಚಿಸಿದ್ದಾಳೆ.

"ಅನುತಾಪದೊಡಲಿಂದೆ ಬಂದ ನೋವನುಂಬವರು
ಒಡಲೊ, ಪ್ರಾಣವೊ, ಆರು ಹೇಳಾ?
ಎನ್ನೊಡಲಿಂಗೆ ನೀನು ಪ್ರಾಣವಾದ ಬಳಿಕ
ಎನ್ನ ಒಡಲ ಸುಖ ದುಃಖವಾರ ತಾಗುವುದು ಹೇಳಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ
ಎನ್ನ ನೊಂದ ನೋವು, ಬೆಂದ ಬೇಗೆ
ನಿಮ್ಮ ತಾಗದೆ ಹೋಹುದೆ ಅಯ್ಯಾ"

- ಅಕ್ಕಮಹಾದೇವಿ

ಲೋಕದಲ್ಲಿ ಇರುವವರೆಗೆ ಸುಖದುಃಖಗಳು ಬಂದೇ ಬರುತ್ತವೆ. ದೇವರೇ ಪ್ರಾಣವಾದಾಗ ಐಹಿಕ ಜಗತ್ತಿನ ಸುಖದುಃಖಗಳು ಆ ದೇವರಿಗೆ ಅರ್ಪಿತವಾಗುತ್ತವೆ ಎಂಬ ಭಾವ ನಮ್ಮನ್ನು ಆಘಾತಕ್ಕೀಡುಮಾಡುವ ಮಾನಸಿಕ ಕ್ಲೇಶದಿಂದ ಮುಕ್ತಮಾಡಬಲ್ಲುದು. ಮಾನಸಿಕ ಒತ್ತಡಗಳಿಂದ ಮತ್ತು ಉದ್ವಿಗ್ನತೆಯಿಂದ (ಡಿಪ್ರೆಷನ್ ಅಂಡ್ ಟೆನ್ಷನ್) ಮುಕ್ತವಾಗಿ ಸಹಜ ಜೀವನ ನಡೆಸುವ ಕ್ರಮವನ್ನು ಅಕ್ಕ ಈ ವಚನದ ಮೂಲಕ ಅರುಹಿದ್ದಾಳೆ.

"ಆಡುವುದು ಹಾಡುವುದು ಹೇಳುವುದು ಕೇಳುವುದು
ನಡೆವುದು ನುಡಿವುದು
ಸರಸ ಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ.
ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ
ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು."

- ಅಕ್ಕಮಹಾದೇವಿ


ಮನುಷ್ಯರು ಈ ಜಗತ್ತಿನಲ್ಲಿ ಇರುವವರೆಗೂ ಸಂತೋಷದಿಂದ ಇರಬೇಕು ಎಂಬುದು ಅಕ್ಕನ ಆಶಯವಾಗಿದೆ. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಶರಣರ ಸಂಘದಲ್ಲಿ ಪ್ರೇಮಭಾವದೊಂದಿಗೆ ಇರಬೇಕು. ಅವರ ಜೊತೆ ಆಡಬೇಕು. ಶಿವಗೀತೆಗಳನ್ನು ಹಾಡಬೇಕು. ಮಾನವ ಒಳಿತಾಗಿ ತಿಳಿದುದ್ದನ್ನು ಹೇಳಬೇಕು. ತಿಳಿಯಬೇಕಾದು ದನ್ನು ಕೇಳಿ ತಿಳಿದುಕೊಳ್ಳಬೇಕು. ಸನ್ಮಾರ್ಗದಲ್ಲಿ ನಡೆಯಬೇಕು. ಆ ಮಾನವೀಯ ಮಾರ್ಗದಲ್ಲಿ ಮುನ್ನಡೆಯುವಂಥದ್ದನ್ನೇ ನುಡಿಯಬೇಕು. ಜೀವಕಾರುಣ್ಯದಿಂದ ಕೂಡಿದ ಲಿಂಗತತ್ತ್ವವನ್ನು ಪಾಲಿಸುತ್ತ ಆನಂದಮಯವಾಗಿ ಬದುಕುತ್ತಿರುವವರ ಜೊತೆಯಲ್ಲಿ ಬದುಕನ್ನು ಅರ್ಥಪೂರ್ಣವಾಗಿಸಬೇಕು ಎಂದು ಅಕ್ಕ ತಿಳಿಸುತ್ತಾಳೆ.

"ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ! ಶಿವನ ನೆನೆಯಿರೆ! ಈ ಜನ್ಮ ಬಳಿಕಿಲ್ಲ.
ಚೆನ್ನಮಲ್ಲಿಕಾರ್ಜುನ ದೇವರದೇವನ ನೆನೆದು
ಪಂಚಮಹಾಪಾತಕರೆಲ್ಲರು ಮುಕ್ತಿ ಪಡೆದರಂದು!"

- ಅಕ್ಕಮಹಾದೇವಿ

ಇಹಲೋಕ ಯಾತ್ರೆ ಮುಗಿಸುವ ಮೊದಲೇ ದೇವರ ನಾಮಸ್ಮರಣೆ ಮಾಡಬೇಕು. ಇದುವೆ ನಿಜವಾದ ಮುಕ್ತಿಯ ದಾರಿ. ವಸ್ತುಮೋಹದಲ್ಲೇ ಬದುಕು ಸವೆಸದೆ ಶಿವನ ಸಂಕೇತವಾದ ಇಷ್ಟಲಿಂಗವನ್ನು ಪೂಜಿಸುತ್ತ ಮತ್ತು ಕಾಯಕ-ಪ್ರಸಾದ-ದಾಸೋಹ ಪ್ರಜ್ಞೆಯೊಂದಿಗೆ ಶಿವನ ತೋರುರೂಪವಾದ 'ಜಂಗಮಲಿಂಗ' ಎಂಬ ಸಕಲಜೀವಾತ್ಮರಿಂದ ಕೂಡಿದ ಸಮಾಜದ ಸೇವೆ ಮಾಡುತ್ತ ಬದುಕಿದರೆ ಪಂಚಮಹಾಪಾತಕರು ಕೂಡ ನಿಜಮಾನವರಾಗಿ ಮುಕ್ತಿ ಪಡೆಯುವರು ಎಂದು ಅಕ್ಕ ಪಾಪಿಗಳನ್ನು ಕೂಡ ಸನ್ಮಾರ್ಗಕ್ಕೆ ತರುವ ಆಶಾಭಾವವನ್ನು ಹೊಂದಿದ್ದಾಳೆ.

ಗುರುಕಾರುಣ್ಯವ ಪಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದಡೆ ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಆಚಾರದ್ರೋಹ, ಪ್ರಸಾದದ್ರೋಹ. ಇಂತೀ ಪಂಚಮಹಾಪಾತಕಂಗಳು ಭಕ್ತಂಗಲ್ಲದೆ ಭವಿಗೆಲ್ಲಿಹದೊ ಎಂದು' ಬಸವಣ್ಣನವರು ತಿಳಿಸಿದ್ದಾರೆ. ಐಹಿಕ ಆಸೆಗಳಲ್ಲೇ ಮುಳುಗಿದ ಭವಿಗಳು ನಡೆವೆಣ (ನಡೆದಾಡುವ ಹೆಣ) ಮತ್ತು ನುಡಿವೆಣ(ಮಾತನಾಡುವ ಹೆಣ)ಗಳಾಗಿ



ಬದುಕುವುದರಿಂದ ಪಂಚಮಹಾಪಾತಕಗಳ ಪ್ರಜ್ಞೆ ಕೂಡ ಅವರಿಗಿರುವುದಿಲ್ಲ. ಆದರೆ ಗುರುಕಾರುಣ್ಯವೆಂಬ ಇಷ್ಟಲಿಂಗದೀಕ್ಷೆಯನ್ನು ಪಡೆದ ಭಕ್ತ ಮತ್ತೆ ಹಳೆಯ ಬದುಕಿಗೆ ಅಂಟಿಕೊಂಡರೆ ಪಂಚಮಹಾಪಾತಕಗಳಿಗೆ ಒಳಗಾಗುತ್ತಾನೆ ಎಂದು ಬಸವಣ್ಣನವರು ಹೇಳಿದ್ದಾರೆ.

"ಒಬ್ಬಂಗೆ ಇಹವುಂಟು, ಒಬ್ಬಂಗೆ ಪರವುಂಟು,
ಒಬ್ಬಂಗೆ ಇಹವಿಲ್ಲ, ಒಬ್ಬಂಗೆ ಪರವಿಲ್ಲ,
ಒಬ್ಬಂಗೆ ಇಹಪರವೆರಡೂ ಇಲ್ಲ.
ಚೆನ್ನಮಲ್ಲಿಕಾರ್ಜುನದೇವರ ಶರಣರಿಗೆ
ಇಹಪರವೆರಡೂ ಉಂಟು."

- ಅಕ್ಕಮಹಾದೇವಿ

ಕೆಲವರು ಐಹಿಕ ಬದುಕಿನಲ್ಲೇ ಮುಳುಗಿರುತ್ತಾರೆ. ಮತ್ತೆ ಕೆಲವರು ಈ ಲೋಕದ ಬದುಕನ್ನು ಕಡೆಗಣಿಸಿ ಅಲೌಕಿಕ ಬದುಕಿನ ಗುಂಗಿನಲ್ಲೇ ಬದುಕು ಸವೆಸುತ್ತಾರೆ. ಇನ್ನುಳಿದವರಲ್ಲಿ ಕೆಲವರಂತೂ ಇಲ್ಲಿಯೂ ಸಲ್ಲದೆ, ಅಲ್ಲಿಯೂ ಸಲ್ಲದೆ ಬದುಕುತ್ತಾರೆ. ಆದರೆ ಶರಣರು 'ಈ ಮರ್ತ್ಯಲೋಕ ಕರ್ತಾರನ ಕಮ್ಮಟ' ಎಂಬುದನ್ನು ಅರಿತು, ಇಹಪರ ಎರಡಕ್ಕೂ ಸಲ್ಲುವಂತೆ ಬದುಕಿ ಲೋಕದ ಜನರಿಗೆ ಮಾರ್ಗದರ್ಶಕರಾಗುತ್ತಾರೆ ಎಂಬ ವಿಚಾರವನ್ನು ಮಾರ್ಮಿಕವಾಗಿ ತಿಳಿಸುವ ಮೂಲಕ ಅಕ್ಕ ನಮ್ಮಲ್ಲಿ ಬದುಕುವ ಹುಮ್ಮಸ್ಸನ್ನು ಹುಟ್ಟಿಸುತ್ತಾಳೆ.

ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು.
ಕರ್ಣಕ್ಕೆ ಶೃಂಗಾರ ಪುರಾತನರ ಸುಗೀತಂಗಳ ಕೇಳುವುದು
ವಚನಕ್ಕೆ ಶೃಂಗಾರ ಸತ್ಯವ ನುಡಿವುದು.
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ.
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು.
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ-
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ
ಚೆನ್ನಮಲ್ಲಿಕಾರ್ಜುನಾ?

- ಅಕ್ಕಮಹಾದೇವಿ

ಈ ವಚನದಲ್ಲಿ ಅಕ್ಕಮಹಾದೇವಿ ಜೀವನಸೌಂದರ್ಯದ ರಹಸ್ಯವನ್ನು ಬಿಡಿಸಿಟ್ಟಿದ್ದಾಳೆ. ಬದುಕಿನ ಸೌಂದರ್ಯವನ್ನು ಸಂಪತ್ತಿನಿಂದ ಅಳೆಯಲಿಕ್ಕಾಗದು ಅಥವಾ ದೈಹಿಕ ಸೌಂದರ್ಯವೇ ಅಂತಿಮ ಎಂಬ ಭ್ರಮೆಯಲ್ಲಿ ಇರಲಿಕ್ಕಾಗದು. ನಿರ್ಮಲವಾದ ಮನಸ್ಸೇ ಸೌಂದರ್ಯದ ಪ್ರತೀಕ. ಆದ್ದರಿಂದ ನಿರ್ಮಲವಾದ ಮನಸ್ಸನ್ನು ಹೊಂದಬೇಕೆಂದರೆ. ಸತ್ಯವಂತರಾಗಿ ಬದುಕುತ್ತಿರುವ ಗುರುಹಿರಿಯರನ್ನು ನೋಡುವ ಮೂಲಕ ನಮ್ಮ ಕಣ್ಣುಗಳನ್ನು ಸಿಂಗರಿಸಿಕೊಳ್ಳಬೇಕು. ಹಿರಿಯ ಶರಣರ ವಚನಗಳೆಂಬ ಜೀವಪರ ಗೀತಗಳನ್ನು ಕೇಳುವ ಮೂಲಕ ನಮ್ಮ ಕಿವಿಗಳನ್ನು ಸಿಂಗರಿಸಿಕೊಳ್ಳಬೇಕು. ಸತ್ಯವ ನುಡಿಯುವ ಮೂಲಕ ನಮ್ಮ ಮಾತುಗಳನ್ನು ಸಿಂಗರಿಸಬೇಕು. ಒಳ್ಳೆಯ ಕಾರ್ಯಕ್ಕಾಗಿ ದಾಸೋಹಂ ಭಾವದೊಂದಿಗೆ ಕೊಡುವ ಮೂಲಕ ನಮ್ಮ ಕೈಗಳನ್ನು ಸಿಂಗರಿಸಿಕೊಳ್ಳಬೇಕು. ಸಜ್ಜನರಾದ ಶರಣರ ಸಮುದಾಯದೊಂದಿಗೆ ಜೀವಿಸುತ್ತ ಬದುಕನ್ನು ಸುಂದರಗೊಳಿಸಿಕೊಳ್ಳಬೇಕು. ಹೀಗೆ ನಿರ್ಮಲವಾದ ಮನಸ್ಸನ್ನು ಹೊಂದುವುದರ ಮೂಲಕ ಅನುಪಮ ಸೌಂದರ್ಯವನ್ನು ಹೊಂದಬೇಕು. ಈ ರೀತಿ ಸೌಂದರ್ಯ ಸಾಧನೆ ಮಾಡದವರ ಬದುಕು ನಿರರ್ಥಕ ಎಂದು ಅ... ಸಾರಿ ಹೇಳಿದ್ದಾಳೆ.

ದೈನಂದಿನ ಬದುಕಿನಲ್ಲಿ ಎಲ್ಲ ಅಡೆತಡೆಗಳನ್ನು ಎದುರಿಸುತ್ತ ಮುನ್ನಡೆಯುವುದರ ಜೊತೆಗೇ ಕಣ್ಣು ಕಿವಿ ಕೈ ಮತ್ತು ನಾಲಗೆಯ ಮೇಲೆ ವಿಜಯ ಸಾಧಿಸುವುದರ ಮೂಲಕ ಮಾನವರು ತಮ್ಮ ಬದುಕನ್ನು ಸುಂದರಗೊಳಿಸಲು ಸಾಧ್ಯ ಎಂಬುದಕ್ಕೆ ಅಕ್ಕನ ಬದುಕು ಕೂಡ ಸಾಕ್ಷಿಯಾಗಿದೆ.

(2015ನೇ ಜುಲೈ 3 ಮತ್ತು 4ರಂದು ನ್ಯೂಜೆರ್ಸಿಯಲ್ಲಿ ನಡೆದ ವೀರಶೈವ ಸಮಾಜ ಆಫ್ ನಾರ್ಥ್ ಅಮೆರಿಕ (ವಿ.ಎಸ್.ಎನ್.ಎ) ಸಂಘಟನೆಯ 38ನೇ ವಾರ್ಷಿಕ ಸಮಾವೇಶದಲ್ಲಿ ಮಾಡಿದ ಪ್ರಧಾನ ಭಾಷಣ)

● ರಂಜಾನ್ ದರ್ಗಾ

ಪಂಜರದ ಅರಗಿಣಿಗಳಾಗಿರುವ ಸಿಬಿಐ ಮತ್ತು ಎನ್‌ಐಎ

ತಾನೊಂದು ವಿಭಿನ್ನ ಪಕ್ಷವೆಂದು ಟಾಂಟಾಂ ಹೊಡೆಯುತ್ತಾ ಇದ್ದ ಬಿಜೆಪಿಗೆ ಇವತ್ತು ದೇಶವನ್ನಾಳುವ ಅವಕಾಶ ಒದಗಿಬಂದಿರುವುದರಿಂದ ಅದೀಗ ಯಾವ ವಿಧಗಳಲ್ಲಿ, ಯಾವ ರೂಪಗಳಲ್ಲಿ ತನ್ನ ವಿಭಿನ್ನತೆಯನ್ನು ಪ್ರದರ್ಶಿಸುತ್ತಿದೆಯೆಂದು ನೋಡಹೊರಟರೆ ಹತ್ತಾರು ಪ್ರಶ್ನೆಗಳು ಧುತ್ತೆಂದು ಎದುರಾಗುತ್ತಿವೆ. ಭ್ರಷ್ಟಾಚಾರ, ಅನಾಚಾರಗಳಲ್ಲಿ ಹಿಂದಿನ ಸರ್ಕಾರಗಳಿಗಿಂತಲೂ ಒಂದು ಕೈ ಮಿಗಿಲಾಗಿರುವುದು ವಿಭಿನ್ನತೆಯೇ? ಅಲ್ಪಸಂಖ್ಯಾತರ ಮೇಲೆ ಹಿಂದೆಂದಿಗಿಂತಲೂ ಹೆಚ್ಚು ದಾಳಿಗಳನ್ನು ನಡೆಸುತ್ತ ಅವರನ್ನು ಸಂಪೂರ್ಣವಾಗಿ ದಮನಿಸುವುದು ವಿಭಿನ್ನತೆಯೇ? ಮುಖ್ಯವಾಗಿ, ಪರಿಸರ ಸಂರಕ್ಷಣೆಗಾಗಿ ಹೋರಾಡುತ್ತಿರುವವರಿಗೆ ಕಿರುಕುಳ ನೀಡುವುದು ವಿಭಿನ್ನತೆಯೇ? ರೈತರ ಜಮೀನನ್ನು ಕಿತ್ತುಕೊಂಡು ಕಾರ್ಪೋರೇಟುಗಳಿಗೆ ಹಸ್ತಾಂತರಿಸುವಂತಹ ಕಾನೂನನ್ನು ಮಾಡಹೊರಟಿರುವುದು ವಿಭಿನ್ನತೆಯೇ? ಪ್ರಜಾಸತ್ತೆಯ ಎಲ್ಲಾ ಅಂಗಗಳ ಮೇಲೆ ಸರ್ವಾಧಿಕಾರ ಸ್ಥಾಪಿಸಲು ಹೊರಟಿರುವುದು ವಿಭಿನ್ನತೆಯೇ? ಮಾಧ್ಯಮಗಳನ್ನು ಸರ್ಕಾರದ ತುತ್ತೂರಿಯಾಗಿಸಲು ಹೊರಟಿರುವುದು ವಿಭಿನ್ನತೆಯೇ? ದೇಶದ ಪ್ರಮುಖ ಸಂಸ್ಥೆಗಳಲ್ಲಿ ಅನರ್ಹ, ಸಂವಿಧಾನ ವಿರೋಧಿ, ಕೋಮುವಾದಿ ವ್ಯಕ್ತಿಗಳನ್ನು ತುಂಬುವುದು ವಿಭಿನ್ನತೆಯೇ? ಸಿಬಿಐ, ಎನ್‌ಐಎಯಂತಹ ಅತ್ಯುನ್ನತ ತನಿಖಾ ಸಂಸ್ಥೆಗಳನ್ನು ಪಂಜರದ ಅರಗಿಣಿಗಳನ್ನಾಗಿಸಿ ಹಿಂಬಾಲಕರನ್ನು ರಕ್ಷಿಸುತ್ತ ಆಗದವರ ವಿರುದ್ಧ ಕತ್ತಿ ಮಸೆಯುವುದು ವಿಭಿನ್ನತೆಯೇ???? ಮೋದಿಯ ವಿಭಿನ್ನ ಸರ್ಕಾರ ಸಿಬಿಐ, ಎನ್‌ಐಎಗಳನ್ನು ದುರುಪಯೋಗಪಡಿಸುತ್ತಿರುವ ಪರಿಯನ್ನು ನೋಡಿದರೆ ಯಾರಿಗಾದರೂ ಭಯವಾಗದಿರದು.

ಸಿಬಿಐ ಕುರಿತು ಒಂದಿಷ್ಟು

ಒಟ್ಟು ಸುಮಾರು 6600 ಮಂದಿ ಸಿಬ್ಬಂದಿಗಳನ್ನು ಹೊಂದಿರುವ ಸಿಬಿಐಯ ವಾರ್ಷಿಕ ಬಜೆಟ್ಟು ರೂ. 460 ಕೋಟಿ. ಪ್ರಸಕ್ತವಾಗಿ ಅದು ಪ್ರಧಾನಿ ಕಚೇರಿಯ ಕೈಕೆಳಗೆ ಕಾರ್ಯಾಚರಿಸುತ್ತಿದ್ದು ಹಣಕಾಸಿಗಾಗಿ ಅದನ್ನೇ ಅವಲಂಬಿಸಿದೆ. ವಾಸ್ತವವಾಗಿ ಸಿಬಿಐ ಸಂಸ್ಥೆ ಸಂಸತ್ತಿನ ನಿಯಂತ್ರಣದಲ್ಲಿರಬೇಕಾಗಿತ್ತು. ಆದರೆ ಯಾವೊಂದು ಸರ್ಕಾರವೂ ಅದನ್ನು ಮಾಡಹೋಗಿಲ್ಲ ಏಕೆಂದರೆ ಸಿಬಿಐಗೆ ಸ್ವಾಯತ್ತೆ ಕೊಡುವುದು ಯಾರಿಗೂ ಬೇಕಾಗಿಲ್ಲ. ಎಲ್ಲ ಸರ್ಕಾರಗಳಿಗೂ ಪಂಜರದೊಳಗಿನ ಮುದ್ದಿನ ಗಿಣಿಯೆ ಬೇಕಾಗಿದೆ. ಹಾಗೆ ನೋಡಿದರೆ ಗುಪ್ತಚರ ಇಲಾಖೆಯ ಪರಿಸ್ಥಿತಿಯೂ ಹೆಚ್ಚುಕಮ್ಮಿ ಇದೇ ರೀತಿ ಇದೆ. ಅದೇಕೆಂದು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ. ಸಿಬಿಐಗೆ ನಿಯೋಜಿತರಾಗಿದ್ದ ಹಲವಾರು ಪೊಲೀಸ್ ಅಧಿಕಾರಿಗಳೇ ಹೇಳುವಂತೆ ಅಧಿಕಾರಿಗಳ ನೇಮಕಾತಿ ಎಲ್ಲಾ ಸಂದರ್ಭಗಳಲ್ಲೂ ಅರ್ಹತೆಯ ಆಧಾರದಲ್ಲಿ ನಡೆಯುವುದಿಲ್ಲ. ಹಾಗಾಗಿ ಸಿಬಿಐನ ಉನ್ನತ ಅಧಿಕಾರಿಗಳ ನೇಮಕಾತಿಯ ಹಿಂದೆ ರಾಜಕೀಯ ಪ್ರಭಾವ ಇದ್ದೇ ಇದೆಯೆಂಬ ಮಾಹಿತಿಯನ್ನು ತಳ್ಳಿಹಾಕಲಾಗುವುದಿಲ್ಲ. ಉದಾಹರಣೆಗೆ 2012ರಲ್ಲಿ ಯುಪಿಎ ಸರ್ಕಾರ ಕುಲದೀಪ್ ಶರ್ಮ ಎಂಬ ಗುಜರಾತಿನ ಪೊಲೀಸ್ ಅಧಿಕಾರಿಯನ್ನು ನಿರ್ದೇಶಕನ ಸ್ಥಾನಕ್ಕೆ ನೇಮಕ ಮಾಡಲು ಯೋಚಿಸಿತ್ತು. ಆದರೆ ಗುಜರಾತಿನ ಮುಖ್ಯ ಕಾರ್ಯದರ್ಶಿ ವಿರೋಧ ವ್ಯಕ್ತಪಡಿಸಿದಾಗ ಶರ್ಮನನ್ನು ಕೈಬಿಡಲಾಯಿತು. ವಿರೋಧ ಯಾಕೆ? ಯಾಕೆಂದರೆ ಈ ಕುಲದೀಪ್ ಶರ್ಮ ಗುಜರಾತಿನಲ್ಲಿದ್ದಾಗ ಮೋದಿಯನ್ನು ಮಗ್ಗುಲ ಮುಳ್ಳಿನಂತೆ ಕಾಡಿದವರು.

ದೇಶದ ಯಾವುದೇ ಭಾಗವನ್ನು ತೆಗೆದುಕೊಂಡರೂ ಸಿಐಡಿ, ಸಿಒಡಿ ತನಿಖೆಗಳ ಬಗ್ಗೆ ಅತೃಪ್ತಿ ಇದ್ದಾಗಲೆಲ್ಲ ಸಿಬಿಐ ತನಿಖೆ ಬೇಕೆಂಬ ಕೂಗುಗಳು ಸಾಮಾನ್ಯ. ಯಾಕೆಂದರೆ ನಮ್ಮ ದೇಶದಲ್ಲಿ ಸಿಬಿಐ ತನಿಖೆಯೆ ಅಂತಿಮವಾಗಿದ್ದು ಅದಕ್ಕಿಂತ ಮೇಲ್ಪಟ್ಟ ತನಿಖೆ ಇಲ್ಲ. ಆದರೂ ಆಗೊಮ್ಮೆ ಈಗೊಮ್ಮೆ ಸರ್ವೋಚ್ಚ ನ್ಯಾಯಾಲಯದಿಂದ ವಿಶೇಷ ತನಿಖಾ ತಂಡಗಳು (ಎಸ್‌ಐಟಿ) ನೇಮಕಗೊಳ್ಳುವುದುಂಟು. ವಾಸ್ತವ ಏನೆಂದರೆ ಸಿಬಿಐ ತನಿಖೆಗಳು ನಾವೆಣಿಸಿದಷ್ಟು ನಿಷ್ಪಕ್ಷಪಾತವಾಗಿಲ್ಲ. ಸಿಬಿಐಗೆ ವಕೀಲರನ್ನು ನೇಮಿಸುವುದು ಸರ್ಕಾರದ ಕಾನೂನು ವಿಭಾಗ. ಅಡ್ವೋಕೇಟ್ ಜನರಲ್, ಸಾಲಿಸಿಟರ್ ಜನರಲ್‌ರಂಥವರು ಸರ್ಕಾರದ ಪರವಾಗಿ ವಾದಿಸುತ್ತಾರೆ ಹೊರತು ಸಿಬಿಐ ಹೇಳಿದಂತಲ್ಲ. ರಾಜ್ಯದಲ್ಲಿರಲಿ, ಕೇಂದ್ರದಲ್ಲಿರಲಿ ಗಣ್ಯ ವ್ಯಕ್ತಿಗಳ ವಿರುದ್ಧ ಪ್ರಕರಣಗಳಿದ್ದಾಗ ಸಂಬಂಧಪಟ್ಟ ಸಿಬಿಐ ಅಧಿಕಾರಿಗಳ ಮೇಲೆ ವಿಪರೀತ ರಾಜಕೀಯ ಒತ್ತಡ ಹೇರಲಾಗುತ್ತದೆ. ಸಾಮಾನ್ಯವಾಗಿ ಸಿಬಿಐ ನೂರಾರು ಸಾಕ್ಷಿಗಳು, ಸಾವಿರಾರು ಪುಟಗಳ ದಾಖಲೆಗಳನ್ನು ಕೋರ್ಟಿಗೆ ಸಲ್ಲಿಸುವುದು ವಾಡಿಕೆ. ಇಂತಹ ಬಹುತೇಕ ಸಂದರ್ಭಗಳಲ್ಲಿ ಇವನ್ನೆಲ್ಲ ಪರಿಶೀಲಿಸುವ ಸಂಸ್ಥೆ ಒಂದೊ ನ್ಯಾಯಾಧೀಶರನ್ನು, ಅಥವಾ ತನಿಖಾಧಿಕಾರಿಯನ್ನು ಅಥವಾ ಇಬ್ಬರನ್ನೂ ವರ್ಗಾವಣೆ ಮಾಡಲಾಗುತ್ತದೆ ಎನ್ನುತ್ತಾರೆ ಸಿಬಿಐ ಕಾರ್ಯವೈಖರಿಯನ್ನು ನೋಡಿರುವ ವಕೀಲರೊಬ್ಬರು.

ಅಮೆರಿಕದ ಎಫ್‌ಬಿಐಗೆ ಹೋಲಿಸಿದರೆ ಸಿಬಿಐನ ಸಾಧನೆ, ಸಂಪನ್ಮೂಲ ಮತ್ತು ರಾಜಕೀಯರಾಹಿತ್ಯ ಏನೇನೂ ಸಾಲದು. ಈ ಸತ್ಯ ಹಲವಾರು ಪ್ರಕರಣಗಳಲ್ಲಿ ಸಾಬೀತಾಗಿದೆ. ಹಾಗೆಂದು ಎಲ್ಲಾ ಪ್ರಕರಣಗಳೂ ಹಳ್ಳಹಿಡಿದಿವೆ ಎಂದಲ್ಲ. ಕೆಲವೊಂದು ಪ್ರಕರಣಗಳನ್ನು ಯಶಸ್ವಿಯಾಗಿ ಭೇದಿಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗಿದೆ. ಉದಾಹರಣೆಯಾಗಿ ರಾಜೀವ ಗಾಂಧಿ ಕೊಲೆ, ಹರ್ಷದ್ ಮೆಹತಾ, ಯೂನಿಟ್ ಟ್ರಸ್ಟ್ ಮತ್ತು ಕ್ರಿಕೆಟ್ ಹಗರಣಗಳು, ಬದಾಯೂನ್ ಅತ್ಯಾಚಾರ ಪ್ರಕರಣಗಳನ್ನು ಹೆಸರಿಸಬಹುದು. ಆದರೆ ಅದೇ ವೇಳೆ ರಾಜಕಾರಣಿಗಳು, ಉಚ್ಚವರ್ಗಗಳ ವ್ಯಕ್ತಿಗಳು ಮುಂತಾದವರನ್ನೊಳಗೊಂಡಂಥ ಬೋಫೋರ್ಸ್, ಯೂರಿಯ, ಜೈನ್ ಹವಾಲ ಮುಂತಾದ ಪ್ರಕರಣಗಳು ವರ್ಷಾನುಗಟ್ಟಲೆ ಮುಂದುವರಿಯುವುದನ್ನು ಕಂಡಾಗ ಸಿಬಿಐ ಬಗ್ಗೆ ಅಪನಂಬಿಕೆ ಮತ್ತು ಸಂಶಯ ಮೂಡುವುದು ಸಹಜವೆ ಆಗಿದೆ.




ಸಿಬಿಐಗೂ ಬಂತು ಗುಜರಾತ್ ಮಾದರಿ

ಇಂದು ದೇಶದ ಪ್ರಧಾನಿ ಆಗಿರುವ ಮೋದಿ ಹಿಂದೊಮ್ಮೆ ಫೇಸ್‌ಬುಕ್‌ನಲ್ಲಿ "ದೇಶದ ಜನತೆ ಸಿಬಿಐಯಲ್ಲಿ ನಂಬಿಕೆ ಕಳಕೊಂಡಿದೆ" ಎಂದು ಬರೆದವನು. ಈಗ ಅದೇ ಮೋದಿ ಗುಜರಾತಿನಲ್ಲಿ ತನ್ನ ಬೆಂಬಲಿಗರಾಗಿದ್ದ ಅಧಿಕಾರಿಗಳನ್ನು ತಂದು ಕೂರಿಸಿ ಸಿಬಿಐಯನ್ನು ಸೂತ್ರದ ಗೊಂಬೆಯಾಗಿ ಪರಿವರ್ತಿಸಿದ್ದಾನೆ. ಸಿಬಿಐ ಕೇಂದ್ರ ಕಚೇರಿ ಈಗ ವಸ್ತುಶಃ ಮಿನಿ ಗುಜರಾತಿನಂತಾಗಿದೆ.

ಇಂದು ಸಿಬಿಐನಲ್ಲಿ ಹೆಚ್ಚುವರಿ ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡಿರುವ ವೈ.ಸಿ.ಮೋದಿ ಎಂಬಾತ ಪರಮ ನಮೋಭಕ್ತ. ಈತನ ಕತೆ ಹೀಗಿದೆ. ಗುಜರಾತಿನ ಗೃಹಸಚಿವನಾಗಿದ್ದ ಹರೇನ್ ಪಾಂಡ್ಯ ತನ್ನ ಚುನಾವಣಾ ಕ್ಷೇತ್ರವನ್ನು ಬಿಟ್ಟುಕೊಟ್ಟಿರಲಿಲ್ಲವೆಂಬ ಕಾರಣಕ್ಕೆ ನರೇಂದ್ರ ಮೋದಿಗೆ ಆತನನ್ನು ಕಂಡರಾಗದು. ಹರೇನ್ ಪಾಂಡ್ಯ ನಿಗೂಢವಾಗಿ ಕೊಲೆಗೀಡಾದಾಗ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿತ್ತು. ಆ ಸಿಬಿಐ ತಂಡದ ಸದಸ್ಯರಲ್ಲೊಬ್ಬನೇ ವೈ.ಸಿ. ಮೋದಿ. ಸಿಬಿಐ ಇಡೀ ಪ್ರಕರಣದ ಹಾದಿ ತಪ್ಪಿಸಿತೆಂದು ಪಾಂಡ್ಯ ಕುಟುಂಬ ಆರೋಪಿಸಿದೆ. ಸಿಬಿಐ ಹಾಜರುಪಡಿಸಿದ್ದ 12 ಆರೋಪಿಗಳನ್ನು ಖುಲಾಸೆಗೊಳಿಸಿದ್ದ ಹೈಕೋರ್ಟು ಕೂಡ 'ಸಿಬಿಐ ಸತ್ಯಾಂಶಗಳ ಬಗ್ಗೆ ಅಂಧರಂತಿದ್ದು ತನಿಖೆಯನ್ನು ಕುಲಗೆಡಿಸಿದೆ' ಎಂದು ಸಂಸ್ಥೆಯನ್ನು ತರಾಟೆಗೆ ತೆಗೆದುಕೊಂಡಿತ್ತು, ಅಷ್ಟೇ ಅಲ್ಲದೆ ತನಿಖಾಧಿಕಾರಿಗಳನ್ನು ತೀವ್ರವಾಗಿ ಟೀಕಿಸಿತ್ತು. ನಂತರ ವೈ.ಸಿ. ಮೋದಿಯನ್ನು 2002ರ ಹತ್ಯಾಕಾಂಡದ ತನಿಖೆ ನಡೆಸಿದ ವಿಶೇಷ ತನಿಖಾ ತಂಡಕ್ಕೆ (ಮಾಜಿ ಸಿಬಿಐ ನಿರ್ದೇಶಕ ರಾಘವನ್ ನೇತೃತ್ವ) ನಿಯೋಜಿಸಲಾಯಿತು. ಅಂದು ಗುಲ್ಬರ್ಗ್ ಸೊಸೈಟಿ, ನರೋಡಾ [illegible] ನರೋಡಾ ಗಾಮ್ ಘಟನೆಗಳ ತನಿಖೆ ನಡೆಸಿದಾತ ಈತನೇ. ಈ ವಿಶೇಷ ತನಿಖಾ ತಂಡ ನರೇಂದ್ರ ಮೋದಿಗೆ 'ಕ್ಲೀನ್ ಚಿಟ್' ನೀಡಿದ ವಿಚಾರ ಅರಿಯದವರಾರು? ಅದೇ ವೈ.ಸಿ. ಮೋದಿ ಇಂದು ಸಿಬಿಐನಲ್ಲಿ ಹೆಚ್ಚುವರಿ ನಿರ್ದೇಶಕ. ಮಾತ್ರವಲ್ಲ, ಸದ್ಯದಲ್ಲೇ ನಿರ್ದೇಶಕನ ಸ್ಥಾನಕ್ಕೆ ಏರಲಿದ್ದಾನೆಂಬ ವರ್ತಮಾನಗಳಿವೆ.

2013ರಲ್ಲಿ 'ಸಾಹೇಬ'ನ ಆದೇಶದಂತೆ ಗುಜರಾತಿ ಯುವತಿಯೊಬ್ಬಳನ್ನು ರಹಸ್ಯವಾಗಿ ಹಿಂಬಾಲಿಸಿದ್ದ "ಸ್ನೂಪ್‌ಗೇಟ್" ಪ್ರಕರಣ ನೆನಪಿಸಿಕೊಳ್ಳಿ. ಅಂದು ಅಮಿತ್ ಶಾ ಪೊಲೀಸರ ಮುಖಾಂತರ ಯುವತಿಯ ಮೇಲೆ ಕಣ್ಗಾವಲಿರಿಸಿದ್ದರೆ ಗುಜರಾತಿನ ಗುಪ್ತಚರ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದ ಅರುಣ್ ಕುಮಾರ್ ಶರ್ಮ ತನ್ನ ಇಲಾಖೆಯ ಸಿಬ್ಬಂದಿ ಮೂಲಕ ಆಕೆಯ ಚಲನವಲನಗಳ ಮೇಲೆ ಕಣ್ಣಿರಿಸಿ ನರೇಂದ್ರ ಮೋದಿಗೆ ನೇರವಾಗಿ ಮಾಹಿತಿ ರವಾನಿಸುತ್ತಿದ್ದ. ಇದೇ ಅರುಣ್ ಶರ್ಮನನ್ನು ಮೊನ್ನೆ ಏಪ್ರಿಲ್ 2015ರಲ್ಲಿ ಸಿಬಿಐ ಜಂಟಿ ನಿರ್ದೇಶಕನ ಸ್ಥಾನಕ್ಕೆ ನೇಮಿಸಲಾಗಿದೆ. ಶೀಘ್ರದಲ್ಲೆ ಈತ ಕಾರ್ಯನೀತಿ ವಿಭಾಗದ ಜಂಟಿ ನಿರ್ದೇಶಕ ಆಗಲಿದ್ದಾನೆಂದು ತಿಳಿದುಬಂದಿದೆ. ಇದೊಂದು ನಿರ್ಣಾಯಕ ಹುದ್ದೆ. ಪ್ರಸಕ್ತವಾಗಿ ಈ ಹುದ್ದೆಯಲ್ಲಿರುವ ಜಾವೀದ್ ಆಲಂ ಕಳೆದ ವರ್ಷವಷ್ಟೆ ಅಧಿಕಾರ ವಹಿಸಿಕೊಂಡಿದ್ದರೂ ಈಗ ಅಮಿತ್ ಶಾನ ಆದೇಶದಂತೆ ಆಲಂನನ್ನು ಮರಳಿ ಉತ್ತರಪ್ರದೇಶಕ್ಕೆ ಕಳುಹಿಸಲಾಗಿದೆ. ಕಾರಣ? ಸೊಹ್ರಾಬುದ್ದೀನ್ ನಕಲಿ ಎನ್ಕೌಂಟರ್ ಪ್ರಕರಣವನ್ನು ಗುಜರಾತಿನಿಂದ ಹೊರ ರಾಜ್ಯಕ್ಕೆ ವರ್ಗಾಯಿಸಿದ್ದ ಸರ್ವೋಚ್ಚ ನ್ಯಾಯಾಲಯದ ನ್ಯಾ| ಅಫ್ತಾಬ್ ಆಲಂಗೆ ಈತ ದೂರದ ಸಂಬಂಧಿ!

ಮೋದಿ ಸರ್ಕಾರದಡಿ ನಡೆಯುತ್ತಿರುವ ವಿದ್ಯಮಾನಗಳು ಸಿಬಿಐ ಮೇಲಿನ ಅಪನಂಬಿಕೆ ಮತ್ತು ಸಂಶಯವನ್ನು ಇನ್ನಷ್ಟು ಹೆಚ್ಚಿಸುವಂತಿವೆ. ಎಲ್‌ಟಿಸಿ ಹಗರಣದಲ್ಲಿ ಆರೋಪಿಗಳಲ್ಲೋರ್ವನಾದ ಉಪೇಂದ್ರ ಕುಶ್ವಾಹನ ಹೆಸರನ್ನು ಅಳಿಸಿ ಹಾಕಲಾಗಿದೆ. ಸೊಹ್ರಾಬುದ್ದೀನ್ ಶೇಕ್ ನಕಲಿ ಎನ್ಕೌಂಟರ್ ಪ್ರಕರಣದಲ್ಲಿ ಅಮಿತ್ ಶಾನನ್ನು ಖುಲಾಸೆಗೊಳಿಸಲಾಗಿದೆ. ಕೆಳಕೋರ್ಟಿನ ಈ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಬೇಕಾಗಿದ್ದ ಸಿಬಿಐ ಸುಮ್ಮನೆ ಕೂತಿದೆ. ಮಾಯಾ ಕೊಡ್ನಾನಿ, ಬಾಬು ಬಜರಂಗಿಯಂತಹ ಕೇಸರಿ ಕೊಲೆಗಡುಕರಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದ ಸಿಬಿಐ ನ್ಯಾಯಾಧೀಶೆಗೆ ಬೆದರಿಕೆಯ ಕರೆಗಳಿದ್ದರೂ ಆಕೆಯ ಭದ್ರತೆ ಬಗ್ಗೆ ನಿರ್ಲಕ್ಷ್ಯ ವಹಿಸಲಾಗಿದೆ. ಇದೇ ಕೊಲೆಗಡುಕರ ಮೇಲ್ಮನವಿಯನ್ನು ಕೈಗೆತ್ತಿಕೊಳ್ಳಲಿದ್ದ ಹೈಕೋರ್ಟಿನ ನ್ಯಾಯಮೂರ್ತಿಗಳು 'ಕೆಲವು ಆರೋಪಿಗಳಿಂದ ಒತ್ತಡ ಬಂದಿರುವ' ಕಾರಣ ನೀಡಿ ವಿಚಾರಣೆಯಿಂದ ಹಿಂದೆಸರಿದರು. 40ಕ್ಕೂ ಅಧಿಕ ಹೆಣಗಳನ್ನುರುಳಿಸಿರುವ ಅತಿಭೀಕರ ವ್ಯಾಪಂ ಹಗರಣ ಸಿಬಿಐಗೆ ವರ್ಗಾಯಿಸಲ್ಪಟ್ಟ ನಂತರದಲ್ಲಿ ಮಾಹಿತಿ ಹಕ್ಕು ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸಲಾಗುತ್ತಿರುವ ವಿದ್ಯಮಾನವೆ ಸೂಚಿಸುವಂತೆ ಈ ತನಿಖೆಯೂ ಹಳ್ಳಹಿಡಿಯಲಿರುವಂತೆ ತೋರುತ್ತದೆ. ಸಿಬಿಐ ಇಂದು ಯಾರ ಆಜ್ಞಾನುವರ್ತಿಯಾಗಿ ಕೆಲಸಮಾಡುತ್ತಿದೆ ಎಂಬುದಕ್ಕೆ ಅದು ಈಗ ತೀಸ್ತಾ ಸೆಟಲ್ವಾಡ್ ಮತ್ತು ಜಾವೆದ್ ಆನಂದ್ ದಂಪತಿ ವಿರುದ್ಧ ಮುರಕೊಂಡು ಬಿದ್ದಿರುವುದೇ ಸಾಕ್ಷಿ. ಮೋದಿ ಪ್ರಥಮ ಆರೋಪಿಯಾಗಿರುವ ಗುಲ್ಬರ್ಗ್ ಸೊಸೈಟಿ ಹತ್ಯಾಕಾಂಡ ಪ್ರಕರಣ ವಿಚಾರಣೆಗೆ ಬರಲು ಇನ್ನೇನು ಕೆಲವೇ ದಿನಗಳಿರುವಾಗ ಪ್ರಕರಣವನ್ನು ಈ ಮಟ್ಟಕ್ಕೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ದಂಪತಿಗೆ ನೀಡಲಾಗುತ್ತಿರುವ ಕಿರುಕುಳದ ಹಿಂದೆ ಯಾರ ಕೈವಾಡವಿದೆಯೆಂಬುದು ಸ್ಫಟಿಕದಷ್ಟು ಸ್ಪಷ್ಟ. ತೀಸ್ತಾರವರ ಸಂಸ್ಥೆಗಳಲ್ಲಿ ಹಣಕಾಸಿನ ಅವ್ಯವಹಾರ ನಡೆದಿದೆಯೆಂದು ಆರೋಪಿಸಿ ಗುಜರಾತ್ ಸರ್ಕಾರ ದಾಖಲಿಸಿರುವ ಪ್ರಕರಣಕ್ಕೆ ಈಗ ಸಿಬಿಐಯನ್ನು ಎಳೆತಂದು ದಂಪತಿ ಮನೆ ಮೇಲೆ ದಾಳಿಗಳನ್ನು ನಡೆಸಲಾಗಿದೆ. 'ಅವರಿಂದ ದೇಶದ ಭದ್ರತೆಗೆ ಅಪಾಯವಿದೆ' ಎಂಬ ಹಾಸ್ಯಾಸ್ಪದ ಹೇಳಿಕೆಯನ್ನು ಕೊಟ್ಟಿರುವುದಂತೂ ತನ್ನ ಮುಖಕ್ಕೆ ತಾನೇ ಮಸಿ ಬಳಿದುಕೊಂಡಂತೆ ಆಗಿದೆ. ಪರಿಣಾಮವಾಗಿ ಸಿಬಿಐನ ಅಳಿದುಳಿದ ಘನತೆ, ವಿಶ್ವಾಸಾರ್ಹತೆಗಳೆರಡೂ ಪೂರ್ತಿ ಮಣ್ಣುಪಾಲಾಗಿವೆ ಎಂದರೆ ತಪ್ಪಾಗಲಾರದು.



ರಾಷ್ಟ್ರೀಯ ತನಿಖಾ ಸಂಸ್ಥೆಯನ್ನೂ (ಎನ್‌ಐಎ) ಬಿಡದ ಗುಜರಾತ್ ಮಾದರಿ

ರಾಷ್ಟ್ರೀಯ ತನಿಖಾ ಸಂಸ್ಥೆ ಎಂಬುದು 2008ರ ಮುಂಬಯಿ ದಾಳಿ ಪ್ರಕರಣದ ನಂತರ ನಿರ್ದಿಷ್ಟವಾಗಿ ಎಲ್ಲಾ ಭಯೋತ್ಪಾದನೆಯ ಪ್ರಕರಣಗಳ ತನಿಖೆಗಾಗಿ ಸ್ಥಾಪಿಸಲ್ಪಟ್ಟಿರುವ ಒಂದು ವಿಶೇಷ ಸಂಸ್ಥೆ. ಪ್ರಸಕ್ತವಾಗಿ ಅದು ಕೇಸರಿ ಭಯೋತ್ಪಾದಕರು ನಡೆಸಿದುದೆನ್ನಲಾದ ಕನಿಷ್ಠ 16 ಪ್ರಕರಣಗಳನ್ನು ತನಿಖೆ ಮಾಡುತ್ತಿದೆ. ಸದರಿ ತನಿಖೆಗಳ ಗತಿ ಹೇಳಿಕೊಳ್ಳುವಷ್ಟು ಚುರುಕಾಗಿಲ್ಲದಿದ್ದರೂ ತಕ್ಕ ಮಟ್ಟಿನ ಪ್ರಗತಿಯಾಗಿದ್ದುದರಲ್ಲಿ ಸಂಶಯವಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಕೇಸರಿ ಉಗ್ರಗಾಮಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ಕಾರ್ಯವೈಖರಿಯಲ್ಲಿ ಕೆಲವು ಅನಿರೀಕ್ಷಿತ ಹಾಗೂ ಅನಪೇಕ್ಷಣೀಯ ಬದಲಾವಣೆಗಳು ಕಂಡುಬರುತ್ತಿವೆ. ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಸರಕಾರಿ ವಕೀಲೆ ಆಗಿರುವ ರೋಹಿಣಿ ಸಾಲಿಯಾನ್ ಇತ್ತೀಚೆಗೆ ಒಂದು ಸುದ್ದಿ ಬಾಂಬ್ ಸ್ಫೋಟಿಸಿದ್ದಾರೆ. ಈ ಪ್ರಕರಣವನ್ನು ನಿಧಾನಗತಿಯಲ್ಲಿ ನಡೆಸುವಂತೆ ಎನ್‌ಐಎ ತನ್ನ ಮೇಲೆ ಒತ್ತಡ ಹೇರುತ್ತಿದೆ ಎಂದು ಆರೋಪಿಸಿರುವ ಆಕೆ ಈ ಕುರಿತು ತನ್ನ ಬಳಿ ಸಾಕಷ್ಟು ಪುರಾವೆಗಳಿವೆ ಎಂದಿದ್ದಾರೆ. ಇನ್ನು ಅಜ್ಮೀರ ದರ್ಗಾ ಸ್ಫೋಟ ಪ್ರಕರಣದ ಸಾಕ್ಷಿಗಳು ಒಬ್ಬೊಬ್ಬರಾಗಿ ತಿರುಗಿಬೀಳುತ್ತಿದ್ದಾರೆ. ಹೈದರಾಬಾದಿನ ಮಕ್ಕಾ ಮಸೀದಿ ಮತ್ತು ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟ ಪ್ರಕರಣಗಳಲ್ಲಿ ಓರ್ವ ಆರೋಪಿಯಾಗಿದ್ದ ಸುನೀಲ್ ಜೋಶಿಯ ನಿಗೂಢ ಕೊಲೆ ಪ್ರಕರಣವನ್ನು ತನ್ನಲ್ಲಿಗೆ ವರ್ಗಾಯಿಸಿಕೊಳ್ಳಲು ತಿಂಗಳುಗಟ್ಟಲೆ ಶ್ರಮಪಟ್ಟ ಎನ್‌ಐಎ ಇದೀಗ ಇದ್ದಕ್ಕಿದ್ದಂತೆ ಅದನ್ನು ಮಧ್ಯಪ್ರದೇಶದ ಪೊಲೀಸರಿಗೇ ಹಿಂದಿರುಗಿಸಿದೆ. ಮೋದಸಾ ಸ್ಫೋಟ ಪ್ರಕರಣವನ್ನು ಸಾಕಷ್ಟು ಪುರಾವೆಗಳಿಲ್ಲ ಎಂಬ ಕಾರಣ ನೀಡಿ ಮುಕ್ತಾಯಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಸಂಜೋತಾ ಎಕ್ಸ್‌ಪ್ರೆಸ್, ಮಕ್ಕಾ ಮಸೀದಿ, ಪರ್ಭಣಿ, ಜಾಲ್ನಾ ಮೊದಲಾದ ಪ್ರಕರಣಗಳೂ ಇದೇ ಹಾದಿ ಹಿಡಿದರೆ ಅಚ್ಚರಿಪಡಬೇಕಿಲ್ಲ, ಯಾಕೆಂದರೆ ಮೋದಿ ಸರ್ಕಾರದ ಹಿರಿಯ ಮಂತ್ರಿಮಹೋದಯರೊಬ್ಬರು 'ಭಾರತದಲ್ಲಿ ಹಿಂದೂ ಭಯೋತ್ಪಾದನೆ ಎಂಬುದು ಇಲ್ಲವೆ ಇಲ್ಲ'ವೆಂದು ಈಗಾಗಲೆ ಘೋಷಿಸುವ ಮೂಲಕ ಒಂದು ಸಣ್ಣ ಅರ್ಥಗರ್ಭಿತ ಸುಳಿವನ್ನು ಕೊಟ್ಟಿದ್ದಾರೆ.

[illegible] 27ರ [illegible] ಸುಭಾಷ್ ಗಾಡೆಯವರ ಜುಲೈ 15ರ ಲೇಖನ

ಲಿಯೊ ಟಾಲ್‌ಸ್ಟಾಯ್ ಅವರ ಈ ಕತೆ ಗಾಂಧೀಜಿಯವರ ಮೇಲೆ ತುಂಬ ಪ್ರಭಾವ ಬೀರಿತ್ತು. ಅವರು ಅದನ್ನು ಗುಜರಾತಿಗೆ ಅನುವಾದಿಸಿದ್ದರು. ಅದರ ಹಲವಾರು ಪ್ರತಿಗಳನ್ನು ಓದುಗರಿಗೆ ವಿತರಿಸಿದ್ದರು. ಗಾಂಧೀಜಿಯವರ ಅಪರಿಗ್ರಹ ಸಿದ್ಧಾಂತ ಈ ಕತೆಯಲ್ಲಿ ತುಂಬ ಪರಿಣಾಮಕಾರಿಯಾಗಿ ಪ್ರತಿಪಾದಿಸಲ್ಪಟ್ಟಿತ್ತು. ಸ್ವಾತಂತ್ರ್ಯ ಹೋರಾಟಗಾರ, ಪ್ರಸಿದ್ಧ ಗಾಂಧಿವಾದಿ ಹಾಗೂ ಹಿಂದಿಯ ವಿಖ್ಯಾತ ಸಾಹಿತಿಯೂ ಆದ ಜೈನೇಂದ್ರಕುಮಾರ ಈ ಕತೆಯ ಭಾವಾನುವಾದ ಮಾಡಿದ್ದರು. ಅವರು ಕತೆಯ ಪಾತ್ರಗಳನ್ನು ಬದಲಾಯಿಸಿದ್ದಾರೆ. ರಷ್ಯಾದ ಪರಿಸರದ ಬದಲಿಗೆ ಭಾರತೀಯ ಪರಿಸರದ ನಿರ್ಮಾಣ ಮಾಡಿದ್ದಾರೆ. ಈ ಕತೆಯನ್ನು ಕನ್ನಡಕ್ಕೆ ಹಿಂದಿಯಿಂದ ಅನುವಾದಿಸಲಾಗಿದೆ.



ಮನುಷ್ಯನಿಗೆ ಅದೆಷ್ಟು ಭೂಮಿ ಬೇಕು?

ಕತೆ

ಇಬ್ಬರು ಸೋದರಿಯರಿದ್ದರು. ದೊಡ್ಡವಳ ವಿವಾಹವು ಪಟ್ಟಣದ ಒಬ್ಬ ವ್ಯಾಪಾರಿಯೊಂದಿಗೆ ಆಗಿತ್ತು, ಹಳ್ಳಿಯ ರೈತನೊಂದಿಗೆ ಚಿಕ್ಕವಳ ಮದುವೆಯಾಗಿತ್ತು.

ಒಂದು ದಿನ ತಂಗಿಯ ಮನೆಗೆ ಅಕ್ಕನ ಆಗಮನವಾಯಿತು. ಉಭಯ ಕುಶಲೋಪರಿಯ ನಂತರ ಇಬ್ಬರೂ ಮಾತಿಗೆ ತೊಡಗಿದರು. ಅಕ್ಕ ತನ್ನ ಪಟ್ಟಣದ ಜೀವನವನ್ನು ಬಣ್ಣಿಸತೊಡಗಿದಳು. "ನೋಡು, ನಾವು ಅದೆಷ್ಟು ಆರಾಮದಿಂದ ಬದುಕುತ್ತಿದ್ದೇವೆ. ಫ್ಯಾಶನ್ ಬಟ್ಟೆ, ವೈಭವದ ವಸ್ತುಗಳು, ಸ್ವಾದಿಷ್ಟ ಭೋಜನ-ಉಪಾಹಾರ, ನಾಟಕ-ಸಿನಿಮಾ, ಉದ್ಯಾನ-ಉಪವನ..."

ಅವಳ ಮಾತು ತಂಗಿಗೆ ನೋವುಂಟುಮಾಡಿತು. ತನ್ನ ಸರದಿ ಬಂದೊಡನೆ ಅವಳು ವ್ಯಾಪಾರಿಯ ಜೀವನ ಬಹಳ ಹೇಯವಾದುದು ಎಂದು ಹೇಳಿ ರೈತನ ಪಕ್ಷ ವಹಿಸಿದಳು. "ನಾನೇನು ನನ್ನ ಬದುಕನ್ನು ನಿನ್ನ ಬದುಕಿಗೆ ಬದಲಾಗಿ ಎಂದೂ ವಿನಿಮಯ ಮಾಡಿಕೊಳ್ಳಲಾರೆ. ನಮ್ಮದು ಸರಳ ಹಾಗೂ ವರ್ಣಮಯ ಜೀವನವಲ್ಲವಾದರೇನಂತೆ ನಾವು ಚಿಂತೆಗೀಡಾಗುವುದಿಲ್ಲ, ನೀವು ಶೋಕಿ ಮಾಡುವವರು. ನಿಮ್ಮ ಬಳಿ ಸಾಕಷ್ಟು ದುಡ್ಡು ಇರುವುದು. ಆದರೆ ಇದೆಲ್ಲ ಒಂದು ದಿನ ಇಲ್ಲವಾಗಬಹುದು, ಅಕ್ಕ. ಗಾದೆ ಮಾತು ಇದೆಯಲ್ಲ, ಲಾಭ-ಹಾನಿ ಅವಳಿ-ಜವಳಿ ಇದ್ದಂತೆ. ಇಂದು ಶ್ರೀಮಂತರಾಗಿದ್ದವರು ನಾಳೆ ಒಂದು ತುತ್ತು ಕೂಳಿಗಾಗಿ ಪರದಾಡಬಹುದು. ಆದರೆ ನಮ್ಮ ಹಳ್ಳಿಯ ಜೀವನದಲ್ಲಿ ಇಂತಹ ಅಪಾಯವಿಲ್ಲ, ರೈತಾಪಿ ಬದುಕು ವರ್ಣಮಯ ಹಾಗೂ ಸಮೃದ್ಧವಾಗಿರಲಾರದೆನಿಸಿದರೂ ಆಯುಷ್ಯ ದೀರ್ಘವಾಗಿರುವುದು, ಪರಿಶ್ರಮದಿಂದಾಗಿ ಆರೋಗ್ಯವೂ ಸುಧಾರಿಸುವುದು. ನಾವು ಸ್ಥಿತಿವಂತರಲ್ಲವಾದರೇನಂತೆ ನಮಗೆ ತಿನ್ನುವುದಕ್ಕೆ ಕೊರತೆಯೇನೂ ಆಗದು."

ಅಕ್ಕ ಕುಟುಕಿದಳು. "ಸಾಕು ಮಾಡು. ದನ-ಕರು ಹಾಗೂ ನಾಯಿಯೂ ಹೊಟ್ಟೆ ಹೊರೆದುಕೊಳ್ಳುತ್ತವೆ. ಆದರೆ ಅದೂ ಜೀವನವೆ? ಆದರೆ ನಿನಗೆ ಜೀವನದಲ್ಲಿ ನೆಮ್ಮದಿ, ಸಂಸ್ಕಾರ ಹಾಗೂ ಸಂತೋಷವೆಂದರೆ ಏನು ಎನ್ನುವುದು ಗೊತ್ತೇ ಇಲ್ಲ, ನಿನ್ನ ಗಂಡ ಎಷ್ಟೇ ದುಡಿದರೂ ನೀವು ಯಾವ ಸ್ಥಿತಿಯಲ್ಲಿ ಬದುಕುವಿರೋ ಅದೇ ಸ್ಥಿತಿಯಲ್ಲಿ ಸತ್ತು ಹೋಗುವಿರಿ. ನೋಡಿದಲ್ಲೆಲ್ಲ ಸೆಗಣಿ, ಕಸ, ಧೂಳು. ನಿನ್ನ ಮಕ್ಕಳ ಹಣೆಬರಹದಲ್ಲಿ ಇದನ್ನೇ ಬರೆಯಲಾಗಿದೆ."

ತಂಗಿ ಅಂದಳು: "ಆದರೇನಂತೆ? ನಮ್ಮ ಕೆಲಸ ಸ್ವಚ್ಛವಲ್ಲ, ಆದರೆ ನಾವು ಯಾರೆದುರೂ ಮಣಿಯುವ ಅವಶ್ಯಕತೆಯಿಲ್ಲ, ಪಟ್ಟಣದಲ್ಲಿ ನೀವು ಸಾವಿರಾರು ಆಮಿಷಗಳಿಗೆ ಬಲಿಯಾಗುವಿರಿ. ಇಂದು ಅಂತಹ ಆಮಿಷಗಳಿಂದ ದೂರವಿರಬಹುದು. ನಾಳೆ ಏನಾಗುವುದೋ ಹೇಳಲಾಗದು. ನಾಳೆ ನಿನ್ನ ಗಂಡನನ್ನು ಪಾಪದ ಲೋಭ, ಜೂಜು, ಮದ್ಯಪಾನ ಮತ್ತಿತರ ಕುಕೃತ್ಯಗಳಲ್ಲಿ ಸಿಲುಕಿಸಬಹುದು. ಆಗ ಕ್ಷಣದಲ್ಲಿ ಸರ್ವನಾಶವಾಗಬಹುದು. ಇಂತಹ ಘಟನೆಗಳು ಆಗಾಗ ನಡೆಯುವುದಿಲ್ಲವೆ?"

ನಡುಮನೆಯಲ್ಲಿ ಒರಗಿದ್ದ ಮನೆಯ ಮಾಲೀಕ ದೀನಾ ಮಹಿಳೆಯರ ಮಾತು ಕೇಳಿಸಿಕೊಳ್ಳುತ್ತಿದ್ದ. ಅವನಿಗೆ ಅದು ಸರಿ ಎನಿಸಿತು. ಬಾಲ್ಯದಿಂದಲೇ ನಾವು ಭೂತಾಯಿಯ ಸೇವೆಯಲ್ಲಿ ಅದೆಷ್ಟು ತೊಡಗಿರುತ್ತೇವೆ ಎಂದರೆ ಯಾವುದೇ ವ್ಯರ್ಥ ವಿಚಾರ ನಮ್ಮ ಮನಸ್ಸಿನಲ್ಲಿ ನೆಲೆಯೂರಲಾರದು. ಆಯಿತು ನಮ್ಮ ಸಮಸ್ಯೆಯೆಂದರೆ ನಮ್ಮ ಬಳಿ ಸಾಕಷ್ಟು ಭೂಮಿ ಇಲ್ಲ, ಸಾಕಷ್ಟು ಭೂಮಿ ಇದ್ದರೆ ನಮಗೆ ಯಾರ ಪರಿವೆಯೂ ಇರುವುದಿಲ್ಲ – ಸೈತಾನನಿಗೂ ಹೆದರಬೇಕಾಗಿಲ್ಲ.

ಹೌದು ಮಹಾಶಯ, ಇದೇ ತೀರ್ಮಾನ ಸರಿ ಎಂದು ಸೈತಾನ್ ಮನಸ್ಸಿನಲ್ಲೇ ಅಂದುಕೊಂಡ. ನಾನು ನಿಮಗೆ ಸಾಕಷ್ಟು ಭೂಮಿ ಕೊಡುವೆ. ಅದರಿಂದಲೇ ನೀನು ನನ್ನ ಹಿಡಿತಕ್ಕೆ ಸಿಲುಕುವೆಯೋ ಇಲ್ಲವೋ ನೋಡಬೇಕಿದೆ.

ಹಳ್ಳಿಗೆ ಸಮೀಪದಲ್ಲೇ ಜಮೀನ್ದಾರ ಮಹಿಳೆಯ ವಾಡೆ ಇತ್ತು, ಅವಳು ಸುಮಾರು ಮುನ್ನೂರು ಎಕರೆ ಜಮೀನಿನ ಮಾಲೀಕಳಾಗಿದ್ದಳು. ತನ್ನ ಗೇಣಿದಾರರೊಂದಿಗೆ ಅವಳ ಒಳ್ಳೆಯ ಸಂಬಂಧವಿತ್ತು, ಅವಳು ಒಬ್ಬ ವ್ಯವಸ್ಥಾಪಕನನ್ನು ಇರಿಸಿಕೊಂಡಳು. ಅವನು ಮೊದಲು ಸೇನೆಯಲ್ಲಿದ್ದ. ಅವನು ಬಂದವನೇ ಜನರಿಗೆ ದಂಡ ವಿಧಿಸತೊಡಗಿದ.

ದೀನಾನ ಅವಸ್ಥೆ ಎಂತಹದಾಗಿತ್ತೆಂದರೆ ಅವನು ನಿರಂತರ ದುಡಿಯುತ್ತಿದ್ದ. ಆದರೆ ಅವನ ಎತ್ತು ಜಮೀನ್ದಾರಿ ಗೋಮಾಳಕ್ಕೆ ಹೋಗುತ್ತಿತ್ತು ಇಲ್ಲವೆ ಹಸು ತೋಟದಲ್ಲಿ ಮೇಯುತ್ತಿತ್ತು, ಅದೂ ಇಲ್ಲವಾದರೆ ಕರು ಇಲ್ಲವೆ ಹೋರಿ ಜಮೀನ್ದಾರ್ತಿಯ ಬಣಿವೆಗೆ ಬಾಯಿ ಹಾಕಿರುತ್ತಿತ್ತು, ಪ್ರತಿ ಸಲ ದೀನಾ ದಂಡ ಕಟ್ಟಬೇಕಾಗುತ್ತಿತ್ತು, ದಂಡ ಕಟ್ಟುತ್ತಿದ್ದ, ಆದರೆ ಒಲ್ಲದ ಮನಸ್ಸಿನಿಂದ. ಅವನು ವಟವಟ ಅನ್ನುತ್ತಾ ಸಿಟ್ಟಿನಲ್ಲೇ ಮನೆಗೆ ಬರುತ್ತಿದ್ದ, ತನ್ನ ಸಿಟ್ಟನ್ನೆಲ್ಲ ಮನೆಯಲ್ಲಿ ಇಳಿಸುತ್ತಿದ್ದ. ಇಡೀ ವರ್ಷ ವ್ಯವಸ್ಥಾಪಕನಿಂದಾಗಿ ಸಾಕಷ್ಟು ಕಷ್ಟಕ್ಕೆ ಗುರಿಯಾದ.

ಮುಂದೆ ಒಂದು ದಿನ ಚಳಿಗಾಲದಲ್ಲಿ ಜಮೀನ್ದಾರ್ತಿ ತನ್ನ ಭೂಮಿ ಮಾರಲಿದ್ದಾಳೆ ಹಾಗೂ ಮುನ್ಶಿ ಇಕ್ರಾಮಅಲಿ ಜೊತೆ ಮಾರಾಟ ಕುರಿತಂತೆ ಮಾತುಕತೆ ನಡೆಯುತ್ತಿದೆಯೆಂದು ಹಳ್ಳಿಯಲ್ಲಿ ಸುದ್ದಿ ಹಬ್ಬಿತು. ಸುದ್ದಿ ತಿಳಿದ ರೈತರು ಗಾಬರಿಗೊಂಡರು. ಭೂಮಿ ಮುನ್ಶೀಜಿ ಒಡೆತನಕ್ಕೆ ಬಂದರೆ ಅವನು ಜಮೀನ್ದಾರ್ತಿಯ ವ್ಯವಸ್ಥಾಪಕನಿಗಿಂತ ಹೆಚ್ಚು ಕ್ರೂರಿಯಾಗಬಲ್ಲ, ದಂಡ ಹೆಚ್ಚಿಸಬಲ್ಲ ಎಂದು ಅವರು ಯೋಚಿಸತೊಡಗಿದರು. ತಮ್ಮ ಜೀವನ ನಿರ್ವಹಣೆಯಂತೂ ಇದೇ ಜಮೀನನ್ನು ಅವಲಂಬಿಸಿದೆಯೆಂದು ಅವರು ಆತಂಕಕ್ಕೀಡಾದರು.

ಹೀಗೆ ಯೋಚಿಸಿದ ರೈತರು ಮಾಲೀಕಳ ಬಳಿ ಹೋದರು. ಮುನ್ಶೀಜಿಗೆ ಭೂಮಿ ಮಾರಬೇಡಿರೆಂದೂ ತಾವೇ ಅವನಿಗಿಂತ ಹೆಚ್ಚಿನ ಬೆಲೆಗೆ ಕೊಂಡುಕೊಳ್ಳುವುದಾಗಿಯೂ ವಿನಂತಿಸಿಕೊಂಡರು. ಒಡತಿ ಒಪ್ಪಿದಳು.

ಆಗ ರೈತರು ಗ್ರಾಮ ಪಂಚಾಯತಿ ಪರವಾಗಿ ಎಲ್ಲ ಭೂಮಿ ಸಾಮೂಹಿಕ ಒಡೆತನದಲ್ಲಿರಬೇಕು; ಆಗ ಭೂಮಿ ಎಲ್ಲರದಾಗಿರುತ್ತದೆ ಎನ್ನುವ ಉದ್ದೇಶದಿಂದ ಪ್ರಯತ್ನಿಸಿದರು. ಈ ಬಗ್ಗೆ ಚರ್ಚಿಸಲು ಪಂಚಾಯತಿ ಎರಡು ಸಲ ಸಭೆ ಸೇರಿತು. ಆದರೆ ಯಾವ ತೀರ್ಮಾನವನ್ನೂ ಕೈಗೊಳ್ಳಲಾಗಲಿಲ್ಲ, ವಾಸ್ತವದಲ್ಲಿ ಇದೆಲ್ಲ ಸೈತಾನ್‌ನ ಕುತಂತ್ರವಾಗಿತ್ತು, ಅವನು ಅವರಲ್ಲಿ ಒಡಕುಂಟು ಮಾಡಿದ್ದ. ಹಾಗಾಗಿ ಅವರೆಲ್ಲ ಒಗ್ಗೂಡಿ ಒಮ್ಮತಕ್ಕೆ ಬರಲಾಗಲಿಲ್ಲ, ಅವರು ಪ್ರತ್ಯೇಕವಾಗಿ ಭೂಮಿ ಪಡೆದುಕೊಳ್ಳಬೇಕೆಂದು ತೀರ್ಮಾನವಾಯಿತು. ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಭೂಮಿ ಪಡೆದುಕೊಳ್ಳಬೇಕೆಂದಾಯಿತು. ಇದಕ್ಕೂ ಜಮೀನ್ದಾರ್ತಿ ಮೊದಲಿನಂತೇ ಒಪ್ಪಿದಳು.

ತನ್ನ ನೆರೆಮನೆಯವ ಐವತ್ತು ಎಕರೆ ಒಂದೇ ಡಾಗು ತೆಗೆದುಕೊಳ್ಳಲಿದ್ದಾನೆ ಹಾಗೂ ಅರ್ಧ ಹಣ ಈಗಲೇ ನಗದು ಕೊಡಲು ಮತ್ತು ಬಾಕಿ ಹಣವನ್ನು ಒಂದು ವರ್ಷದ ನಂತರ ಕೊಡಲಿದ್ದು ಜಮೀನ್ದಾರ್ತಿ ಇದಕ್ಕೆ ಒಪ್ಪಿಗೆ ನೀಡಿರುವಳೆಂದು ದೀನಾಗೆ ತಿಳಿದುಬಂತು.

ಬೇರೆಯವರೂ 'ಭೂಮಿ' ಖರೀದಿಸುತ್ತಿದ್ದಾರೆ, ನಾವೂ ಇಪ್ಪತ್ತು ಇಲ್ಲವೆ ಅದಕ್ಕೂ ಹೆಚ್ಚು ಭೂಮಿ ಖರೀದಿಸಬೇಕು; ಈಗಾಗಲೇ ಜೀವನ ದುರ್ಭರವಾಗುತ್ತಿದೆ; ಜಮೀನ್ದಾರ್ತಿಯ ವ್ಯವಸ್ಥಾಪಕ ದಂಡದ ಮೇಲೆ ದಂಡ ವಿಧಿಸಿ ನಮ್ಮ ಬದುಕನ್ನೇ ಹಾಳು ಮಾಡುವನು ಎಂದು ದೀನಾ ತನ್ನ ಹೆಂಡತಿಗೆ ಹೇಳಿದ.

ಯಾವ ರೀತಿ ಭೂಮಿ ಖರೀದಿಸಬಹುದೆಂದು ಅವರಿಬ್ಬರೂ ಸೇರಿಕೊಂಡು ಯೋಚಿಸಿದರು. ನೂರು ರೂಪಾಯಿ ಉಳಿಸಿಟ್ಟಿದ್ದರು. ವಯಸ್ಸಿಗೆ ಬಂದ ಒಂದು ಹೋರಿಯನ್ನು ಮಾರಿದರು. ಒಂದಷ್ಟು ಒಡವೆಯನ್ನು ಒತ್ತೆ ಇಟ್ಟರು. ತಮ್ಮ ಹಿರಿಯ ಮಗನನ್ನು ಕೆಲಸಕ್ಕಿಟ್ಟು ಒಂದಷ್ಟು ಹಣ ಮುಂಗಡ ಪಡೆದರು. ಉಳಿದದ್ದನ್ನು ಅವನು ತನ್ನ ಮೈದುನನಿಂದ ಸಾಲವಾಗಿ ಪಡೆದನು. ಹೀಗೆ ಅವರು ಅರ್ಧದಷ್ಟು ಹಣದ ವ್ಯವಸ್ಥೆ ಮಾಡಿದರು.

ಇಷ್ಟು ಮಾಡಿ ದೀನಾ ನಲ್ವತ್ತು ಎಕರೆ ಜಮೀನಿನ ಡಾಗನ್ನು ಆಯ್ಕೆ ಮಾಡಿಕೊಂಡ. ಅದರ ಒಂದು ಭಾಗದಲ್ಲಿ ಮರಗಳು ಸಹ ಬೆಳೆದು ನಿಂತಿದ್ದವು. ಒಡತಿಯ ಬಳಿ ಅದರ ಖರೀದಿ ವಿಷಯವಾಗಿ ಮಾತನಾಡಲು ಹೋದ. ವ್ಯವಹಾರ ಮುಗಿಯಿತು. ಅಲ್ಲೇ ನಗದು ಹಣ ಸಂದಾಯ ಮಾಡಿದ. ನಂತರ ಪಟ್ಟಣಕ್ಕೆ ಹೋಗಿ ಕಾಗದ-ಪತ್ರ ಮಾಡಿಸಿದ.

ಈಗ ದೀನಾ ಸ್ವಂತದ ಭೂಮಿ ಹೊಂದಿದ. ಬೀಜ ಖರೀದಿಸಿದ. ತನ್ನ ಜಮೀನಿನಲ್ಲಿ ಬಿತ್ತನೆ ಮಾಡಿದ. ಹೀಗೆ ಅವನು ಈಗ ಜಮೀನ್ದಾರನಾದ.

ಈ ರೀತಿ ದೀನಾ ಸಾಕಷ್ಟು ಸ್ಥಿತಿವಂತನಾದ. ಅವನ ಸಂತಸಕ್ಕೆ ಪಾರವೇ ಇರಲಿಲ್ಲ, ಆದರೆ ನೆರೆಹೊರೆಯವರ ಕಡೆಯಿಂದ ನೆಮ್ಮದಿ ಸಿಗಬೇಕಿತ್ತು, ಅಷ್ಟೇ. ಎಷ್ಟೋ ಸಲ ಅವರ ದನಕರು ಅವನ ಹೊಲಕ್ಕೆ ನುಗ್ಗಿ ಮೇಯತೊಡಗುತ್ತಿದ್ದವು. ಅವನು ಬಹಳ ವಿನಮ್ರನಾಗಿ ತಿಳಿಹೇಳುತ್ತಿದ್ದ, ಆದರೆ ಅದರ ಪರಿಣಾಮವೇನೂ ಆಗಲಿಲ್ಲ, ನಂತರ ಬೇರೆಲ್ಲ ಏನೇ ಇರಲಿ ದನಗಾಹಿ ಹುಡುಗರು ಊರ ಹಸುಗಳನ್ನು ಹಾಡುಹಗಲೇ ಅವನ ಹೊಲದಲ್ಲಿ ನುಗ್ಗಿಸುತ್ತಿದ್ದರು. ರಾತ್ರಿ ಎತ್ತುಗಳು ಹೊಲ ಹಾಳು ಮಾಡುತ್ತಿದ್ದವು. ದೀನಾ ಪ್ರತಿ ಸಲ ಅವುಗಳನ್ನು ಹೊಡೆದೋಡಿಸುತ್ತಿದ್ದ. ಅವುಗಳ ಮಾಲೀಕರನ್ನು ಕ್ಷಮಿಸಿ ಬಿಡುತ್ತಿದ್ದ ಒಂದು ವರ್ಷದವರೆಗೆ ಅವನು ಸಹಿಸಿಕೊಂಡಿದ್ದ, ಯಾರ ವಿರುದ್ಧವೂ ಕ್ರಮ ಕೈಗೊಳ್ಳಲಿಲ್ಲ, ಎಷ್ಟು ಕಾಲ ಅಂತಾ ಸುಮ್ಮನಿರುವುದು? ಅವನ ಸಹನೆಯ ಕಟ್ಟೆ ಒಡೆಯಿತು. ಅವನು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ. ಸಮಸ್ಯೆಯ ಮೂಲಕಾರಣ ಅವನನ್ನು ಉದ್ದೇಶಪೂರ್ವಕ ಕಾಡಬೇಕೆನ್ನುವುದಾಗಿರದೆ ಅವರ ಬಳಿ ಭೂಮಿ ಇದ್ದಿರಲಿಲ್ಲ ಎನ್ನುವುದು ಅವನಿಗೆ ಗೊತ್ತಿತ್ತು, ಆದರೆ ಇದೇ ರೀತಿ ಸೌಮ್ಯವಾಗಿ ಇದ್ದರೆ ಈ ಜನರಿಗೆ ಮದವೇರುತ್ತದೆ ಮತ್ತು ನನ್ನ ಬಳಿ ಇದ್ದುದನ್ನೆಲ್ಲ ಹಾಳು ಮಾಡಿ ಬಿಡುವರೆಂದು ಅವನು ಭಾವಿಸಿದ. ಅವರಿಗೆ ಒಂದು ಪಾಠ ಕಲಿಸಲೇಬೇಕು ಎಂದು ತೀರ್ಮಾನಿಸಿದ.

ಅವನು ದೃಢಸಂಕಲ್ಪ ಮಾಡಿದ. ಅವನು ಒಂ[...] ಪಾಠ ಕಲಿಸಿದ. ಇನ್ನೊಂದು ಪಾಠ ಕಲಿಸಿದ. [...] ಪರಿಣಾಮವೇನಾಯಿತೆಂದರೆ ಒಬ್ಬಿಬ್ಬರು ರೈತರಿಗೆ ದ[...] ವಿಧಿಸಲಾಯಿತು. ಇದರಿಂದ ಅಕ್ಕಪಕ್ಕದ ಜನರು ದೀ[...] ವಿರುದ್ಧ ಹಲ್ಲು ಮಸೆಯತೊಡಗಿದರು. ಆಮೇಲಂತೂ ಉದ್ದೇಶಪೂರ್ವಕವಾಗಿ ಅವನನ್ನು ಕಾಡಿಸಲೆಂದೇ ತ[...] ದನಕರುಗಳನ್ನು ಅವನ ಹೊಲಕ್ಕೆ ನುಗ್ಗಿಸತೊಡಗಿದ[...] ಒಬ್ಬ ವ್ಯಕ್ತಿ ಬಂದ. ತನ್ನ ಮನೆಯಲ್ಲಿ ಉರುವ[...] ಇದ್ದಿರಲಿಲ್ಲವೆಂದು ಅವನ ಹೊಲದಲ್ಲಿದ್ದ ಏಳು ಶಿ[...] ಮರಗಳನ್ನು ಕಡಿದು ಹಾಕಿದ. ದೀನಾ ಬೆಳಗ್ಗೆ ಬಂ[...] ಕಡಿದು ಹಾಕಿದ್ದ ಮರಗಳನ್ನು ನೋಡಿದ. ಅವು ನೆ[...] ಮೇಲೆ ಒರಗಿದ್ದವು. ಅವುಗಳ ಸ್ಥಳದಲ್ಲಿ ನಿಂತಿದ್ದ ಬೊಡ್ಡೆ[...] ದೀನಾನನ್ನು ಅಣಕಿಸುತ್ತಿವೆಯೇನೋ ಎನಿಸಿತು. ಇದನ್ನು ನೋಡಿದ ಅವನಿಗೆ ಪಿತ್ಥ ನೆತ್ತಿಗೇರಿತು.

ಆ ದುಷ್ಟ ಅಲ್ಲೊಂದು ಇಲ್ಲೊಂದು ಮರ ಕಡಿದಿ[...] ಸುಮ್ಮನಿರಬಹುದಿತ್ತು. ಆದರೆ ಆ ಹಾಳಾದವ ಸಾಲ[...] ಎಲ್ಲ ಮರಗಳನ್ನು ಕಡಿದು ಹಾಕಿ ತೋಟವ[...] ಹಾಳುಗೆಡವಿಬಿಟ್ಟಿದ್ದ. ಇದರ ಸುಳಿವು ಸಿಕ್ಕಿದ್ದರೆ ಒಂ[...] ಕೈ ನೋಡಿಯೇ ಬಿಡುತ್ತಿದ್ದ. ಈ ದುಷ್ಕೃತ್ಯ ಯಾ[...] ಎಸಗಿರಬಹುದೆಂದು ಅವನು ತಲೆ ಕೆರೆದುಕೊಂಡ. ಆದ[...] ಇರಲಿ ಇದು ಧುನ್ನೂನ ಕೆಲಸವೆಂದು ತೀರ್ಮಾನಿ[...] ಬೇರೆ ಯಾರೂ ಹೀಗೆ ಮಾಡಲಾರರು. ಹೀ[...] ಯೋಚಿಸುತ್ತಾ ಏನಾದರೂ ಸಾಕ್ಷ್ಯ ಸಿಗಬಹುದೆಂದು ಅ[...] ಧುನ್ನೂನ ಬಳಿ ಹೋದ. ಆದರೆ ಅಲ್ಲಿ ಕಳುವಿನ ಯ[...] ಸಾಕ್ಷ್ಯವೂ ಸಿಗಲಿಲ್ಲ, ಇಬ್ಬರ ನಡುವೆ ವಾಗ್ವಾದ ನಡೆಯಿ[...] ಮಾತಿನ ಚಕಮಕಿಯ ಹೊರತು ಇನ್ನೇನೂ ಆಗ[...] ಆದಾಗ್ಯೂ ಧುನ್ನೂನೇ ಇದನ್ನೆಲ್ಲ ಮಾಡಿದ್ದು ಎಂದು ಅವ[...] ಖಾತ್ರಿ ಆಯಿತು. ಹೋದವನೇ ಫಿರ್ಯಾದಿ ಸಲ್ಲಿಸಿ[...] ಧುನ್ನೂನಿಗೆ ಕರೆ ಕಳುಹಿಸಲಾಯಿತು. ವಿಚಾರಣೆ ನಡೆಯಿ[...] ಒಂದು ನ್ಯಾಯಾಲಯದಿಂದ ಇನ್ನೊಂದು ನ್ಯಾಯಾಲ[...] . ಧುನ್ನೂ ಕೊನೆಗೂ ಬಿಡುಗಡೆಯಾದ. ಕಾರಣ [...] ಪುರಾವೆಗಳೇ ಇದ್ದಿರಲಿಲ್ಲ, ದೀನಾ ಇದರಿಂದಾಗಿ ಇನ್[...] ಕೆರಳಿದ. ಮ್ಯಾಜಿಸ್ಟ್ರೇಟ್ ಮೇಲೆ ಕೆಂಡ ಕಾರಿದ.

ಹೀಗೆ ನೆರೆಹೊರೆಯವರು ಹಾಗೂ ಅಧಿಕಾರಿ[...] ಮತ್ತು ದೀನಾ ನಡುವೆ ಮನಸ್ತಾಪ ಹೆಚ್ಚಿತು. ಅ[...] ಎಲ್ಲಿಯವರೆಗೆ ಎಂದರೆ ಅವನ ಮನೆಗೆ ಬೆಂಕಿ ಹಚ್[...] ಮಾತೂ ಕೇಳಿಬಂತು. ವಾಸ್ತವದಲ್ಲಿ ದೀನಾ ಬಳಿ ಸಾಕ[...] ಜಮೀನಿತ್ತು. ಈಗೀಗ ಜಮೀನ್ದಾರರಲ್ಲಿ ಅವ[...] ಒಬ್ಬನೆನಿಸಿಕೊಂಡಿದ್ದ. ಆದರೆ ಗ್ರಾಮದಲ್ಲಿಯಾ[...] ನೆರೆಹೊರೆಯವರಲ್ಲಾಗಲಿ ಅವನಿಗೆ ಮೊದಲಿನಂತಹ ಗೌ[...] ಇದ್ದಿರಲಿಲ್ಲ.

ಈ ಮಧ್ಯ ಕೆಲವರು ಊರು ಬಿಟ್ಟು ಎ[...] ಹೊರಟಿದ್ದಾರೆನ್ನುವ ವದಂತಿ ಹರಡಿತ್ತು.

ಆಯಿತು ನಾನಂತೂ ನನ್ನ ಭೂಮಿ ಬಿಟ್ಟು ಇರ[...] ಆದರೆ ಇನ್ನೂ ಕೆಲವರು ಊರು ಬಿಟ್ಟು ಹೋ[...] ಗ್ರಾಮದಲ್ಲಿ ಜನದಟ್ಟಣೆ ಕಡಿಮೆಯಾಗುತ್ತದೆ. ನಾನೇ [...] ಭೂಮಿ ಖರೀದಿಸಿ ಬಿಡುವೆ..ಆಗ ಇನ್ನೂ ಒಳ್ಳೆಯ[...] ಇದೀಗ ಜಮೀನಿನ ಅಭಾವವೆನಿಸುತ್ತಿದೆ ಎಂದೆಲ್ಲ ದೀ[...] ಯೋಚಿಸತೊಡಗಿದ.

ಒಂದು ದಿನ ದೀನಾ ಪಡಸಾಲೆಯಲ್ಲಿ ಕುಳಿ[...] ಅಷ್ಟರಲ್ಲಿ ಪರವೂರಿನ ಹಾಗೆ ಕಾಣಿಸುತ್ತಿದ್ದ ರೈತನೊಬ್[...] ಕಡೆಯಿಂದ ಹೊರಟವನು ಇವನ ಮನೆಗೆ ಆಗಮಿ[...] ಅವನು ರಾತ್ರಿ ಅಲ್ಲೇ ಉಳಿದುಕೊಂಡ. ಅಲ್ಲೇ [...]

ದ. ದೀನಾ ಅವನ ಜೊತೆ ಮಾತನಾಡತೊಡಗಿದ. ..., ಎಲ್ಲಿಂದ ಬಂದೆ?" ಅವನೆಂದ "ನಾನು ಸಟ್ಲೆಜ್ ದಡದಿಂದ ಬಂದಿರುವೆ. ಅಲ್ಲಿ ತುಂಬ ಕೆಲಸವಿದೆ." ...ನಿಂದ ಮಾತು ಬೆಳೆಯಿತು. ಆ ಮನುಷ್ಯ ಹೇಳಿದ ... ಹೊಸ ಊರಿನ ನಿರ್ಮಾಣವಾಗುತ್ತಿದೆ. ನಿಮ್ಮ ...ನ ಅದೆಷ್ಟೋ ಜನ ಅಲ್ಲಿಗೆ ಬಂದಿದ್ದಾರೆ. ಅವರೆಲ್ಲ ...ಟಿ ಸೇರಿದ್ದಾರೆ. ಪ್ರತಿಯೊಬ್ಬನಿಗೂ ಇಪ್ಪತ್ತು ಎಕರೆ ...ನ್ನು ಪುಕ್ಕಟೆಯಾಗಿ ಕೊಡಲಾಗಿದೆ. ಬೆಳೆಯೂ ...ಷ್ಟು ಉತ್ಕೃಷ್ಟವೆಂದರೆ ಅಲ್ಲಿ ಬೆಳೆದು ನಿಂತ ಗೋದಿ ...ು ಬಂದಿತು. ಮನುಷ್ಯನಿಗಿಂತಲೂ ಅದರ ತೆನೆಗಳು ...ಕ್ಕೆ ಹೋಗಿವೆ. ಅದೆಷ್ಟು ದಟ್ಟವಾಗಿದೆಯೆಂದರೆ ...ೋಲಿನ ಒಂದು ಕಟಾವಿನಿಂದ ಒಂದು ಹೊರೆ ...ಡುತ್ತದೆ. ಯಾರ ಬಳಿಯೂ ತಿನ್ನಲು ಒಂದು ಕಾಳೂ ...ಲಿಲ್ಲ, ಮನುಷ್ಯ ಬರಿಗೈಯಲ್ಲಿ ಅಲ್ಲಿಗೆ ಬಂದಿದ್ದ. ... ಅವನ ಬಳಿ ಎರಡು ಹಸು, ಆರು ಎತ್ತುಗಳಿವೆ. ...ದ ಕಣಜ ಬೇರೆ."

...ದೀನಾನ ಮನಸ್ಸಿನಲ್ಲೂ ಆಸೆ ಚಿಗುರಿತು. ಅವನು ...ಚಿಸತೊಡಗಿದ: ನಾನು ಈ ಇಕ್ಕಟ್ಟಾದ ಪ್ರದೇಶದಲ್ಲಿ ...ನು ಮಾಡುತ್ತಿದ್ದೇನೆ? ಬೇರೆಡೆ ಎಷ್ಟೊಂದು ...ಶವಿದೆ. ಇಲ್ಲಿಯ ಭೂಮಿ, ಮನೆಮಾರು ಮಾರಿ ...ು ಪಡೆದು ಅಲ್ಲಿಗೇ ಏಕೆ ಹೋಗಬಾರದು? ...ದಾಗಿ ಜೀವನ ಏಕೆ ಆರಂಭಿಸಬಾರದು? ಇಲ್ಲಿ ... ದಟ್ಟಣೆ ಹೆಚ್ಚಾಗಿದೆ. ಅದರಿಂದ ಸಮಸ್ಯೆಗಳು ...ಕೊಳ್ಳುತ್ತವೆ. ಪ್ರಗತಿ ಕುಂಠಿತವಾಗುತ್ತಿದೆ. ಮೊದಲು ... ಅಲ್ಲಿಗೆ ಹೋಗಿ ವಸ್ತು ಸ್ಥಿತಿ ಏನು ಎಂದು ...ುಕೊಂಡು ಬರುವುದು ವಾಸಿ. ಮಳೆಗಾಲದ ನಂತರ ... ಮಾಡಿಕೊಂಡು ಹೊರಟು ನಿಂತ. ಮೊದಲು ... ಹತ್ತಿ ಪ್ರಯಾಣ ಮಾಡಿದ. ನಂತರ ನೂರಾರು

ಬದುಕೊಂಡಿತ್ತು. ಬೇಕಾದಷ್ಟು ದನಕರು ಸಾಕಬಹುದಿತ್ತು.

ಮೊದಲಲ್ಲಿ ಅವನಿಗೆ ಅಲ್ಲಿ ನೆಲೆಯೂರಲು ಮತ್ತು ಮನೆಗಿನೆ ಕಟ್ಟಿಕೊಳ್ಳುವುದರಲ್ಲಿ ತುಂಬ ಆಸಕ್ತಿ ಇತ್ತು. ಅವನು ತನ್ನಷ್ಟಕ್ಕೆ ಸಂತೋಷದಿಂದಿದ್ದ ಮತ್ತು ತನ್ನ ಬಗ್ಗೆ ಅಭಿಮಾನವೆನಿಸಿತ್ತು. ಆದರೆ ಅವನು ಸಮೃದ್ಧಿಗೆ ಒಗ್ಗಿಹೋದ ಮೇಲೆ ಇಲ್ಲೂ ಭೂಮಿ ಸಾಕಷ್ಟಿಲ್ಲ, ಇನ್ನಷ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅವನಿಗೆ ಅನಿಸತೊಡಗಿತು. ಮೊದಲ ವರ್ಷ ಅವನು ಗೋದಿ ಬಿತ್ತಿದ. ಭೂಮಿ ಒಳ್ಳೆಯ ಫಸಲು ನೀಡಿತು. ಅವನು ಮತ್ತೆ ಗೋದಿ ಬಿತ್ತಬೇಕೆಂದಿದ್ದ. ಆದರೆ ಅದಕ್ಕಾಗಿ ಹೆಚ್ಚಿನ ಭೂಮಿ ಬೇಕಿತ್ತು. ಭೂಮಿ ಅವಶ್ಯವಿರುವಷ್ಟು ಇದ್ದಿರಲಿಲ್ಲ, ಅದು ಒಮ್ಮೆ ಒಂದು ಫಸಲನ್ನು ನೀಡುತ್ತಿತ್ತು. ಅದೇ ರೀತಿ ಗೋದಿಯ ಫಸಲನ್ನು ಪುನಃ ನೀಡುತ್ತಿರಲಿಲ್ಲ. ಒಂದೆರಡು ಸಲ ಗೋದಿ ಬೆಳೆ ತೆಗೆಯಬಹುದಿತ್ತು, ಆದರೆ ನಂತರ ಭೂಮಿಗೆ ವಿಶ್ರಾಂತಿ ನೀಡುವುದು ಅವಶ್ಯವಾಗಿತ್ತು. ಎಲ್ಲರೂ ಇಂತಹ ಭೂಮಿ ಬೇಕೆನ್ನುತ್ತಿದ್ದರು. ಆದರೆ ಎಲ್ಲರಿಗೂ ಎಲ್ಲಿಂದ ಸಿಗಬೇಕು? ಇದರಿಂದಾಗಿ ಮನಸ್ತಾಪ ಮತ್ತು ಬಿಗುವಿನ ವಾತಾವರಣ ನಿರ್ಮಾಣವಾಗುತ್ತಿತ್ತು. ಶ್ರೀಮಂತರು ಗೋದಿ ಬೆಳೆಯಲು ಭೂಮಿ ಬೇಕು ಎನ್ನತೊಡಗಿದರು. ಬಡವರು ಹೇಗಾದರೂ ಮಾಡಿ ಭೂಮಿಯಲ್ಲಿ ತೊಡಗಿಸಿದ ಹಣವನ್ನು ಮರಳಿ ಪಡೆಯಬಯಸಿದ್ದರು. ಹಾಗಾದಲ್ಲಿ ಟ್ಯಾಕ್ಸ್ ಇತ್ಯಾದಿ ಕಟ್ಟುವುದು ಸಾಧ್ಯವಾಗುತ್ತಿತ್ತು. ದೀನಾ ಇನ್ನಷ್ಟು ಗೋದಿ ಬಿತ್ತ ಬಯಸಿದ. ಅದಕ್ಕಾಗಿ ಒಂದು ವರ್ಷದ ಮಟ್ಟಿಗೆ ಇನ್ನಷ್ಟು ಜಮೀನನ್ನು ಬಾಡಿಗೆಗೆ ತೆಗೆದುಕೊಂಡ. ದೊಡ್ಡ ಪ್ರಮಾಣದಲ್ಲಿ ಅವನು ಗೋದಿ ಬಿತ್ತಿದ. ಫಸಲು ಸಹ ಚೆನ್ನಾಗಿ ಬಂದಿತು. ಆದರೆ ಭೂಮಿ ಊರಿಂದ ದೂರವಿತ್ತು. ಕಾಳುಕಡ್ಡಿಯನ್ನೆಲ್ಲ ಗಾಡಿಯಲ್ಲಿ ಹೇರಿಕೊಂಡು ತರಬೇಕಿತ್ತು. ಕೆಲದಿನಗಳ ನಂತರ ಕೆಲವು ದೊಡ್ಡ ವ್ಯಕ್ತಿಗಳು ಬೇರೆ



...ಎತ್ತಿನ ಗಾಡಿಯಲ್ಲಿ ಹಾಗೂ ಕಾಲ್ನಡಿಗೆಯಲ್ಲಿ ...ಸಿ ಸಟ್ಲೆಜ್ ದಡದ ಆಚೆ ಸ್ಥಳ ತಲುಪಿದ. ಆ ...ಷ್ಯ ಹೇಳಿದ್ದೆಲ್ಲ ನಿಜವಿತ್ತು. ಎಲ್ಲರ ಬಳಿ ಜಮೀನಿತ್ತು. ...ಯೊಬ್ಬನಿಗೂ ಸರ್ಕಾರದ ಪರವಾಗಿ ಇಪ್ಪತ್ತು-ಇಪ್ಪತ್ತು ...ರೆ ಭೂಮಿ ಸಿಕ್ಕಿತ್ತು. ಇಲ್ಲವೆ ಬೇಕಾದದ್ದೆಲ್ಲ ...ೀದಿಸಬಹುದಿತ್ತು, ಇನ್ನೂ ಒಳ್ಳೆಯ ಅವಕಾಶವೆಂದರೆ ... ಕಿಮ್ಮತ್ತಿನ ಬೆಲೆಗೆ ಇನ್ನೂ ಬೇಕಾದಷ್ಟು ಭೂಮಿ ...ೀದಿಸಬಹುದಿತ್ತು.

...ಎಲ್ಲ ವಿಷಯ ತಿಳಿದುಕೊಂಡ ಮೇಲೆ ಚಳಿಗಾಲಕ್ಕಿಂತ ...ದಲೇ ದೀನಾ ಮನೆಗೆ ಮರಳಿದ. ಬಂದವನೇ ದೇಶ ...ುವ ಕುರಿತು ಯೋಚಿಸತೊಡಗಿದ. ಲಾಭದಲ್ಲೇ ಎಲ್ಲ ...ಮಿ ಮಾರಿದ. ಮನೆ-ಮಾರು, ದನಕರು ಮಾರಿ ನಗದು ... ಪಡೆದುಕೊಂಡ. ಪಂಚಾಯತಿಗೆ ರಾಜೀನಾಮೆ ನೀಡಿದ ...ಗೂ ಮನೆ ಮಂದಿಯೊಂದಿಗೆ ಸಟ್ಲೆಜ್ ದಡದಾಚೆ ... ಹೊರಟ.

... ದೀನಾ ಮನೆಮಂದಿಯೊಂದಿಗೆ ಆ ಸ್ಥಳ ತಲುಪಿದ. ...ದವನೇ ಒಂದು ದೊಡ್ಡ ಗ್ರಾಮದ ಪಂಚಾಯತಿ ...ು ಅರ್ಜಿ ಸಲ್ಲಿಸಿದ. ಪಂಚರಿಗೆ ಸಾಕಷ್ಟು ಗೌರವದಿಂದ ... ಆತ್ಮಾಸಿಸಿದ. ಜಮೀನಿನ ಹಕ್ಕುಪತ್ರ ಅವನಿಗೆ ...ಭಜಾಗಿ ದೊರೆಯಿತು. ಸಮುದಾಯದ ...ನೊಳಗಿಂದ ಅವನಿಗೆ ಹಾಗೂ ಅವನ ...ಮಂದಿಯ ಭೋಗಕ್ಕೆಂದು ಐದು ಭಾಗದಷ್ಟು, ಅಂದರೆ ...ು ಎಕರೆ ಭೂಮಿ ನೀಡಲಾಯಿತು. ಅದೆಲ್ಲ ಒಂದೇ ... ಇದ್ದಿಲಿಲ್ಲ, ಬೇರೆ ಬೇರೆ ಕಡೆಯ ತುಂಡು ...ಾಗಿತ್ತು, ಅಷ್ಟೇ ಅಲ್ಲದೆ ಪಂಚಾಯತಿಯ ...ವನ್ನು ಸಹ ಅವನಿಗೆ ಬಿಟ್ಟು ಕೊಡಲಾಯಿತು. ... ಅವಶ್ಯವಾದ ಕಟ್ಟಡ ಕಟ್ಟಿಸಿಕೊಂಡ. ದನಕರು ...ದಿಸಿದ. ಸಮುದಾಯದ ಜಮೀನಿನೊಳಗಿಂದಲೇ ... ಅದೆಷ್ಟು ಭೂಮಿ ಸಿಕ್ಕಿತೆಂದರೆ ಅದು ಮೊದಲಿಗಿಂತ ... ಪಟ್ಟು ಮತ್ತು ಫಲವತ್ತಾಗಿತ್ತು, ಅವನು ...ಗಿಂತ ಹೆಚ್ಚು ಶ್ರೀಮಂತನಾದ. ಅವನ ಬಳಿ ದನ ...ಸಮೃದ್ಧವಾಗಿ ಸಾಕಷ್ಟು ಬಯಲು ಮೈದಾನ

ಬೇರೆ ಅರ್ಜಿ ಸಲ್ಲಿಸಿ ಸಾಕಷ್ಟು ಸಂಪಾದಿಸುತ್ತಿದ್ದುದನ್ನು ದೀನಾ ಗಮನಿಸಿದ. ಒಂದೇ ಕಡೆ ಸ್ಥಿರಾಸ್ತಿ ಹೊಂದಿದರೆ ಹಾಗೂ ಅಲ್ಲೇ ಮನೆ ಕಟ್ಟಿಸಿಕೊಂಡು ಇದ್ದರೆ ಅದು ಬೇರೆಯೆ ವಿಷಯವಾದೀತು ಎಂದು ಅವನು ಯೋಚಿಸಿದ.

ಹೀಗೆ ಸ್ಥಿರಾಸ್ತಿಯಾಗಿ ಒಂದೇ ಕಡೆ ಭೂಮಿ ಖರೀದಿಸುವ ವಿಚಾರ ಪದೇಪದೇ ಅವನ ಮನಸ್ಸಿನಲ್ಲಿ ಮೂಡತೊಡಗಿತು.

ಮೂರು ವರ್ಷ ಹೀಗೆಯೆ ಕಳೆದವು. ದೀನಾ ಬಾಡಿಗೆಗೆ ಜಮೀನು ತೆಗೆದುಕೊಳ್ಳುತ್ತಿದ್ದ ಹಾಗೂ ಗೋದಿ ಬಿತ್ತುತ್ತಿದ್ದ. ಮಳೆ ಬೆಳೆ ಚೆನ್ನಾಗಿ ಬಂತು. ಅವನ ಬಳಿ ಹಣ ಕೂಡಿ ಬೀಳತೊಡಗಿತು. ಅವನು ಅದೇ ಸಂತೋಷದಿಂದ ಮುಂದುವರಿಯಬಹುದಿತ್ತು, ಆದರೆ ಪ್ರತಿ ವರ್ಷ ಬೇರೆಯವರಿಂದ ಹೆಚ್ಚುವರಿ ಜಮೀನನ್ನು ಪಡೆಯುವುದು, ಅದಕ್ಕಾಗಿ ಪ್ರಯತ್ನ ಮಾಡುವುದು ಮತ್ತು ತಲೆ ಕೆಡಿಸಿಕೊಳ್ಳುವ ಈ ಕೆಲಸದಿಂದ ಅವನಿಗೆ ಸಾಕಾಗಿಹೋಯಿತು. ಎಲ್ಲಿ ಒಳ್ಳೆಯ ಭೂಮಿ ಇರುತ್ತಿತ್ತೋ ಅಲ್ಲಿಗೇ ಎಲ್ಲರೂ ಧಾವಿಸುತ್ತಿದ್ದರು. ಇದಕ್ಕಾಗಿ ಸಾಕಷ್ಟು ಚಾಕಾಸಿ ಹಾಗೂ ಎಚ್ಚರಿಕೆ ವಹಿಸದೇ ಹೋದರೆ ಭೂಮಿ ಸಿಗುವುದು ಅಸಾಧ್ಯವಾಗುತ್ತಿತ್ತು, ಇದು ತಲೆಬೇನೆಯ ವಿಷಯವಾಗಿತ್ತು. ಅಷ್ಟಕ್ಕೂ ಮೂರನೆಯ ವರ್ಷ ಏನಾಯಿತೆಂದರೆ ದೀನಾ ಒಬ್ಬ ಮಹಾಜನನೊಂದಿಗೆ ಸೇರಿ ಕೆಲವು ರೈತರಿಂದ ಭೂಮಿ ಬಾಡಿಗೆಗೆ ಪಡೆದ. ಭೂಮಿ ಉಳುಮೆ ಮಾಡಿ ಸಿದ್ಧಗೊಂಡಿತ್ತು, ಅಷ್ಟರಲ್ಲಿ ಅವರಲ್ಲಿ ಒಂದಷ್ಟು ಮನಸ್ತಾಪ ಉಂಟಾಯಿತು. ರೈತರು ವ್ಯಾಜ್ಯವನ್ನು ನ್ಯಾಯಾಲಯದ ಮುಂದೆ ತಂದರು. ನ್ಯಾಯಾಲಯದಿಂದಾಗಿ ಪರಿಸ್ಥಿತಿ ಇನ್ನೂ ಹದಗೆಟ್ಟಿತು.

ಭೂಮಿ ನನ್ನ ಸ್ಥಿರಾಸ್ತಿಯಾಗಿದ್ದರೆ ನಾನು ಸ್ವತಂತ್ರನಾಗಿರುತ್ತಿದ್ದೆ ಹಾಗೂ ಈ ಜಂಜಾಟ ಮತ್ತು ವ್ಯಾಜ್ಯದ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲವೆಂದು ದೀನಾ ಯೋಚಿಸಿದ.

(ಮುಂದುವರೆಯುವುದು)

■ ಮೂಲ: ಲಿಯೊ ಟಾಲ್‌ಸ್ಟಾಯ್

ಕನ್ನಡಕ್ಕೆ ಹಸನ್ ನಯೀಂ ಸುರಕೋಡ

ಚಪ್ಪಾಳೆ ಗಿಟ್ಟಿಸಿದ ರಾವಣ ದರ್ಶನ!

ಅದೊಂದು ರಾಮಲೀಲಾ ಮೈದಾನ. ಹತ್ತು ತಲೆ ಹೊತ್ತ ರಾವಣನ ಗೊಂಬೆಗೆ ಬೆಂಕಿ ಹಚ್ಚಲು ಜನ ತಯಾರಾಗಿರುತ್ತಾರೆ. ಆಗ ರಾವಣನೇ ಪ್ರತ್ಯಕ್ಷನಾಗುತ್ತಾನೆ. "ಹತ್ತು ತಲೆಯ ರಾವಣನನ್ನು ಸೃಷ್ಟಿ ಮಾಡಿದ್ದೂ ಅಲ್ಲದೆ, ಬೆಂಕಿಯನ್ನೇಕೆ ಹಚ್ಚುತ್ತೀರಿ?" ಎಂದು ಕೇಳುತ್ತಾನೆ. ಆಗ "ರಾವಣ ಕೆಟ್ಟವನು. ಅದಕ್ಕೇ ಬೆಂಕಿ ಹಚ್ಚುತ್ತೇವೆ" ಎಂಬ ಮೂಢನಂಬಿಕೆಯಂತಹ ಉತ್ತರ ದೊರಕುತ್ತದೆ. ಆಗ ರಾವಣ ಸ್ವತಃ ತನ್ನ ಹತ್ತು ತಲೆಯ ಮಹತ್ವವನ್ನು ವಿವರಿಸತೊಡಗುತ್ತಾನೆ.

"ದಶಕಂಠ ರಾವಣ ಅಂದರೆ ದಶಕಂಠದ ರೀತಿ ತನ್ನ ಪ್ರತಿಭೆಯನ್ನು ತೋರಿದವನು. ಅಪ್ರತಿಮ ಶಿವಭಕ್ತ. ಭುಜಂಗ ಸ್ತೋತ್ರ ಬರೆದ ಕವಿ. ಸಂಗೀತಗಾರ. ಚಿತ್ರಕಲಾವಿದ. ರುದ್ರವೀಣಾ ವೈಣಿಕ" ಹೀಗೆ ತನ್ನ ಹತ್ತು ತಲೆಯ ಪ್ರತಿಭೆಯನ್ನು ಮನವರಿಕೆ ಮಾಡಿಕೊಟ್ಟ ಆತ, ಹತ್ತು ಬುಡಕಟ್ಟುಗಳನ್ನು ಒಗ್ಗೂಡಿಸಿ, ಅದರ ಅಧಿಪತಿಯಾದುದನ್ನು ವಿವರಿಸುತ್ತಾನೆ. ರಾವಣನ ವಿವರಗಳು ಪುರಾಣದಲ್ಲೇ ಅಡಕವಾಗಿರುವ ಸಂಗತಿಗಳಾದರೂ ಅವನ್ನೆಲ್ಲಾ ಮರೆಮಾಚಿ, ಹತ್ತು ತಲೆಯ ದುಷ್ಟ ಕೀಟವೊಂದನ್ನು ನಾಶಪಡಿಸುವಂತಹ ಆಚರಣೆ ಮಾಡುತ್ತಿದ್ದ ಜನರಿಂದ ತನ್ನ ಚಾರಿತ್ರ್ಯವಧೆ ನಡೆಯುತ್ತಿರುವ ಬಗ್ಗೆ ಒಂದೊಂದೇ ಪ್ರಕರಣವನ್ನು ಅನಾವರಣಗೊಳಿಸಿ, ರಾಮಭಕ್ತರ ಮುಖಕ್ಕೆ ಹಿಡಿಯುತ್ತಾನೆ.

"ಅಗ್ನಿ ಆರಾಧಕರು ಕಾಡಿನಲ್ಲಿ ಬೆಂಕಿ ಹಾಕಿ ಯಜ್ಞ ಹೋಮ ನಡೆಸುತ್ತಿದ್ದ ಜಾಗಕ್ಕೆ ಓಡಿಬಂದ ಅಸುರರು, ನೀರು ಉಯ್ದೊ ಅಥವ ಮೂತ್ರ ಉಯ್ದೊ ಮಣ್ಣು ಹಾಕಿ ಅಗ್ನಿ ನಂದಿಸುತ್ತಿದ್ದುದು ಯಜ್ಞಭಂಗದ ಕಾರ್ಯವಲ್ಲ, ಬೆಂಕಿಯಿಂದ ಕಾಡನ್ನು ರಕ್ಷಿಸುವ ಆ ಮುಖಾಂತರ ತಮ್ಮ ಬದುಕನ್ನು ರಕ್ಷಿಸಿಕೊಳ್ಳುವ ತುರ್ತಿನಿಂದ. ಆದರೆ ನಮ್ಮ ಸಂತತಿಗೆ ಸಿಕ್ಕಿರುವ ಪಟ್ಟವೇ ಬೇರೆ. ವಾಸ್ತವವಾಗಿ ನಾನು ಸ್ತ್ರೀವಾದಿ, ರಸಿಕನೂ ಹೌದು. ಎಲ್ಲ ರಾಜರುಗಳೂ ಬಹುಪತ್ನಿ ವಲ್ಲಭರಂತೆ. ನಾನೂ ಅದಕ್ಕೆ ಹೊರತಲ್ಲ, ರಾಮನೇನೊ ಏಕಪತ್ನಿ ವ್ರತಸ್ಥನೆಂದು ಹೇಳಿಕೊಳ್ಳಬಹುದು. ಆದರೆ ಆತನ ತಂದೆಗೆ ಮೂವರು ಹೆಂಡಂದಿರು. ಅದೇನಾದರೂ ಆಗಲಿ, ಈ ಪ್ರಪಂಚದಲ್ಲಿ ಮೊಟ್ಟಮೊದಲು ಮಹಿಳಾ ಮೀಸಲಾತಿ ತಂದವನು ನಾನೆ. ಸೀತೆಯನ್ನು ನೋಡಿಕೊಳ್ಳಲು ತ್ರಿಜಟೆಯನ್ನ ನೇಮಿಸಿದ್ದೆ. ಲಂಕೆಯ ಹೆಬ್ಬಾಗಿಲು ಕಾಯಲು ಸಿಂಹಿಕೆ. ದಂಡಕಾರಣ್ಯ ನೋಡುತ್ತಿದ್ದವಳು ತಾಟಕಿ, ಶೂರ್ಪನಖಿ. ಇಂತಹ ರಕ್ಷಕಿಯರನ್ನು ಒಂದೇ ಬಾಣದಿಂದ ಕೊಂದ ರಾಮ ಎಂದು ಕೊಂಡಾಡುವುದನ್ನು ಕೇಳಿದ್ದೇನೆ, ನಕ್ಕಿದ್ದೇನೆ.

ಇರಲಿ, ನನ್ನ ತಂಗಿ ಶೂರ್ಪನಖಿ ಅಮಾಯಕ ಹೆಣ್ಣು. 'ನೀನು ಮೆಚ್ಚಿದವನಿಗೆ ನಿನ್ನನ್ನ ಮದುವೆ ಮಾಡಿಕೊಡುತ್ತೇನೆ' ಎಂದು ನಾನೇ ಹೇಳಿದ್ದೆ ಆದ್ದರಿಂದ ರಾಮಲಕ್ಷ್ಮಣರನ್ನ ಅದಕ್ಕಾಗಿ ಬೇಡಿದಳು. ಅವರು ನಿರಾಕರಿಸಬಹುದಿತ್ತು, ಕಠೋರವಾಗಿ ತಿರಸ್ಕರಿಸಬಹುದಿತ್ತು, ಆದರೆ ಅವರು ಮಾಡಿದ ಕೆಲಸವೇನು? ಮೂಗು ಮುಂದಲೆಯನ್ನು ಕುಯ್ದು ಕಳುಹಿಸಿದರು. ಆ ಘನಘೋರ ದೃಶ್ಯವನ್ನು ನಾನೆಂದೂ ಮರೆಯಲಾರೆ. ಮನುಷ್ಯನ ವ್ಯಕ್ತಿತ್ವವೇ ಮೂಗು. ಅದರಲ್ಲೂ ಹೆಣ್ಣಿನ ಮೂಗನ್ನು ಈ ಪ್ರಪಂಚದಲ್ಲಿ ಯಾವ ಗಂಡಸರೂ ಕುಯ್ದಿರಲಾರರು.


ಸೀತೆಯನ್ನು ಅಪಹರಿಸಲು ಹೋದಾಗ ಆಕೆ ಪ್ರತೀಕಾರವಾಗಿ ತನ್ನ ಮೂಗನ್ನು ರಾವಣ ಕುಯ್ಯುವನೆಂದು ಅಣ್ಣಾ ಎಂದು ಚೀರಿದಳು. ನನಗೆ ಮೂಗಿಲ್ಲದ ಇಬ್ಬರು ತಂಗಿಯರು ಬೇಡ ಎಂದೆ. ಲಂಕೆಗೆ ತೆಗೆದುಕೊಂಡು ಹೋದ ನಾನು ಹಾಳು ಮಾಡಬಹುದಿತ್ತು, ಆದರೆ ಹೆಣ್ಣು ಒಲಿಯದೆ ಮುಟ್ಟುವವನಲ್ಲ ನಾನು. ಆದರೆ ನನಗೆ ಸಿಕ್ಕಿರುವ ಪಟ್ಟವೆಂತಹದು.

ಸೀತೆಯ ಸ್ವಯಂವರಕ್ಕೆ ನಾನು ಹೋಗಿದ್ದು ಹೌದು. ಆದರೆ, ಜನಕ ರಾಜ ಎಂತಹ ಕುತಂತ್ರ ಮಾಡಿದ್ದನೆಂದರೆ, ಆರ್ಯ ಮೂಲದವರಿಗೆ ಹೆಣ್ಣು ಕೊಡಬೇಕೆಂದು ಮೊದಲೇ ನಿರ್ಧರಿಸಿದ್ದ ಆತ ಸ್ಪರ್ಧೆಗೆ ಶಿವಧನುಸ್ಸನ್ನು ಇಟ್ಟುಬಿಟ್ಟಿದ್ದ. ಶೈವರಾದ ನಾವು ಶಿವಧನುಸ್ಸನ್ನೆಂದೂ ಮುಟ್ಟುವುದಿಲ್ಲ, ಆದ್ದರಿಂದ ಶಿವಧನುಸ್ಸಿಗೆ ಭಕ್ತಿಯಿಂದ ನಮಿಸಿ ಹಿಂಜರಿದೆವು. ಆದರೆ ಮುಂದೆ ನಡೆದದ್ದು 'ಶಿವ ಧನುಸ್ಸನ್ನ ರಾವಣ ಎತ್ತಲಾರದೆ ಪರಾಜಿತನಾದನಂತೆ' ...ಹೀಗೆ ನಡೆದಿರುವ ನನ್ನ ತೇಜೋವಧೆ ಒಂದೆರಡಲ್ಲ.

ನಾನು ಕಷ್ಟಪಟ್ಟು ಶಿವನ ಆತ್ಮಲಿಂಗವನ್ನು ಪಡೆದೆ. ತಪಸ್ಸಿನಿಂದ. ತಪಸ್ಸು ಎಂದರೆ ವಿದ್ಯೆ, ಅದನ್ನು ಕಠೋರ ವ್ರತದಿಂದ ಸಂಪಾದಿಸಿದ ಕಾರಣಕ್ಕೆ ಶಿವನ ಆತ್ಮಲಿಂಗ ಪಡೆದೆ. ಅದನ್ನು ಗಣಪತಿಯ ಕೈಗೆ ಕೊಟ್ಟ ಎರಡು ಘಳಿಗೆಯಲ್ಲಿ ಆತ ನೆಲಕ್ಕೆ ಇಟ್ಟುಬಿಟ್ಟ. ಆತ ವಿದ್ಯಾಗಣಪತಿಯಂತೆ. ಅವನ ಹಿಂದಿದ್ದವರು ಮಾಡಿಸಿದ ಕಿಡಿಗೇಡಿ ಕೃತ್ಯದ ಅನಾವರಣದ ಬದಲು, ನನಗೇ ತತ್ವ ಶಾಸ್ತ್ರೀಯತೆಯಿಂದ ಸಂಭ್ರಮಗೊಂಡವರನ್ನು ನೋಡಿದ್ದೇನೆ.

ನನಗೂ, ರಾಮನಿಗೂ ಯುದ್ಧ ಸಂಭವಿಸುವುದಕ್ಕಿಂತಲೂ ಮೊದಲೆ ಲಂಕೆಯ ಸಿಂಹಾಸನದ ಆಸೆ ತೋರಿಸಿ ವಿಭೀಷಣನನ್ನು ಅತ್ತ ಸೆಳೆದರು. ಈ ಪ್ರಪಂಚದ ಮೊಟ್ಟ ಮೊದಲ ಪಕ್ಷಾಂತರಿ ಈ ವಿಭೀಷಣ. ಪಕ್ಷಾಂತರಿಗಳ ಆದರ್ಶವೆಂದಾದರೂ ಒಳ್ಳೆಯ ಆಡಳಿತಕೊಟ್ಟದ್ದುಂಟೆ? ನನ್ನ ನಂತರ ಲಂಕೆಯ ಸುದ್ದಿಯೇ ಇಲ್ಲವಾಯಿತು.

ಯುದ್ಧ ಪ್ರಾರಂಭವಾಗುವುದಕ್ಕೆ ಮುನ್ನ ರಾಮ ಬ್ರಾಹ್ಮಣನಿಂದ ಕಂಕಣ ಕಟ್ಟಿಸಿಕೊಳ್ಳಬೇಕಿತ್ತು, ಅಲ್ಲಾದ ಬ್ರಾಹ್ಮಣನೂ ಇರಲಿಲ್ಲ.



ನಾನೇ ಹೋದೆ. 'ಕಂಕಣಧಾರಿಯಾಗಲು ಪತ್ನಿ ಸಮೇತನಾಗಿ ಬರಬೇಕು' ಎಂದೆ. 'ರಾವಣ ನನ್ನ ಪತ್ನಿಯನ್ನು ಅಪಹರಿಸಿದ್ದಾನೆ' ಎಂದ. ಒಂದು ದರ್ಭೆಗೇ ಮಂತ್ರೋಚ್ಚಾರಣೆ ಮಾಡಿ, ಆತನ ಪಕ್ಕಕ್ಕಿಟ್ಟು, ಕಂಕಣ ಕಟ್ಟಿ ವಿಜಯಿಯಾಗು ಎಂದು ಆಶೀರ್ವದಿಸಿದೆ. ಆ ಕ್ಷಣದಲ್ಲಿ ನನ್ನನ್ನು ಕೊಂಡಾಡಬೇಕಿತ್ತು ಅದೆಂದೂ ಆಗಲಿಲ್ಲ.

ರಾಮ ಸಮುದ್ರರಾಜನನ್ನು ಕರೆದು 'ಯುದ್ಧದ ಸಲುವಾಗಿ ನೀರನ್ನು ಹಿಂಗಿಸಿ ದಾರಿ ಮಾಡಿಕೊಡು' ಎಂದ. ನೀರಿನ ಗುಣದಲ್ಲಿ ಅಂತಹ ಕಾರ್ಯ ಸಾಧ್ಯವಿಲ್ಲ ಎಂದ ಸಮುದ್ರ ರಾಜ. ಬೇಕಿದ್ದರೆ ಕಲ್ಲು ಮಣ್ಣು ಹಾಕು ತೇಲಿಸುತ್ತೇನೆ ಎಂದ. ಕಲ್ಲು ಮಣ್ಣನ್ನು ತೇಲಿಸುವುದೂ ಕೂಡ ನೀರಿನ ಗುಣವಲ್ಲ ಎಂಬುದು ಆ ಮೂರ್ಖನಿಗೆ ಹೊಳೆಯಲಿಲ್ಲವೆ? ಆದಾಗಲೇ ಬಾಣ ಹೂಡಿದ್ದ ರಾಮ, ಬಾಣ ಹಿಂಪಡೆಯುವಂತಿಲ್ಲ, 'ಎಲ್ಲಿಗೆ ಗುರಿ ಇಡಲಿ?' ಎಂದ. ಅದಕ್ಕೆ ಸಮುದ್ರ ರಾಜ 'ದಸ್ಯುಗಳನ್ನು ನೀರನ್ನು ಕುಡಿದು ಅಪವಿತ್ರಗೊಳಿಸುತ್ತಾರೆ. ನಿನ್ನ ಬಾಣ ಅಲ್ಲಿಗೆ ಹೋಗಿ ಆ ನೀರನ್ನು ಹಿಂಗಿಸಲಿ' ಎಂದ. ದಸ್ಯುಗಳು ನೀರನ್ನು ಕುಡಿಯದಂತೆ ಮಾಡುವ ಇಂತಹ ಜೀವ ವಿರೋಧಿಗಳನ್ನ ನೀವೆಲ್ಲಾದರೂ ಕಂಡಿದ್ದೀರಾ?

ಯುದ್ಧದಲ್ಲಿ ಲಕ್ಷ್ಮಣ ಬ್ರಹ್ಮಾಸ್ತ್ರ ಪ್ರಯೋಗಿಸಿದ. ಇಡೀ ಭೂಮಂಡಲವೇ ಕಂಪಿಸಿ, ಪರ್ವತ, ನದಿಗಳೆಲ್ಲಾ ಚೆಲ್ಲಾಡಿ ಹೋದವಂತೆ. ಅದೇ ನನ್ನ ಮಗ ಬ್ರಹ್ಮಾಸ್ತ್ರ ಪ್ರಯೋಗಿಸಿದಾಗ ಯಾವ ಅನಾಹುತವೂ ಸಂಭವಿಸುವುದಿಲ್ಲ, ಲಕ್ಷ್ಮಣ ಮೂರ್ಛೆ ಹೋದ. ಆಂಜನೇಯನನ್ನ ಎಡೆಮುರಿ ಕಟ್ಟಿದ ಆ ಅಸ್ತ್ರ ಒಂದೇ ಆದರೂ ನಾವು ಪ್ರಯೋಗಿಸಿದ್ದು ಮಾತ್ರ ಕಳಪೆ ಅಸ್ತ್ರವೆಂಬಂತೆ ವಿದ್ವಾಂಸರು ಬರೆದುಕೊಂಡೇ ಬಂದಿದ್ದಾರೆ. ಯಾಕಿಂತಹ ತಾರತಮ್ಯ? ಬರವಣಿಗೆಯಲ್ಲಿ ಸತ್ಯಗಳಿರಬೇಕಲ್ಲವೆ. ಆದರೆ ರಾಮನೇ ಸುಳ್ಳು ಬರೆದ ಮೇಲೆ ನೀವು ಇನ್ನೇನು ಬರೆಯಲು ಸಾಧ್ಯ. 'ಲಕ್ಷ್ಮಣನಲ್ಲಿಗೆ ಹೋಗು. ಅವನು ನಿನ್ನನ್ನು ಮದುವೆಯಾಗುತ್ತಾನೆ' ಎಂದು ಹೇಳಿದ ರಾಮ, ನನ್ನ ತಂಗಿಯ ಬೆನ್ನಿನ ಮೇಲೆ ಈಕೆಯ ಮೂಗು ಮುಂದಲೆ ಕುಯ್ದು ಹಾಕು ಎಂದು ಬರೆದಿದ್ದನಂತೆ. ಅಂದು ಆರಂಭವಾದ ಅಕ್ಷರ ವಂಚನೆ ನಿರಂತರವಾಗಿ ನಡೆಯುತ್ತಲೇ ಬಂದಿದೆ.


ನಿಮ್ಮ ರಾಮ ಎಂತಹ ಬುದ್ಧಿವಂತ ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನನ್ನನ್ನು ಕೊಲ್ಲಲು ಸಾಧ್ಯವೇ ಇಲ್ಲವೆಂದು ರಾಮ ಹತಾಶನಾಗಿ ಕೆಲಸಕ್ಕೆ ಬಾರದ ಬಾಣ ಬಿಡುವಾಗ, ಸಾರಥಿ ಹೇಳಿದನಂತೆ, 'ರಾಮ, ಬ್ರಹ್ಮಾಸ್ತ್ರವನ್ನು ಬಿಟ್ಟು ರಾವಣನನ್ನು ವಧಿಸು' ಎಂದು. 'ರಾಮ ಬ್ರಹ್ಮಾಸ್ತ್ರ ಬಿಟ್ಟ, ಇಂತಹ ಪರಾಕ್ರಮಿಯನ್ನು ಕೊಂಡಾಡುವ ಜನರಿಗೆ ಒಂದಲ್ಲ ಒಂದು ದಿನ ಸತ್ಯದರ್ಶನವಾಗುತ್ತವೆ' ಎಂದು ರಾವಣ ತನ್ನ ಪರವಾಗಿ ತಾನೇ ವಕಾಲತ್ತು ವಹಿಸಿ ಮಾತನಾಡುವಾಗ ಪ್ರತಿ ವಾಕ್ಯಕ್ಕೂ ಕರತಾಡನವಾಗುತ್ತಿತ್ತು.

ಕಳೆದ ವಾರ ಬೆಂಗಳೂರಿನ ಯವನಿಕಾದಲ್ಲಿ ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಆಡಿದ ಈ ನಾಟಕ, ಹೊಸ ತಲೆಮಾರಿನ ವಿಮರ್ಶೆ ಸಾಹಿತ್ಯವನ್ನು ಆಧರಿಸಿದ ನಾಟಕ. ನಿರ್ದೇಶಕ ಡಾ. ಸಾಸ್ವೆಹಳ್ಳಿ ಸತೀಶ್ ಒಂದು ಗಂಟೆಯಲ್ಲಿ ನಮಗೆ ರಾವಣನ ಇನ್ನೊಂದು ಮುಖದ, ಅಂದರೆ ದಶಮುಖದ ದರ್ಶನ ಮಾಡಿಸುತ್ತಾರೆ. ನೀನಾಸಂ ತರಬೇತಿ ಪಡೆದು ಬಂದಿರುವ ಅಜಯ್ ಗೌಡನ ಅಭಿನಯ ಮನಮುಟ್ಟುವಂತಿದೆ. ಈ ನಾಟಕ ಪ್ರದರ್ಶನವನ್ನು ಹೆಚ್ಚು ಮಹಿಳೆಯರೇ ಮೆಚ್ಚಿಕೊಂಡು ಮಾತನಾಡುವುದೊಂದು ವಿಶೇಷ. ಕಾಲ ಬದಲಾದಂತೆ ನಮ್ಮ ಪುರಾಣದ ಪಾತ್ರಗಳು ತಮಗಾಗಿರುವ ಅನ್ಯಾಯವನ್ನು ಸಹಿಸಿಕೊಂಡು ಹೊಸ ಅರ್ಥಗಾರಿಕೆಯ ದರ್ಶನ ಮಾಡಿಸುತ್ತ ಹೋಗುತ್ತಿರುವುದು ಕಾಲದ ಮಹಿಮೆ...

ಅದೇನಾದರಾಗಲಿ, ರಾವಣ ... ಎಂದು ... ಹುಟ್ಟು ... ಒಳ್ಳೆಯದು!!

■ ಬಿ.ಚಂದ್ರೇಗೌಡ

ವಿಜ್ಞಾನಲೋಕದ ಕತ್ತಲ ಮಹಿಳೆ - ರೋಸಲಿಂಡ್ ಫ್ರಾಂಕ್ಲಿನ್




"ವಿಜ್ಞಾನ ಮತ್ತು ಪ್ರತಿ ನಿತ್ಯದ ಜೀವನ ಎರಡನ್ನೂ ಒಂದನ್ನೊಂದು ಬೇರ್ಪಡಿಸಲಾಗದು ಮತ್ತು ಬೇರ್ಪಡಿಸಬಾರದು. ನನಗಂತೂ ವಿಜ್ಞಾನವೆನ್ನುವುದು ಜೀವನದ ಭಾಗಶಃ ವಿವರಣೆಯಿದ್ದಂತೆ. ಇದೂವರೆಗಂತು ಅದೊಂದು ವಾಸ್ತವದ ನೆಲೆಗಟ್ಟಿನ ಮೇಲೆ, ಅನುಭವಗಳಿಂದ ಮತ್ತು ಪ್ರಯೋಗಗಳಿಂದ ನಡೆಯುತ್ತಿದೆ". ಹೀಗೆಂದು ದೃಢವಾಗಿ ತನ್ನ ತಂದೆಗೆ ಹೇಳುತ್ತಿದ್ದಾಕೆ ರೋಸಲಿಂಡ್ ಫ್ರಾಂಕ್ಲಿನ್. ಅದೂ ತನ್ನ ಕೇವಲ ಇಪ್ಪತ್ತನೆಯ ವಯಸ್ಸಿನಲ್ಲೇ ಹಾಗೆ ಪತ್ರ ಬರೆದು ತಂದೆಗೆ ತಿಳಿಸಿದ್ದರು. ಮಾತ್ರವಲ್ಲ "ತನ್ನ ಜೀವನದುದ್ದಕ್ಕೂ ತಾನೇನು ಮಾಡಬೇಕೆಂಬುದರ ಬಗ್ಗೆ ನಿಶ್ಚಿತವಾದ ನಿಲುವನ್ನು ಹೊಂದಿದ್ದಳು, ಅದಕ್ಕಾಗೇ ವಿಜ್ಞಾನವನ್ನು ತನ್ನ ಜೀವನಕ್ಕಾಗಿ ಆಯ್ದುಕೊಂಡಳು" ಎಂದು ಆಕೆಯ ತಾಯಿ ಮಗಳ ಬಗ್ಗೆ ಹೇಳುತ್ತಿದ್ದರು.

ಯಾರಿವರು ರೋಸಲಿಂಡ್ ಫ್ರಾಂಕ್ಲಿನ್? ಅಷ್ಟು ದೃಢವಾದ ನಿಲುವನ್ನು ಹೊಂದಿದ್ದು ವಿಜ್ಞಾನದಲ್ಲಿ ಕೀಳದವರು ಅನ್ನಿಸಬಹುದು. ನಿಜ ವಿಜ್ಞಾನ ಜಗತ್ತಿನಲ್ಲಿ ಕತ್ತಲ ಮಹಿಳೆಯೆಂದೇ ಗುರುತಿಸಲಾಗುವ, ಆದರೆ ಜೀವಶಾಸ್ತ್ರದ ಆಧುನಿಕ ವಿವರಣೆಗಳಿಗೆ ಮೂಲ ದ್ರವ್ಯವನ್ನು ಒದಗಿಸುವಲ್ಲಿ ಕಾರಣರಾದವರು. ಸಾಮಾನ್ಯವಾಗಿ ನಮ್ಮಲ್ಲಿ ಡಿ.ಎನ್.ಎ. ಕಂಡುಹಿಡಿದವರು ಯಾರು? ಎಂಬ ಪ್ರಶ್ನೆಗೆ ಹೆಚ್ಚಿನ ಮಂದಿ ತತ್‌ಕ್ಷಣವೇ ವ್ಯಾಟ್‌ಸನ್ ಮತ್ತು ಕ್ರಿಕ್ ಎಂದು ಉತ್ತರಿಸುವರು. ಸ್ವಲ್ಪ ಅನುಮಾನಿಸಿದರೆ ಮೌರಿಸ್ ವಿಲ್ಕಿನ್ಸ್ ಎಂದು ಸೇರಿಸಿ ಸಮಾಧಾನಪಡಿಸಬಹುದೇನೋ. ವಿಲ್ಕಿನ್ಸ್‌ರನ್ನು ಸೇರಿಸಿ ಸಮಾಧಾನ ಪಡಿಸುವವರೂ ಕಡಿಮೆಯೆ! ಏಕೆಂದರೆ ಇಡೀ ವಿಜ್ಞಾನದ ಚರಿತ್ರೆಯಲ್ಲಿ ಅಷ್ಟರ ಮಟ್ಟಿಗೆ ವ್ಯಾಟ್‌ಸನ್ ಮತ್ತು ಕ್ರಿಕ್ ಹೆಸರು ಮಾತ್ರವೇ ಡಿ.ಎನ್.ಎ. ಜತೆಗೆ ಪ್ರಚಾರದ ಅಬ್ಬರಕ್ಕೆ ಸಿಕ್ಕಿದೆ. ಯಾರೋ ಅಪರೂಪಕ್ಕೆ ಜೀವ ಜಗತ್ತಿನ ಒಳಹೊರಗನ್ನು ಹಾಗೂ ಹೊಸ ಆಯಾಮಗಳ ಪರಿಚಯವಿದ್ದವರು, ರೋಸಲಿಂಡ್ ಫ್ರಾಂಕ್ಲಿನ್ ಕುರಿತು ಮಾತನಾಡಿಯಾರು. ರೋಸಲಿಂಡ್ ಹೆಸರು ಹೇಳುವವರು ಇಲ್ಲವೇ ಇಲ್ಲ ಎಂದರೆ ಅಚ್ಚರಿ ಏನಲ್ಲ, ಆದರೆ ಡಿ.ಎನ್.ಎ. ಕುರಿತ ಮೊದಲ ಹೊಳಹನ್ನು ಪರಿಚಯಿಸಿದ ವಿಜ್ಞಾನಿ ಇವರು. ಓರ್ವ ಮಹಿಳೆಯಾಗಿ ಮಹಾಯುದ್ಧ ಕಾಲದ ರಸಾಯನಶಾಸ್ತ್ರಜ್ಞೆಯಾಗಿದ್ದು ವಿಜ್ಞಾನವನ್ನೇ ಜೀವನ ಎಂದು ನಂಬಿದ್ದಾಕೆ.


ಅದ್ಭುತ ಪ್ರತಿಭೆಯ ರೋಸಲಿಂಡ್ ಚಿಕ್ಕ ವಯಸ್ಸಿನಲ್ಲೆ ಇಹಲೋಕ ತೊರೆದರು. ಡಿ.ಎನ್.ಎದ ರಚನೆ ಬಗ್ಗೆ ಮೊದಲು ಬೆಳಕು ಚೆಲ್ಲಿದಾಕೆ. ವಿಜ್ಞಾನದ ಇತಿಹಾಸದಲ್ಲಿ ಮೊದಲು ಡಿ.ಎನ್.ಎಯನ್ನು ರಸಾಯನಿಕವಾಗಿ ವಿವರಿಸಿದವರು ಫ್ರೆಡ್ರಿಕ್ ಮಿಶರ್. ವಿಜ್ಞಾನ ಜಗತ್ತಿನಲ್ಲಿ ಡಿ.ಎನ್.ಎ. ಸಂಶೋಧನೆಯು ಹುಟ್ಟಿ ಹಾಕಿದಷ್ಟು ಸಂವಾದಗಳನ್ನು ಮತ್ತೊಂದು ಶೋಧವು ಹುಟ್ಟಿಸಲಾರದು. ಅನಂತರದ ಜೀವ ವಿಜ್ಞಾನದ ಬೆಳವಣಿಗೆಗಳು ಇಂದಿನವರೆವಿಗೂ ನಿರಂತರ ಚರ್ಚೆಗೆ ಕಾರಣಗಳಾಗಿವೆ. ಎಲ್ಲಾ ಚರ್ಚೆಗಳಿಗೂ ಡಿ.ಎನ್.ಎ. ರಚನೆಯ ವಿವರಣೆಯು ನಂತರ ಸಾಕಷ್ಟು ವಸ್ತು ಚರ್ಚೆಗೆ ಸಿಕ್ಕಿದೆ ಎಂಬುದು ಆಶ್ಚರ್ಯವೇನಲ್ಲ. ಚರ್ಚೆಯನ್ನೇ ಮುಂದುವರೆಸುವ ಮೊದಲು ಅದಕ್ಕೆ ಕಾರಣಕರ್ತರಾದ ರೋಸಲಿಂಡ್ ಮತ್ತು ಆಕೆಯು ನಮ್ಮ ಸಾಮಾನ್ಯರ ಚರ್ಚೆಯಲ್ಲಿ ಮತ್ತವರ ತಿಳಿವಿನಲ್ಲಿ ಇರದ ಸಂಗತಿಗಳನ್ನು ನೋಡೋಣ.

ರೋಸಲಿಂಡ್ ಫ್ರಾಂಕ್ಲಿನ್ ಮೂಲತಃ ಓರ್ವ ರಸಾಯನಶಾಸ್ತ್ರದ ವಿದ್ಯಾರ್ಥಿ. ಆಕೆಯೇ ತನ್ನ ವಿಶಿಷ್ಟವಾದ ಕ್ಷಕಿರಣಗಳ ಅಧ್ಯಯನದಿಂದ ತೆಗೆದಿದ್ದ ಜೀವಕೋಶದ ನ್ಯೂಕ್ಲಿಯಸ್‌ನ ಫೋಟೊ ಡಿ.ಎನ್.ಎ ರಚನೆಯ ವಿವರಗಳಿಗೆ ಕಾರಣವಾಗುತ್ತದೆ. ವಿಜ್ಞಾನ ಜಗತ್ತಿನಲ್ಲಿ ಫೋಟೋ-51 ಎಂದೇ ಖ್ಯಾತವಾದ 1951ರಲ್ಲಿ ಕಿಂಗ್ಸ್ ಕಾಲೇಜಿನಲ್ಲಿ ರೋಸಲಿಂಡ್ ಫ್ರಾಂಕ್ಲಿನ್ ಕ್ಷಕಿರಣ ಬಳಸಿ ತೆಗೆದ ಫೋಟೊ ಅದಾಗಿತ್ತು, ಅನಂತರ ಕಾರಣಾಂತರಗಳಿಂದ ಆ ಪ್ರಯೋಗಾಲಯವನ್ನು ರೋಸಲಿಂಡ್ ಬಿಡಬೇಕಾಗಿ ಬರುತ್ತದೆ. ಆ ಫೋಟೊವನ್ನು ಯಾವುದೋ ಕಾರಣಕ್ಕಾಗಿ ಅದೇ ಪ್ರಯೋಗಾಲಯದಲ್ಲಿದ್ದ ಮೌರಿಸ್ ವಿಲ್‌ಕಿನ್ಸ್, ವ್ಯಾಟ್‌ಸನ್ ಮತ್ತು ಫ್ರಾನ್ಸಿಸ್ ಕ್ರಿಕ್ ಅವರಿಗೆ ತೋರಿಸುತ್ತಾರೆ. ಅದರ ಮೂಲ ಸುಳಿವುಗಳನ್ನು ಬಳಸಿ ವ್ಯಾಟ್‌ಸನ್ ಮತ್ತು ಕ್ರಿಕ್ ತಮ್ಮ ಡಿ.ಎನ್.ಎ. ರಚನೆಯನ್ನು ವಿವರಿಸುತ್ತಾರೆ.

ಆದರೆ ನಿಜಕ್ಕೂ ವಿಲ್‌ಕಿನ್ಸ್ ಮತ್ತು ರೋಸಲಿಂಡ್ ಜೊತೆಯಾಗಿ ಕೆಲಸ ಮಾಡಬೇಕಿದ್ದು ದುರದೃಷ್ಟವಶಾತ್ ಹಾಗಾಗದೇ ರೋಸಲಿಂಡ್ ಅನ್ಯಾಯಕ್ಕೆ ಒಳಗಾಗುತ್ತಾರೆ. ಇಲ್ಲದೆ ಇದ್ದಲ್ಲಿ ಮೂಲತಃ ಮೊದಲ ಹೊಳಹಿನ ಚಿತ್ರ ತೆಗೆದೂ ಅಂತಹ ಪ್ರತಿಷ್ಠೆಯ ಸಂಶೋಧನೆಯ ಪ್ರಮುಖರ ಪಟ್ಟಿಯಿಂದ ವಂಚಿತರಾಗುತ್ತಿರಲಿಲ್ಲ, ಮುಂದೆ 1962ರಲ್ಲಿ ವ್ಯಾಟ್‌ಸನ್, ಫ್ರಾನ್ಸಿಸ್ ಕ್ರಿಕ್ ಮತ್ತು ಮೌರಿಸ್ ವಿಲ್‌ಕಿನ್ಸ್‌ಗೆ ಅದೇ ಕಾರಣಕ್ಕಾಗಿ ನೊಬೆಲ್ ಬಹುಮಾನ ಬರುತ್ತದೆ. ಈ ಯಾರೂ ಮೂಲ ಚಿತ್ರದ ಮಾಹಿತಿಯನ್ನು ರೋಸಲಿಂಡ್ ಅವರಿಂದ ಕದ್ದದ್ದು ಎನ್ನುವುದಿರಲಿ, ಅದರಿಂದ ಉತ್ತೇಜಿತರಾದದ್ದೂ ಎಂದೂ ದಾಖಲಿಸುವುದಿಲ್ಲ. ಕ್ಷಕಿರಣಗಳ ಪ್ರಮುಖ ರಸಾಯನಶಾಸ್ತ್ರಜ್ಞೆಯಾಗಿ ಜಗತ್ತಿಗೆ ಪರಿಚಯರಾಗಬಹುದಾಗಿದ್ದ ರೋಸಲಿಂಡ್ ಅಪ್ರೋತ್ತಿಗಾಗಲೇ ಅದೇ ಕ್ಷಕಿರಣಗಳ ವಿಕಿರಣಗಳಿಗೆ ಬಲಿಯಾಗಿ ಕ್ಯಾನ್ಸರ್‌ನಿಂದ ಇಹಲೋಕ ತೊರೆದಿರುತ್ತಾರೆ. ಇಡೀ ಸಂಶೋಧನೆಯನ್ನು ಎಲ್ಲರೂ ಸೇರಿ ಅಂದರೆ ರೋಸಲಿಂಡ್ ತಂಡ, ವಿಲ್‌ಕಿನ್ಸ್ ತಂಡ ಹಾಗೂ ವ್ಯಾಟ್ಸನ್, ಕ್ರಿಕ್ ಒಟ್ಟಾಗಿ ಪ್ರಕಟಿಸುವಂತೆ ಸೂಚನೆಯಿರುತ್ತದೆ ಎಂದೂ ಹೇಳಲಾಗುತ್ತದೆ. ಆದರೆ ಹಾಗಾಗದೆ ವ್ಯಾಟ್ಸನ್ ಮತ್ತು ಕ್ರಿಕ್ ತಮ್ಮದೇ ಸ್ವಂತ ಎಂಬಂತೆ ಸಂಶೋಧನೆಯನ್ನು ಕಳಿಸುತ್ತಾರೆ. ಆಚ್ಚರಿಯೆಂಬಂತೆ ಇನ್ನೆರಡೂ ತಂಡಗಳ ಸಂಶೋಧನಾ ಲೇಖನಗಳೂ ಅದೇ ಪತ್ರಿಕೆಯ ಒಂದೇ ಸಂಚಿಕೆಯಲ್ಲಿ ಒಂದೇ ತಲೆಬರಹದಲ್ಲಿ ಆದರೆ ಉಪಶೀರ್ಷಿಕೆಗಳಷ್ಟೇ ಬೇರೆಯಾದ ಲೇಖನಗಳನ್ನು



ಸಾಧನೆಯನ್ನು ಮಾಡಿದವರು. ಜೀವ ಜಗತ್ತಿಗೆ ವಿಶೇಷ ಅನ್ನಿಸುವಂತಹ ಡಿ.ಎನ್.ಎದ ರಚನೆಯ ಕುರಿತ ಮೂಲ ಚಿತ್ರವನ್ನು ಪಡೆದು ಅದರ ಒಟ್ಟಾರೆ ರಚನೆ ಅರ್ಥೈಸಿಕೊಳ್ಳಲು ಕಾರಣರಾದ ವಿಜ್ಞಾನಿ. ಅಗಿನ ಕಾಲದಲ್ಲಿನ್ನೂ ಮಹಿಳೆ ಎಂಬ ಕಾರಣಕ್ಕೆ ದೊರೆಯಬೇಕಾದ ಮನ್ನಣೆ ಸಿಗದಿದ್ದ ಪರಿಸ್ಥಿತಿ. ಆದರೂ ಧೈರ್ಯಗೆಡದೆ ವಿಜ್ಞಾನದಲ್ಲಿ ತನ್ನ ಛಾಪು ಮೂಡಿಸಿ ಚಿಕ್ಕ ವಯಸ್ಸಿನಲ್ಲೇ ಅಪಾರ ಸಾಧನೆಯನ್ನು ಮಾಡಿದ್ದ ಹೆಣ್ಣು ಮಗಳು. ಕೇವಲ ತನ್ನ 16 ವರ್ಷದ ಸಾಧನೆಯಲ್ಲಿ ಅತ್ಯಂತಿಕ ಪರಿಣಾಮಕಾರಿಯಾದ ಸಂಗತಿಯನ್ನು



ಜಗದ್ವಿಖ್ಯಾತ ವಿಜ್ಞಾನ ಪತ್ರಿಕೆ "ನೇಚರ್" ಪ್ರಕಟಿಸುತ್ತದೆ. ಮೂರೂ ಸಂಶೋಧನಾ ಪ್ರಬಂಧಗಳು ಒಂದಾದರೊಂದಂತೆ ನಿರಂತರವಾಗಿ 1953ರ ಏಪ್ರಿಲ್ 15ರ ಸಂಚಿಕೆಯಲ್ಲಿ ಪ್ರಕಟವಾಗುತ್ತವೆ. ಸಾಲದಕ್ಕೆ ನೇಚರ್ ಪತ್ರಿಕೆಯು ಎಲ್ಲಾ ಮೂರು ಲೇಖನಗಳನ್ನು ಒಂದೇ ದಿನ ಏಪ್ರಿಲ್ 3 ರಂದೇ ಸ್ವೀಕರಿಸಿದ್ದಾಗಿಯೂ ಸಾರಿತು. ಇದು ಹೇಗೆ ಸಾಧ್ಯವಾಯಿತು ಎಂಬುದೇ ವಿಸ್ಮಯ ಹಾಗೂ ಸತ್ಯಕ್ಕೆ ಸಂದ ಗೌರವ ಕೂಡ.

ಆದರೆ ಎಲ್ಲಾ ಸಂಶೋಧನಾ ಪ್ರಬಂಧಗಳಿಗೂ ಮೂಲ ಮಾಹಿತಿಯಾಗಿ ಉತ್ತೇಜಿತವಾಗಿದ್ದ ರೋಸಲಿಂಡ್ ತೆಗೆದ ಫೋಟೋ-51 ಬಗೆಗಾಗಲಿ ಅಥವಾ ಆಕೆಯ ಹಿಂದಿನ ಆವೆರಿ ಮತ್ತವರ ತಂಡದ ಬಗ್ಗೆಯಾಗಲಿ ಯಾರೂ ಚಕಾರವೆತ್ತುವುದಿಲ್ಲ. ವಿಜ್ಞಾನದ ಅನ್ವೇಷಣೆಗಳು ಸಾಮಾನ್ಯವಾಗಿ ಸಂಚಿತವಾದವು. ಹಿಂದಿನ ಶೋಧಗಳ ತಲೆಯ ಮೇಲೆ ಮುಂದಿನ ಶೋಧವು ಎದ್ದು ಕಾಣುತ್ತದೆ. ಆದರೆ ಬುಡದಲ್ಲಿನ ಹಳೆಯ ನೆನಪುಗಳಿಗೂ ಪ್ರಮುಖ ಸ್ಥಾನವಿರುತ್ತದೆ. ಆದರೆ ಇಲ್ಲಿ ಹಾಗಾಗದೆ, ಕೇವಲ ವ್ಯಾಟ್ಸನ್ ಮತ್ತು ಕ್ರಿಕ್ ಹಾಗೂ ವಿಲ್‌ಕಿನ್ಸ್ ಪ್ರಮುಖರಾಗಿ ನೊಬೆಲ್ ಗಳಿಸುತ್ತಾರೆ. ಇದರ ಚರ್ಚೆಯು ನಿರಂತರವಾಗಿ ಹತ್ತಾರು ವರ್ಷ ಮುಂದುವರೆದು ವಿಜ್ಞಾನ ಇತಿಹಾಸದಲ್ಲಿ ಚರ್ಚೆಗೆ ಮಾಹಿತಿಯನ್ನು ಒದಗಿಸಿದ ಶೋಧವೆಂದೇ ಹೆಸರಾಗಿದೆ. ಮೂಲ ಮಾಹಿತಿಯನ್ನು ಒದಗಿಸಿದ ಮತ್ತು ವಿಜ್ಞಾನದಲ್ಲಿ ಸಾಮಾನ್ಯರ ತಿಳಿವಿನಲ್ಲಿರದ ಅದ್ಭುತ ಪ್ರತಿಭೆ ರೋಸಲಿಂಡ್ ಫ್ರಾಂಕ್ಲಿನ್.

ಹೀಗೆ ಅತ್ಯದ್ಭುತ ಕೊಡುಗೆಯಿಂದ ಜನಸಾಮಾನ್ಯರಲ್ಲೂ ಉಳಿಯಬಹುದಾಗಿದ್ದ ರೋಸಲಿಂಡ್ ಕೇವಲ 37ನೆಯ ವಯಸ್ಸಿನಲ್ಲೇ ಬದುಕಿನ ವ್ಯಾಪಾರ ಮುಗಿಸಿದ್ದು ದುರಂತವೇ. ಅವರ ವೈಜ್ಞಾನಿಕ ಶೋಧ ಮತ್ತು ಕೊಡುಗೆಗಳ ಬಗೆಗೆ ಅವಶ್ಯವಾಗಿ ವಿಜ್ಞಾನದ ಓದುಗರು ತಿಳಿಯಬೇಕು. ಹಾಗೆಂದೇ ಅವರ ಕುರಿತಾದ ಅನುರಣ ಇಲ್ಲಿದೆ.

ರೋಸಲಿಂಡ್ ಫ್ರಾಂಕ್ಲಿನ್ ಅಪಾರ ಪ್ರತಿಭೆಯ ರಸಾಯನಶಾಸ್ತ್ರಜ್ಞೆ, ತನ್ನ ಚಿಕ್ಕ ವಯಸ್ಸಿನಲ್ಲೇ ಮಹತ್ವದ ಸಾಧನೆಯನ್ನು ಮಾಡಿದವರು. ...

ವಿಜ್ಞಾನಕ್ಕೆ ಕೊಡುಗೆಯಾಗಿ ನೀಡಿಯೂ ಅದರ ಫಲವನ್ನು ಅನುಭವಿಸದೇ ಇಹಲೋಕ ತ್ಯಜಿಸಿದ ಹೆಣ್ಣುಮಗಳು. ಇದು ಆಕೆ ಓರ್ವ ಹೆಣ್ಣುಮಗಳೂ ಎಂಬ ಕಾರಣವೂ ಆಗಿದ್ದು ಆದರೂ ಅಪಾರ ಮನ್ನಣೆಯನ್ನು ತನ್ನ ಜೀವಿತಾವಧಿಯ ನಂತರ ಗಳಿಸಿದಾಕೆ.


ಕಲ್ಲಿದ್ದಲು ಮತ್ತು ಇಂಗಾಲದ ಸಂರಚನೆಯ ಕುರಿತ ಅಧ್ಯಯನದಲ್ಲಿ ಅಪಾರ ಸಾಧನೆ ಮಾಡಿ ರಸಾಯನಿಕ ಶೋಧದಲ್ಲಿ ತನ್ನ ಛಾಪು ಮೂಡಿಸಿದಾಕೆ. ಡಿ.ಎನ್.ಎ. ಕುರಿತ ಆಕೆಯ ಕ್ಷಕಿರಣದ ಫೋಟೊವಿನಿಂದಾಗಿ ವಿಜ್ಞಾನ ಜಗತ್ತಿನಲ್ಲಿ ತನ್ನ ಜೀವಿತಾವಧಿಯ ನಂತರ ಹೆಸರು ಮಾಡಿದ ಹೆಣ್ಣು ಮಗಳು. ಅನಂತರ ವೈರಸ್ಸು ಕುರಿತ ಅಧ್ಯಯನದಲ್ಲೂ ತನ್ನ ಇರುವನ್ನು ಸಾಬೀತುಮಾಡಿದ ಹೆಣ್ಣು ಮಗಳು. ವೈರಸ್ಸುಗಳ ಅಧ್ಯಯನದಲ್ಲಿ ಸಾಕಷ್ಟು ಮನ್ನಣೆ ಗಳಿಸಿದ್ದರೂ, ಜೀವದ ಮೂಲ ದ್ರವ್ಯವಾದ ಡಿ.ಎನ್.ಎ. ಕುರಿತ ಆಕೆಯ ಮೂಲ ಸಂಶೋಧನೆಯು ಬಹಳ ಕಾಲದವರೆಗೂ ಆಕೆಯದೆಂದು ಪ್ರಚಲಿತವಾಗಲಿಲ್ಲ. ಹಾಗಾಗಿ ಒಂದು ರೀತಿಯ ಕತ್ತಲ ಮಹಿಳೆಯೆಂದೇ ವಿಜ್ಞಾನ ಲೋಕ ಆಕೆಯನ್ನು ಕರೆದಿದೆ. ಕಲ್ಲಿದ್ದಲು ರಸಾಯನ ಶಾಸ್ತ್ರ ಮತ್ತು ವೈರಸ್ಸುಗಳ ಅಧ್ಯಯನದಲ್ಲಿ ಅಪಾರ ಸಾಧನೆಯನ್ನು ಮಾಡಿದ್ದ ಮಹಿಳೆ ಎಂಬ ಕಾರಣಕ್ಕಾಗಿ ಎಲ್ಲರ ಅಸೂಯೆಗಳಿಗೆ ಒಳಗಾಗಿ ನೋವು ಅನುಭವಿಸಿದ ಅಪಾರ ಬುದ್ಧಿಮತ್ತೆಯ ಮಹಿಳಾ ವಿಜ್ಞಾನಿ.

ಈ ಇಡೀ ವಿಚಾರವನ್ನು ಇತಿಹಾಸವನ್ನು ಓದುವಾಗ ಅನ್ನಿಸುವುದು ಹೀಗೆ. ಜಗತ್ತೆಲ್ಲಾ ವ್ಯಾಟ್‌ಸನ್ ಕ್ರಿಕ್ ಮಾದರಿ ಎಂದೇ ಹಾಡಿ ಹೊಗಳುವುದು. ಆದರೆ ಫೋಟೋ 1951 ಉಪಾಯ ಹೇಳಿಕೊಡದಿದ್ದರೆ ವಿಲ್‌ಕಿನ್ಸ್‌ಗೆ ಕೂ[...] ಸುಳಿವು ಸಿಗುತ್ತಿರಲಿಲ್ಲ. ಇನ್ನೊಂದು ವಿಚಾರ, ರೋಸ್‌ಲಿಂಡ್ ವಿಲ್‌ಕಿನ್ಸ್ ಒಂದೇ ಪ್ರಯೋಗಾಲಯದಲ್ಲಿದ್ದರೂ ಒಮ್ಮತವಿರಲಿಲ್ಲ, ಸ್ನೇಹವಿರಲಿಲ್ಲ, ಅವರೀರ್ವರ ಈಷ್[...] ಮೂರನೆಯವರಿಗೆ ಅದೂ ವಿಲ್‌ಕಿನ್ಸ್‌ನಿಂದಾ[...] ಲಾಭವಾಯ್ತು. ಇಲ್ಲದಿದ್ದರೆ ಫ್ರಾಂಕ್ಲಿನ್ ಮತ್ತು ವಿಲ್‌ಕಿನ್[...] ಮಾದರಿ ಎಂದೇ ನಾವೆಲ್ಲ ಅರಿಯಬೇಕಿತ್ತು.

ಜೀವಸೃಷ್ಟಿಯ ರಹಸ್ಯ ಭೇದಿಸಲು ಜೀವಕ[...] ಒಳಹೊಕ್ಕು ನೋಡುವ ಹುಡುಕಾಟದಲ್ಲಿ ಸಂಶೋಧನೆಯ[...] ಜೀವನ ಎಂದು ನಿರಂತರ ಕ್ಷಕಿರಣಗಳ ಬಳಕೆಯಲ್ಲಿ[...] ರೋಸಲಿಂಡ್‌ಗೆ ಆ ಕ್ಷಕಿರಣಗಳೇ ಮಾರಕವಾದವು. ಅದ[...] ನಿರಂತರ ಬಳಕೆಗೆ ಮೈವೊಡ್ಡುವಿಕೆಯಿಂದಾಗಿ ಕ್ಯಾನ್ಸರ್[...] ತುತ್ತಾಗಿ 1958 ರಲ್ಲಿ ಏಪ್ರಿಲ್‌ನಲ್ಲಿ 37 ಎಳೆ[...] ವಯಸ್ಸಿನಲ್ಲೇ ಇಹಲೋಕ ತ್ಯಜಿಸಿದರು. 1952 ರ ನಂ[...] ವೈರಸ್ ಸಂಶೋಧನೆಯಲ್ಲಿ ನಿರತಳಾಗಿದ್ದಳು. ಆಕೆ[...] ಸಮಾಧಿಯ ಮೇಲಿನ ಸ್ಮರಣೆಯ ಬರಹದಲ್ಲೂ ವೈರ[...] ಸಂಶೋಧನೆಯ ಪ್ರಸ್ತಾಪವಿದೆಯೆ ವಿನಃ ಡಿ.ಎನ್.ಎ ರಚ[...] ಆಕೆಯ ಕೊಡುಗೆಯ ಪ್ರಸ್ತಾಪವಿಲ್ಲದೆ ಹೋಗಿದೆ.

1952ರಲ್ಲಿ ವ್ಯಾಟಸನ್, ಕ್ರಿಕ್ ಮತ್ತು ಮೌರಿ[...] ವಿಲ್‌ಕಿನ್ಸ್‌ಗೆ ನೋಬಲ್ ಬಹುಮಾನ ಬಂತು. [...] ವೇಳೆಗಾಗಲೇ ರೋಸಲಿಂಡ್ ಬದುಕಿರಲಿಲ್ಲ. ನಂತ[...] ಸಾಲದೆಂಬಂತೆ ವ್ಯಾಟಸನ್ ಹಾಗೂ ಕ್ರಿಕ್ ತಮ[...] ಬರಹದಲ್ಲೂ ಆಕೆಯ ಕುರಿತು ಒಳ್ಳೆಯ ಮಾತುಗಳನ್ನಾಡಿ[...] 1952 ರಲ್ಲಿ ಮಾದರಿ ಬರಹ ಪ್ರಕಟಗೊಂಡಾಗ ಅ[...] ತಂಡದವರು, ತೀವ್ರಯಾತನೆ ಅನುಭವಿಸಿದರು. ಕಾರ[...] ಅವರೇ ಅನುವಂಶಿಕ ಗುಣದ ಪ್ರಸ್ತಾಪ ಮಾಡಿ ಜಗತ್ತ[...] ಡಿ.ಎನ್.ಎ ರಚನೆಯ ಕಡೆಗೆ ಗಮನ ಸೆಳೆದವರು. ಆ[...] ತಂಡದವರಲ್ಲಿ ಒಬ್ಬರಾದ ಮಾಕಲೀಡ್ ಕಾಲಿ[...] ಸಹೋದ್ಯೋಗಿಗೆ ಬರೆಯುತ್ತಾ ದುಃಖದ ಸಂದರ್ಭದ[...] ಪಾಲುದಾರರು, ನಾವು ಇಂದು ಸಂಶೋಧಿಸದಿದ್ದರೆ ನ[...] ಮತ್ತೊಂದು ದಿನ ಯಾರಾದರೂ ಸಂಶೋಧನೆಯ[...] ಮಾಡುತ್ತಿದ್ದರಲ್ಲವೇ ಎಂದು ಸಮಾಧಾನಪಟ್ಟುಕೊಂಡ[...]

ಫ್ರಾಂಕ್ಲಿನ್ ಅವರ ಸಂಶೋಧನೆಯನ್ನು ಪ್ರಮುಖವ[...] ಕಲ್ಲಿದ್ದಲ ರಸಾಯನಶಾಸ್ತ್ರ ಮತ್ತು ವೈರಸ್‌ಗಳ ರಚನೆ[...] ತಿಳಿವಿನಲ್ಲಿ ಅಪಾರ ಗೌರವದಿಂದ ಗುರುತಿಸಲಾಗುತ್ತಿ[...] ಆದರೂ ಜೀವಶಾಸ್ತ್ರದ ಮೂಲರಚನೆಯ ವಿವರಣೆಯ[...] ಸಾಮಾನ್ಯ ಜ್ಞಾನದಿಂದ ಆಕೆಯ ಹೆಸರು ವಂಚಿತವಾಗಿ[...] ಅಪಾರ ತಿಳಿವಳಿಕೆಯವರು ಮಾತ್ರವೇ ಆಕೆಯ ವೈಜ್ಞಾ[...] ಕೊಡುಗೆಯನ್ನು ಗುರುತಿಸಿ ಮಾತಾಡಬಲ್ಲವರಾದ[...] ಸಾಮಾನ್ಯ ವೈಜ್ಞಾನಿಕ ಜಗತ್ತಿಗೆ ಆಕೆಯ ಕೊಡುಗೆ ತಿಳಿಯ[...] ಹೋಗಿದೆ. ಮಹಿಳೆ ಎಂಬ ಕಾರಣಕ್ಕಾಗಿ ಆ ಕಾ[...] ಅಸೂಯೆಗಳಿಗೆ ಬಲಿಯಾದ ಮಹಿಳೆ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ನಿರಾಭರಣ ಬುದ್ಧ

ಬುದ್ಧನ ಬಗ್ಗೆ ವೈದಿಕರು ವಿಷ್ಣುವಿನ ...ವತಾರವೆಂದು ನಂಬಿಸಲು ಏನೇನೆಲ್ಲಾ ಕಥೆ ...ದರೋ, ಬುದ್ಧನ ಮೇಲಿನ ಭಕ್ತಿ ಮತ್ತು ...ತಿಯಿಂದಲೂ ಸಂಸ್ಕೃತ ರಚನಾಕಾರರು ಅತಿಯಾದ ...ತ್ಪ್ರೇಕ್ಷೆಯಿಂದ ಕಥೆ ಕಟ್ಟಿದರು. ಅದು ...ಂದುವರೆದು ಬೌದ್ಧರೇ ಮೊದಲಾಗಿ ಇತರರೂ ...ಕ್ಕೊಂಡಿರು. ಅಶ್ವಘೋಷ ಸುಮಾರು ಒಂದನೇ ...ಮಾನದ ಪ್ರಾಚೀನ ಕವಿ. ತನ್ನ ಕಾವ್ಯದಲ್ಲಿ ಅನೇಕ ...ಪಕಗಳಲ್ಲಿ ಬಹು ಸುಂದರವಾಗಿ ಮತ್ತು ...ತ್ಪ್ರೇಕ್ಷಾಪೂರ್ಣವಾಗಿ ಬುದ್ಧ ಚರಿತವನ್ನು ರಚಿಸಿದ್ದಾನೆ. ...ಮತ್ಕಾರಗಳ ಉಕ್ತಿಗಳು ಮತ್ತು ಹಾಡಲು ...ೋಗ್ಯವಾಗಿರುವಂತಹ ಕಾವ್ಯಗಳ ರಚನೆಯನ್ನು ...ದರಲ್ಲಿ ಮಾಡಿರುವನು. ಆತನು ನಾಟಕಕಾರನೂ ...ದ್ದನಂತೆ. ಕಾರಣಾಂತರಗಳಿಂದ ಹಸಿದು ಊಟವನ್ನು ...ಡದೇ ಇದ್ದ ಕುದುರೆಗಳು ಇವನ ...ರ್ಮವಾಕ್ಯಗಳನ್ನು ಕೇಳಿದ್ದರಿಂದ ಅವನಿಗೆ ...ಶ್ವಘೋಷನೆಂದು ಕರೆಯಲಾಯಿತೆಂದು ಆತನ ...ಗಿರುವ ದಂತಕಥೆ. ಹುಟ್ಟಿದಾರಭ್ಯ ...ಬ್ರಹ್ಮಣನಾಗಿದ್ದರೂ ನಂತರ ಬೌದ್ಧಧರ್ಮದ ...ರ್ನಾಸ್ತಿವಾದಕ್ಕೆ ಮನಸೋತು ಬೌದ್ಧಾಚಾರ್ಯನಾದ.

...ಶ್ವಘೋಷನ ಬುದ್ಧಚರಿತ

ಆದರೆ ಉತ್ಪ್ರೇಕ್ಷೆ ಎನ್ನುವುದೋ, ...ವ್ಯಾಲಂಕಾರವೆನ್ನು ವುದೋ, ರೂಪಕಗಳೆನ್ನುವುದೋ ...ಥವಾ ಸಂಸ್ಕೃತ ಕಾವ್ಯ ಸಹಜ ಶೈಲಿ ಎನ್ನುವುದೋ, ...ಥವಾ ಇವೆಲ್ಲದರ ಸಂಗ್ರಹವೋ, ಒಟ್ಟಿನಲ್ಲಿ ...ದ್ಧಚರಿತವು ಅತ್ಯುತ್ಪ್ರೇಕ್ಷೆಯಿಂದ ಕೂಡಿದ್ದು ಪೌರಾಣಿಕ ...ದ್ಧನನ್ನಾಗಿ ರೂಪಿಸಿದೆ. ಈತನೇ ಶಾಕ್ಯರ ವಂಶವನ್ನು ...ಕ್ಷ್ವಾಕು ವಂಶಕ್ಕೆ ಸೇರಿಸುವುದು. ತಾಯಿ ...ಾಯಾದೇವಿ ಎಂಬುದು ಆಕೆಯ ನಿಜವಾದ ...ಸರೋ ಅಥವಾ ಲೌಕಿಕ ಜಗತ್ತಿನ ...ಮರುಳುವಿಕೆಯನ್ನು ಮಾಯಾ ಎಂದು ಕರೆದು, ...ಾಯೆಯಿಂದ ಕೂಡಿದ ಜಗತ್ತಿನಲ್ಲಿ ಬುದ್ಧನು ...ಟ್ಟಿದನೆಂದು ಹೇಳುವನೋ ಒಟ್ಟಾರೆ ...ತಿಯೊಂದನ್ನೂ ರೂಪಕದಲ್ಲಿ ಹೇಳುತ್ತಾ ...ೋಗುವನು. ಹೆರಿಗೆ ನೋವು ಕೊಡದೆಯೇ ಬುದ್ಧ ...ಟ್ಟಿದ ಮತ್ತು ಹುಟ್ಟಿದ ಕೂಡಲೇ ನಡೆದು ಜಗತ್ತಿನ ...ಳಿತಿಗಾಗಿ ಹುಟ್ಟಿದ್ದೇನೆ ಎಂದು ಹೇಳುತ್ತಾ ತನ್ನ ...ನನ ಮತ್ತು ಜೀವಿತದ ಉದ್ದೇಶವನ್ನು ಸ್ವಯಂ ...ದ್ಧನೇ ಘೋಷಿಸುವಂತೆ ಮಾಡುವ ಅಶ್ವಘೋಷ ...ಮುಂದಿನ ಬುದ್ಧನ ಜೀವನ ಮತ್ತು ಸಾಧನೆಗಳನ್ನು ...ತ್ಯಂತ ಕಾವ್ಯಮಯವಾಗಿ ಕಟ್ಟಿಕೊಡುತ್ತಾ, ವ್ಯಕ್ತಿತ್ವದ ...ಗ್ಗೆಯೂ ಅಷ್ಟೇ ಪ್ರೀತಿಯಿಂದ ತನ್ನ ರಚನೆಯಲ್ಲಿ ...ೇಳುತ್ತಾನೆ. ಆದರೆ ಇದು ಮತ್ತೆ ಎಂದಿನಂತೆ ...ವ್ಯರೂಪಕಗಳಿಗೂ ಮತ್ತು ಪೌರಾಣಿಕ ...ರಿಕಲ್ಪನೆಗಳಿಗೂ ನಡುವಿನ ಗೆರೆ ಅಳಿಸಿಹೋಗಿ ...ದ್ಧನ ಕಥೆಯೂ ಜನಸಾಮಾನ್ಯರಲ್ಲಿ ಕಾಗಕ್ಕ ಗುಬ್ಬಕ್ಕನ ...ಥೆ ಆಗಿಯೇ ಉಳಿದುಹೋಗುವುದು ಒಂದು ...ದುರಂತ. ವೃದ್ಧನಾದ ಅಸಿತ ಮಹರ್ಷಿಯು ...ಾಗುವನ್ನು ನೋಡಿ ತಾನು ಈ ಮಗುವು ಬೆಳೆದು ...ದ್ಧನಾಗಿ ನೀಡುವಂತಹ ಜ್ಞಾನವನ್ನು ಸ್ವೀಕರಿಸದೇ ...ೋಗುವೆನಲ್ಲಾ ಎಂದು ದುಃಖಿಸುವುದು ...ತ್ಯಾದಿಗಳೆಲ್ಲಾ ನಾಯಕಪ್ರಧಾನ ಚಿತ್ರದ ನಾಟಕೀಯ ...ಂಶಗಳೇ ಆಗುತ್ತವೆ.

ಮುಂದೆ ಸಿದ್ಧಾರ್ಥನು ವಿಹಾರ ಯಾತ್ರೆ ...ಮಾಡುವಾಗ. ಪರಿಶುದ್ಧ ದೇವತೆಗಳ ಪ್ರಭಾವದಿಂದ ...ಮುಪ್ಪು, ರೋಗ ಮತ್ತು ಸಾವುಗಳ ದೃಶ್ಯಗಳನ್ನು ...ೋಡುವುದಾಗಿ ಹೇಳುವ ಅಶ್ವಘೋಷನು ವೈದಿಕರ ...ೌರಾಣಿಕ ಕಲ್ಪನೆಗಳಿಂದ ಏನೇನೂ ಹೊರಬಂದಿಲ್ಲ ...ೊತೆಗೆ ಪದ್ಮವನದಲ್ಲಿ ಪ್ರವೇಶಿಸುವ ಅವನಿಗೆ ...ಂದುಳ್ಳ ಚೆಲುವೆಯರು ಅವನ ಮನಸ್ಸನ್ನು ಕಲಕಲು ...ರುವುದು, ಅವನು ಅದಕ್ಕೆ ಮನಸೋಲದೇ ...ರುವುದು ಇವೆಲ್ಲವೂ ಮನಸ್ಸಿಗೆ ಸಂಬಂಧಪಟ್ಟದ್ದು ...ಂದು ಎಲ್ಲವನ್ನೂ ಮಾನಸಿಕ ಸ್ಥಿತಿಗೆ ತರುತ್ತಾನೆ. ಆ ...ಂಗನೆಯರನ್ನು ಬುದ್ಧನಿಂದ ಮನೋರಥರೆಂದು ಕರೆಸುವ ...ಮೂಲಕ ಬುದ್ಧನ ಚಿಂತನಾಲಹರಿಯನ್ನು, ದೃಷ್ಟಿಯನ್ನು ...ಮನಗರಿಗೆ ಮುಟ್ಟಿಸುವ ಪ್ರಯತ್ನ ಮಾಡುತ್ತಾನೆ. ...ಂದ ಸುಂದರವಾದ ಮತ್ತು ಆಳವಾದ ...ಗ್ರಹಿಕೋಳಸೆಂದರೆ ತನ್ನ ವಿಷಯದಲ್ಲಿ ಹುಟ್ಟುವ ...ನೋಭಾವನೆಗಳನ್ನೂ ಮತ್ತು ಲೌಕಿಕಮಾಯೆಯ ...ಕೆತನ್ನೂ ಅವನು ಬಹಳ ಕುಸುಕರದಿಂದಲೇ ...ುತ್ತಾನೆ. ಇದೊಂದು ಬಹು ಸುಂದರವಾದ ರೂಪಕ. ತನ್ನ ಮನಸ್ಥಿತಿಯಲ್ಲಿ ಉಂಟಾಗುವ ತಲ್ಲಣಗಳನ್ನು, ಮೋಹ ಮತ್ತು ಸೆಳೆತಗಳನ್ನು ಶತ್ರುವೆಂದು ಗುರುತಿಸಿ ಅದನ್ನು ಹೊರಗೆ ಹಾಕಲು ಹೋರಾಡುವ ದೃಶ್ಯವನ್ನು ಕಟ್ಟಿಕೊಡದೇ, ಅವನ್ನೂ ಪಾಪದವೆಂದು ಗಮನಿಸಿ ಅವುಗಳಿಗೆ ಮಣೆ ಹಾಕದೇ, ಖಂಡಿಸಿ ನಿಂದಿಸದೇ, ಅವುಗಳ ಪಾಡಿಗೆ ಅವುಗಳು ಹಾದುಹೋಗಲು ಬಿಡುವ ಮೂಲಕ ಬುದ್ಧನು ತನ್ನದೇ ವಾಂಛಿತದ ಸೆಳೆತಗಳಿಗೂ ಕರುಣಾಮೂರ್ತಿಯಾಗುತ್ತಾನೆ.

ಮುಂದೆ ಕಪಿಲವಸ್ತುವನ್ನು ತೊರೆದು ಹೋಗುವ ಬುದ್ಧನು ತನ್ನನ್ನು ಹುಡುಕಿಕೊಂಡುಬರುವ ಮಂತ್ರಿ ಪುರೋಹಿತರಿಗೆ ಜ್ಞಾನ ನೀಡುತ್ತಾನೆ. ನಂತರ ಅನೇಕಾನೇಕ ಋಷಿಗಳನ್ನು ಕಂಡು ಮಾತನಾಡುತ್ತಾ, ವಿಷಯಗಳನ್ನು ತಿಳಿಯುತ್ತಾ ಮುಂದೆ ಅರಾಡನೆಂಬ ಮುನಿಯಿಂದ ಸಾಂಖ್ಯ ಸಿದ್ಧಾಂತದ ಬಗ್ಗೆಯೂ ತಿಳಿಯುತ್ತಾನೆ. ಹೀಗೆಯೇ ಕಥೆಯೂ ಮತ್ತು ಬುದ್ಧನ ಬಗ್ಗೆ ತಿಳಿವಳಿಕೆಯೂ ಸಾಗುತ್ತಾ ಹೋಗುತ್ತದೆ.

ಬುದ್ಧನಿಗೆ ಜ್ಞಾನೋದಯವಾಗುವವರೆಗೂ ಹೋಗುವ ಬುದ್ಧ ಚರಿತೆ ಸಂಸ್ಕೃತದಲ್ಲಿ ಮುಗಿದರೆ, ಮುಂದೆ ಚೀನಿ ಮತ್ತು ಟಿಬೆಟನ್ ಭಾಷಾಂತರಗಳಲ್ಲಿ ಬುದ್ಧನ ಧರ್ಮಬೋಧೆ, ಅವನ ದೈಹಿಕ ಅವಶೇಷಗಳ ಕುರಿತಾಗಿ ನಡೆದ ಸಂಘರ್ಷಗಳ ಕತೆಗಳನ್ನೂ ನೋಡಬಹುದಾಗಿದೆ. ಈ ಭಾಷಾಂತರಗಳು ಪ್ರಾಯಶಃ ಅಶೋಕನ ಕಾಲದಲ್ಲಿ ಅಥವಾ ನಂತರದ ಕಾಲದಲ್ಲಿ ರಚಿತವಾಗಿರಬಹುದು ಎನಿಸುತ್ತದೆ. ಏಕೆಂದರೆ ಅವುಗಳಲ್ಲಿ ಅಶೋಕನ ಬಗ್ಗೆಯೂ ಉಲ್ಲೇಖವಾಗಿದೆ.


ಸೌಂದರನಂದ ಎಂಬ ಅಶ್ವಘೋಷನ ಕೃತಿ ಪ್ರಾಯಶಃ ಮೊದಲನೆಯ ಕೃತಿ ಇರಬಹುದೆಂದು ಅಭಿಪ್ರಾಯಪಡುತ್ತಾರೆ. ಮಹಾವಗ್ಗ ಮತ್ತು ನಿದಾನಕಥಾ ಎಂಬ ಬೌದ್ಧಗ್ರಂಥಗಳಲ್ಲಿ ಬರುವಂತಹ ಬುದ್ಧನ ಬಲತಮ್ಮನಾದ ನಂದನ ಅಯೋಮಯವಾದಂತಹ ಬೌದ್ಧ ಬಿಕ್ಕುವಿನ ಜೀವನದ ಬಗ್ಗೆ ಹೇಳುವಂತಹ ಕಥೆಯಾಗಿದೆ.




ಅಸ್ತಿತ್ವಕ್ಕೊಂದು ದೃಷ್ಟಿ ಎಂಬುದು ಇದೆ ಎಂದು ಭಾವಿಸಿಕೊಂಡರೆ, ಆ ದೃಷ್ಟಿಯಲ್ಲಿ ಅಸ್ತಿತ್ವದಲ್ಲಿರುವವಲ್ಲೆಲ್ಲಾ ಅವುಗಳು ಹೇಗಿವೆಯೋ ಹಾಗೆಯೇ ಇರುವವು. ಅವಕ್ಕೆ ಯಾವುದೇ ಗುಣವಾಚಕಗಳು ಇರುವುದಿಲ್ಲ. ಯಾವುದೇ ಗುಣವಾಚಕಗಳೂ ತನಗಿರುವ ಮನೋಭಾವದಿಂದ, ದೃಷ್ಟಿಕೋನದಿಂದ ಆರೋಪಿಸುವಂತಹುದ್ದು. ಹಾಗಾಗಿ ಯಾವ ಆರೋಪವನ್ನೂ ಮಾಡದೇ, ಯಾವ ಗುಣವಿಶೇಷಗಳಿಗೂ ಒಳಗಾಗದೇ ಇರುವಂತಹ ಅಸ್ತಿತ್ವವೇ ಮೂರ್ತಿ ರೂಪದಲ್ಲಿ ಯಥಾಗತ ಎಂದು ಕರೆಯಿಸಿಕೊಳ್ಳುತ್ತಾನೆ.

ಕೈಲಾಸದಿಂದಿಳಿವ ಬಸವಣ್ಣ

ತನ್ನದೇ ಮೌಲ್ಯ ಮತ್ತು ಚಿಂತನೆಗಳ ಸ್ಫೂರ್ತಿಯಿಂದ, ಸಮಾಜದಲ್ಲಿ ಇರುವ ತಾರತಮ್ಯಕ್ಕೆ ಉತ್ತರ ಕೊಡುವ ಸ್ಪಷ್ಟತೆಯಿಂದ, ಮೌಢ್ಯದ





ತೆರೆಯಿಂದ ತನ್ನದೇ ಸಹಜೀವಿಗಳನ್ನು ವಾಸ್ತವ ಚಿಂತನೆಗಳಿಗೆ ಹಚ್ಚುವ, ಪುರಾತನರ ಅಧ್ಯಾತ್ಮದ ಪ್ರಯೋಗಶಾಲೆಯಲ್ಲಿ ಒಳಗೀಡಾದ ಪರಿಕಲ್ಪನೆಗಳನ್ನು ತಮ್ಮ ಮಂಟಪದಲ್ಲಿಯೂ ಅನುಭವದ ಮೂಸೆಯೊಳಗೆ ಹಾಯಿಸಿ ಕಾಯಿಸುವಂತಹ ಕೆಲಸಗಳನ್ನು ಮಾಡಿದ ಬಸವಣ್ಣನೆಂಬ ಕ್ರಾಂತಿಕಾರಿ ಅಧಿಕಾರಿ ಅದೆಷ್ಟೋ ಸಾಮಾಜಿಕ ದೊಂಬಿಗೆ ಮತ್ತು ರಾಜಕೀಯ ಕುತಂತ್ರಕ್ಕೆ ಬಲಿಯಾಗಿ ತೆರಳಬೇಕಾಯ್ತು. ಬಸವಣ್ಣನಿಗೆ ಜಾತಿಯಲ್ಲಿ ಸಾಮಾಜಿಕ ಸ್ಥಾನಮಾನ ಮತ್ತು ಅಧಿಕಾರವಿರದೇ ಹೋಗಿದ್ದ ಪಕ್ಷದಲ್ಲಿ ಸಂವಿಧಾನದ ಬೆಂಬಲ ಮತ್ತು ಕಾನೂನು ವ್ಯವಸ್ಥೆಗಳು ಈಗಿರುವ ಹಾಗಿಲ್ಲದಿದ್ದ ಸಮಯದಲ್ಲಿ ಅಷ್ಟರಮಟ್ಟಿಗೆ ಒಂದು ಕ್ರಾಂತಿಕಾರಕವಾದ ಶರಣರ ಸಂಘಟನೆಯನ್ನು ಒಂದು ಛಾಂಛನದಡಿಯಲ್ಲಿ ತರಲು ಅದೆಷ್ಟರಮಟ್ಟಿಗೆ ಸಾಧ್ಯವಾಗುತ್ತಿತ್ತೋ. ಲೋಕದ ಡೊಂಕ ತಿದ್ದಲು ಹೋಗದೇ, ತಮ್ಮ ತಮ್ಮ ಮನ ತನುವ ಸಂತೈಸಿಕೊಂಡು, ಅವರವರ ಆಧ್ಯಾತ್ಮದ ಅನುಭವದ ಲೋಕದಲ್ಲಿ ಅನುಭಾವಿಗಳಾಗಿ ಕಾಡು ಮಲ್ಲಿಗೆಗಳಾಗಿ ಹೋಗಿರುತ್ತಿದ್ದರು. ನಮಗಿಂದು ಅವರ ದಾಖಲೆಯೂ ಸಿಗುತ್ತಿರಲಿಲ್ಲವೇನೋ. ಆದರೆ, ಬಸವಣ್ಣ ತನಗಿಂತಲೂ ಸೂಕ್ಷ್ಮರೂ, ಆಳರೂ, ವಿಶಾಲರೂ ಆಗಿರುವಂತಹ ಅನುಭಾವಿಗಳನ್ನು ಬರಮಾಡಿಕೊಂಡು ಮಂಟಪವನ್ನು ಆಳ, ವಿಶಾಲ ಮತ್ತು ಎತ್ತರವನ್ನಾಗಿ ಮಾಡಿಕೊಂಡಿದ್ದು ಯಾಕಾಗಿ? ಮಿಥಿಕಗಳನ್ನು ಕಟ್ಟಿಕೊಡಲಲ್ಲ, ಬದಲಾಗಿ ಅವುಗಳನ್ನು ಒಡೆಯಲು. ಆ ಒಗಟುಗಳನ್ನು ಬಿಡಿಸಿ ಹಂಚಿಕೊಳ್ಳಲು. ಆದರೆ ಅದೇ ಬಸವಣ್ಣ ಕೆಲವೇ ವರ್ಷಗಳಲ್ಲಿ ಕೈಲಾಸದಿಂದ ಇಳಿದು ಬಂದ ನಂದಿಯಾದ. ಬೆರಳಿಗೆ ಕತ್ತಿ ಚುಚ್ಚಿದಾಗ ರಕ್ತದ ಬದಲು ಹಾಲನ್ನು ಹರಿಸಿದ. ಕಳ್ಳರು ಶರಣರೆಂದು ಕಟ್ಟಿಕೊಂಡ ಕಾಯಿಯ ತುಂಡುಗಳು ಲಿಂಗವಾದುದನ್ನು ನೋಡಿದ. ಮಹಾಮನೆಯ ದಾಸೋಹಕ್ಕೆ ಬಂದ ಜಂಗಮ ಉಣ್ಣದೇ ಹಾಗೆಯೇ ಹೋಗಲು, ಬಸವಣ್ಣ ತನ್ನ ಭೌತಿಕ ದೇಹವನ್ನು ತೊರೆದು ಅವರನ್ನು ಆತ್ಮರೂಪದಲ್ಲಿ ಹಿಂಬಾಲಿಸಿಬಿಟ್ಟದ್ದ. ಕೊನೆಗೆ ಕೂಡಲಸಂಗಮ ಕ್ಷೇತ್ರದಲ್ಲಿ ಓಂ ಎಂದು ಧ್ಯಾನಿಸುತ್ತಾ ತನ್ನ ಆತ್ಮವನ್ನು ಶಿವನಲ್ಲಿ ವಿಲೀನಗೊಳಿಸಿದ. ಅದ್ಯಾವ ಯಾವ ಘಾತಗಳಿಗೆ ತುತ್ತಾಗಿ ಬಸವಣ್ಣನೆಂಬ ಮಮತಾಮಯಿ ಮಣ್ಣಾಗಿ ಹೋದನೋ, ಆದರೆ ಧ್ಯಾನದಲ್ಲಿ ಕುಂಡಲಿನೀ ಶಕ್ತಿಯನ್ನು ಮೂಲಧಾರದಿಂದ ಸಹಸ್ರಾರದವರೆಗೂ ಸರಿಸಿ ಪರಮಾತ್ಮನಲ್ಲಿ ಐಕ್ಯವನ್ನಾಗಿಸಿ ನಮ್ಮ ಎಷ್ಟೋ ಬಸವಾಭಿಮಾನಿಗಳು ನೋಡುತ್ತಾರೆ.

ಯಥಾಗತ

ಅದೇನೇ ಇರಲಿ, ಅಶ್ವಘೋಷನಿಗೆ ಬುದ್ಧನ ಬೋಧನೆಯ ಒಳಾರ್ಥಗಳಲ್ಲಿ ಆಳವಾಗಿ ಪ್ರವೇಶಿಸುವುದಕ್ಕಿಂತ, ಬುದ್ಧನ ಜೀವನದ ಘಟನೆಗಳು ಮತ್ತು ವ್ಯಕ್ತಿತ್ವದ ಮೇಲೆ ಹೆಚ್ಚು ಗಮನಕೊಡುತ್ತಾನೆ. ಅಲ್ಲದೇ ಬ್ರಾಹ್ಮಣರ ಸಂಸ್ಕೃತ ಭಾಷೆಯ ಲೀಲೆಗೆ ತಕ್ಕಂತೆ ಅತ್ಯಂತ ಕಾವ್ಯಮಯವಾಗಿಯೂ ನೀಡುವ ಭರಾಟೆಯಲ್ಲಿ ಉತ್ಪ್ರೇಕ್ಷೆಗಳ ಪರಮಾವಧಿಯನ್ನು ಮುಟ್ಟುತ್ತಾನೆ. ಆದರೆ ಬುದ್ಧನ ಯಥಾರ್ಥವಾದ ಬೋಧನೆಗಳನ್ನೂ, ಈ ಉತ್ಪ್ರೇಕ್ಷೆಗಳನ್ನೂ ಜೊತೆಜೊತೆಯಲ್ಲಿಯೇ ಸಾಗಿಸುವ ಬೌದ್ಧರು ಕುಸಿಯುವುದು ಇಲ್ಲಿಯೇ. ಯಾವ ಕೃತಕತೆಗಳನ್ನು ಬುದ್ಧ ನಿರಾಕರಿಸಿ ಯಥಾರ್ಥವಾದುದನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸುವನೋ, ಅದೇ ಕೃತಕತೆಯನ್ನು ಅಲಂಕಾರವೆಂದೋ, ಆಧ್ಯಾತ್ಮದ ಸಂಕೇತಗಳೆಂದೋ, ರೂಪಕಗಳೆಂದೋ ಬುದ್ಧನನ್ನು ಅಲಂಕರಿಸಿ ನಾಯಕಪ್ರಧಾನವಾದ ಪೌರಾಣಿಕ ಕಥೆಯಲ್ಲಿ ನೀಡುವುದು. ಇಂತಹ ಅಲಂಕಾರಗಳಲ್ಲಿ ಬುದ್ಧ ನಮಗೆ ಎಟುಕದೇ ಹೋಗುತ್ತಾನೆ. ಆಡಂಬರದ ಉತ್ಪ್ರೇಕ್ಷೆಗಳಲ್ಲಿ ಬುದ್ಧ ಕರಗಿ ಹೋಗುತ್ತಾನೆ. ಯಥಾಗತ ಅಥವಾ ತಥಾಗತ ನಮಗೆ ದೊರಕಬೇಕಾದಾರೆ ಅಲಂಕಾರದ ಆಡಂಬರ ಮಹಾಮಾಯೆಯ ಗರ್ಭದಿಂದ ನಿರಾಭರಣನಾಗಿ ಬೆತ್ತಲಾಗಿರುವ ಬುದ್ಧನನ್ನು ಪಡೆಯಬೇಕಾಗಿದೆ. ಅದೇ ಹೊತ್ತಲ್ಲಿ ಕಾಳನ್ನು ತೆಗೆಯುವ ಅನಿವಾರ್ಯತೆ ಕೂಡ.


ಯಥಾಗತರು, ತಥಾಗತರು ಮತ್ತು ಸುಗತರು

ಅಭಿಮಾನಗಳೇ ಅಲಂಕಾರಗಳಾಗಿ, ಆ ಅಲಂಕಾರಗಳು ಯಥಾಗತ ತಥಾಗತರಾಗಿರುವ ಬುದ್ಧನನ್ನೂ, ಬಸವನನ್ನೂ, ಕ್ರಿಸ್ತನನ್ನೂ ಹಾಗೆಯೇ ಅನೇಕಾನೇಕ ಸರಳ ಮತ್ತು ನೇರವಾದ ಜೀವಿಗಳನ್ನು ಕಳೆದುಕೊಂಡಿರುವುದು.

ಬುದ್ಧನು ಅಥವಾ ಯಾವುದಾದರೂ ದೇವರು ನಿಮ್ಮನ್ನು ಆಶೀರ್ವದಿಸಲಿ ಎಂದು ಹಾರೈಸಿದಾಗಲೆಲ್ಲಾ ನನಗೆ ಅಚ್ಚರಿಯಾಗುತ್ತದೆ. ಬುದ್ಧ ಅಥವಾ ಯಾವುದೇ ದೇವರ ಮತ್ತು ನನ್ನ ನಡುವೆ ಮಧ್ಯವರ್ತಿಯಾಗಿರುವ ಇವರು ಯಾರು? ಇವರ ಮಾತನ್ನು ಆ ಬುದ್ಧ ಅಥವಾ ಇನ್ನಾವುದೋ ದೇವರು ಏಕೆ ಕೇಳಬೇಕು? ಆದರೆ ತಾನೇ ಆಶೀರ್ವಾದ ಮಾಡುವಷ್ಟು ಅಹಂಕಾರ ತೋರದಿರುವಂತಹ ವಿನಯಭಾವ ಆ ರೀತಿಯ ಮಾತುಗಳನ್ನು ಆಡಿಸುವುದಾದರೂ, ಅದೇ ಪುರೋಹಿತಶಾಹಿಯ ಮತ್ತೊಂದು ರೂಪವಾಗಿ ಬಿಂಬಿತವಾಗುವುದು. ಆಶೀರ್ವಾದವೆಂಬುದು ನೀಡುವುದಲ್ಲ, ಪಡೆಯುವುದು. ಅನುಗ್ರಹವನ್ನು ಮಾಡುವುದಲ್ಲ, ಗ್ರಹಿಸುವುದು. ಅನುಗ್ರಹವೆಂಬುದು ಅಖಂಡವಾಗಿ, ಅನಂತವಾಗಿ ಅಸ್ತಿತ್ವದಲ್ಲಿದ್ದು, ಅದನ್ನು ಪಡೆಯಲು ಇಲ್ಲೊಂದು ತೆರೆದುಕೊಳ್ಳುವಿಕೆ ಬೇಕು. ಇಂತಹ ತೆರೆದುಕೊಳ್ಳುವಿಕೆಯನ್ನೇ ಮಹಾವೀರ, ಬುದ್ಧ ಬಸವ, ಕ್ರಿಸ್ತ ಮತ್ತಿತರ ಆಧ್ಯಾತ್ಮ ನಾಯಕರು ತಿಳಿಸಿಕೊಡಲು ಹೋದದ್ದು. ಆದರೆ ಅವರೆಲ್ಲರೂ ದುರಂತನಾಯಕರು. ಮಹಾವೀರನನ್ನು ಜೈನರು ತಮ್ಮ ದೇವಾಲಯಗಳಲ್ಲಿ ಚಿನ್ನದ ಬರಡಾಗಿಸಿದರು. ಬುದ್ಧನನ್ನು ಬೌದ್ಧರು ತಮ್ಮ ಪರಿಕಲ್ಪನೆಗಳಲ್ಲೇ ಅಭಿಮಾನದ ವಿಶ್ವನಾಯಕನ ಕಟೌಟ್ ಮಾಡುತ್ತಿದ್ದಾರೆ. ಲಿಂಗಾಯತರ ಆಚಾರ ವಿಚಾರ ಮತ್ತು ಜಾತೀಯತೆಯ ಅನುಸರಣೆಗಳಲ್ಲಿ ಬಸವಣ್ಣ ಸಮಾಧಿಯಾಗಿ ಹೋದ. ಜೀವಂತ ವೃಕ್ಷವಾಗಿ ಬೆಳೆಯಬೇಕಿದ್ದ ಕ್ರಿಸ್ತ ಚರ್ಚಿನ ಕೊರಡು ಶಿಲುಬೆಗಳ ಮೇಲೆ ಮೊಳೆ ಹೊಡೆಸಿಕೊಂಡು ಶಾಶ್ವತವಾಗಿ ಶವವಾಗಿಬಿಟ್ಟ.

ದೀಪಗಳನ್ನು ಬೆಳಗುವುದು, ಹೂಗಳನ್ನು ಅರ್ಪಿಸುವುದು, ಧೂಪವನ್ನು ಹೊತ್ತಿಸುವುದು, ನಾವು ತಿನ್ನುವುದನ್ನು ಅಥವಾ ಫಲಗಳನ್ನು ಅರ್ಪಿಸುವುದು ಇತ್ಯಾದಿಗಳು ಪ್ರೀತಿಯ ಭಾವನಾತ್ಮಕವಾದ ಸಂಕೇತಗಳು. ಆದರೆ ಅವುಗಳನ್ನು ವರವೋ, ಮನೋಭೀಷ್ಟವೋ, ಆಶೀರ್ವಾದವೋ; ಅದೇನನ್ನೋ ಪಡೆಯುವ ಸಲುವಾಗಿ ಆಚರಣೆ ವಿಧಿವಿಧಾನಗಳ ತಾಂತ್ರಿಕ ಭಾಗದಿಂದ ಬೇರ್ಪಡಿಸಿ ನೋಡಲು ಪುರೋಹಿತರು ಕಲಿಸುವುದೇ ಇಲ್ಲ.

ಪೌರಾಣಿಕಗಳ ರೂಪಕಗಳು ಮಾಡುವ ಉಪದ್ರವಗಳು ಅಷ್ಟಿಷ್ಟಲ್ಲ. ಅವೇ ಸಾಮಾನ್ಯ ಜನರ ಭಕ್ತಿ, ಭಾವ, ಶ್ರದ್ಧೆಗಳನ್ನು ನಿಯಂತ್ರಿಸುವುದು. ಅದರ ಒಗಟುಗಳನ್ನು ಬಿಡಿಸಿದರೆ ಜನರು ತಮ್ಮ ಬಳಿಗೆ ಇನ್ನು ಯಾಕಾದರೂ ಬಂದಾರು ಎಂದೇ ಅರ್ಚಕರು, ಮಠದ ಸ್ವಾಮಿಗಳು, ಜಂಗಮರು, ಮೌಲ್ವಿಗಳು, ಪಾದ್ರಿಗಳು ಇತರ ಪುರೋಹಿತರು ಬಾಹ್ಯಾಚರಣೆಗಳನ್ನು ಜೀವಂತವಾಗಿಟ್ಟಿರುವುದು. ಯಥಾಸ್ಥಿತಿಯ ಪ್ರಜ್ಞೆಯನ್ನು ದೊರಕಿಸಿಕೊಡುವಂತಹ ಧ್ಯಾನದ ಅನುಭವಗಳನ್ನು ಬೌದ್ಧರಿಗೆ ಮಾಡಿಸಲಾಗದೇ, ಆಚರಣೆಗಳಲ್ಲೇ ಮುಳುಗಿಹೋಗುವ ಬಂತೇಜಿಗಳೂ ಯಾವುದೇ ಇತರ ವರ್ಗದ ಪುರೋಹಿತರಿಗಿಂತ ಕಡಿಮೆಯಿಲ್ಲ. ಮುಂದೊಂದು ದಿನ ಬಾಬಾ ಸಾಹೇಬ್ ಅಂಬೇಡ್ಕರ್ ಕೂಡ ಇಂತಹ ಸತ್ತ ದೇವರುಗಳ ಸಾಲಿಗೆ ಸೇರಿ ಬರಿಯ ಪೂಜೆಗೊಳಗಾದರೆ ಆಶ್ಚರ್ಯವೇನಿಲ್ಲ. ಅಂತಹ ಬೆಳೆಯುವ ಸಿರಿಯ ಮೊಳಕೆಗಳು ಈಗಲೇ ಕಾಣುತ್ತಿವೆ.



ಪೈ ಮಾಮಾಗಳ ದುಷ್ಟ ಸಾಮ್ರಾಜ್ಯ

ತಮ್ಮ ಪತ್ರಿಕೆಯಲ್ಲಿ ಶುದ್ಧೋದನ ಅವರು ಬರೆದಿರುವಂತೆ ಮಣಿಪಾಲದ ಮಾಹೆ ಕ್ಯಾಂಪಸ್ಸಿನಲ್ಲಿ ಹಣವೇ ಸರ್ವಸ್ವ ಹಾಗೂ ನೈತಿಕತೆ ಶೂನ್ಯ ಎಂಬುದು ನಿಜ. ಇದಕ್ಕೆ ಪಕ್ಕಾ ಪುರಾವೆಯೆಂದರೆ ಸುಮಾರು ಎರಡು ವರ್ಷಗಳ ಹಿಂದೆ ಮಣಿಪಾಲದಲ್ಲಿ ಒಬ್ಬ ವೈದ್ಯಕೀಯ ವಿದ್ಯಾರ್ಥಿನಿಯನ್ನು ಮೂರು ದುರುಳ ರಿಕ್ಷಾದವರು ಕಿಡ್ನಾಪ್ ಮಾಡಿ ಸಾಮೂಹಿಕ ರೇಪ್ ಮಾಡಿದಾಗ ಅದನ್ನು ಪೊಲೀಸರಿಗೆ ತಿಳಿಸಿದ್ದಕ್ಕಾಗಿ ಕಾಲೇಜಿನ ಸೆಕ್ಯೂರಿಟಿ ಆಫೀಸರನನ್ನೇ ಕೆಲಸದಿಂದ ತೆಗೆದುಹಾಕಿದ್ದು. ಪೈಗಳ ದೃಷ್ಟಿಯಲ್ಲಿ ಆ ಸೆಕ್ಯುರಿಟಿ ಅಧಿಕಾರಿ ಈ ವಿಷಯವನ್ನು ಮುಚ್ಚಿ ಹಾಕುವ ಬದಲು ಪೊಲೀಸರಿಗೆ ತಿಳಿಸಿದ್ದು ದೊಡ್ಡ ತಪ್ಪು. ಇಂತಹ ಹಲವಾರು ಅತ್ಯಾಚಾರಗಳು ಮಣಿಪಾಲದಲ್ಲಿ ಮೊದಲಲ್ಲಾ ನಡೆದಿತ್ತು, ಆದರೆ ಅವೆಲ್ಲಾ ಡ್ರಗ್ಸ್ ಅಮಲಿನಲ್ಲಿದ್ದ ವಿದ್ಯಾರ್ಥಿನಿಯರದಾಗಿತ್ತು, ಹಾಗಾಗಿ ಅವನ್ನೆಲ್ಲ ಮುಚ್ಚಿ ಹಾಕಲಾಗಿತ್ತಂತೆ. ಗಾಂಜಾ ಡ್ರಗ್ ಅಂತೂ ಮಣಿಪಾಲದಲ್ಲಿ ಪೊಲೀಸರ ಮೂಗಿನಡಿಯಲ್ಲೇ ಮುಕ್ತವಾಗಿ ಸಿಗುತ್ತದೆಯಂತೆ.

ಇಲ್ಲಿಯ ಮೆಡಿಕಲ್ ವಿದ್ಯಾರ್ಥಿಗಳೆಲ್ಲಾ ಕೋಟ್ಯಾಧೀಶ ಕುಟುಂಬದವರಾದುದರಿಂದ ಅವರಿಗೆ ಎಲ್ಲಾ ತರದ ಭೋಗವಿಲಾಸ ಬೇಕು. ಹಾಗಾಗಿ ಇಲ್ಲಿಯ ರಾತ್ರಿ ಜೀವನ ಬೆಂಗಳೂರಿಗಿಂತಲೂ ಹೆಚ್ಚು ರಂಗುರಂಗಾಗಿರುತ್ತದೆ. ಅದಕ್ಕಾಗಿ ಇಲ್ಲಿಯ ಕಳ್ಳದಂಧೆಯವರು ಪೊಲೀಸರಿಗೆ ಎಷ್ಟು ಬೇಕಾದರೂ ಹಣ ಸುರಿದು ಎಲ್ಲಾ ಸರಿಮಾಡಿಕೊಳ್ಳುತ್ತಾರೆ. ಇಲ್ಲಿಯ ಪೊಲೀಸ್ ಸ್ಟೇಷನ್ನಿನಲ್ಲಿ ಇಷ್ಟು ಭಾರಿ ಕಮಾಯಿ ಇರುವುದರಿಂದಲೇ ಇಲ್ಲಿಗೆ ಪೋಸ್ಟಿಂಗ್ ಮಾಡಿಸಿಕೊಳ್ಳಲು ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಪೇದೆಗಳಲ್ಲಿ ಭಾರಿ ಪೈಪೋಟಿಯಿದೆಯಂತೆ. ಹಾಗಾಗಿ ಹಿಂದೆಲ್ಲ ಮೇಲಧಿಕಾರಿಗಳಿಗೆ ಹಾಗೂ ರಾಜಕಾರಣಿಗಳಿಗೆ ದೊಡ್ಡ ಲಂಚ ಕೊಟ್ಟು ಪೊಲೀಸರು ಇಲ್ಲಿಗೆ ಪೋಸ್ಟಿಂಗ್ ಮಾಡಿಸಿಕೊಳ್ಳುತ್ತಿದ್ದರು. ಆದರೆ ಈಗಿನ ಕಡಕ್ ಎಸ್‌ಪಿ ಅಣ್ಣಾಮಲೈ ಬಂದ ಮೇಲೆ ಈ ಭ್ರಷ್ಟಾಚಾರಕ್ಕೆ ಸ್ವಲ್ಪ ಬ್ರೇಕ್ ಬಿದ್ದಿದೆ. ಆದರೆ ಭ್ರಷ್ಟ ರಾಜಕಾರಣಿಗಳು ಅವರನ್ನು ಎಷ್ಟು ಬೇಗ ಓಡಿಸುತ್ತಾರೆ ಎಂದು ಕಾದು ನೋಡಬೇಕು. ಕಾರಣ ಪ್ರಾಮಾಣಿಕ ಅಧಿಕಾರಿಗಳನ್ನು ಕಂಡರೆ ಎಲ್ಲಾ ರಾಜಕಾರಣಿಗಳಿಗೂ ವಿಪರೀತ ಅಲರ್ಜಿ.

- ಹರೀಶ್ ಎಂ.ಆರ್, ಉಡುಪಿ

ಶಿಕ್ಷಣ ಮತ್ತು ಧಾರ್ಮಿಕ ಮಾಫಿಯಾಗಳ ಕಾರುಬಾರು

ಬಡವರಿಗೆ ಅನ್ನಭಾಗ್ಯದಡಿ ಸ್ವಲ್ಪ ಉಚಿತ ಅಕ್ಕಿ ಕೊಟ್ಟರೆ ಬಡವರು ಸೋಮಾರಿಗಳಾಗುತ್ತಾರೆ ಎಂಬ ಭಯ ಭೈರಪ್ಪ ಮತ್ತು ಅವರ ಶ್ಯಾರಿಕನನ್ನು ಕಾಡುತ್ತದೆ. ಹಾಗಾದರೆ ಮಣಿಪಾಲ ಪೈಗಳ ಲ್ಯಾಂಡ್ ಲೂಟಿಗೆ ಸರಕಾರವೇ ಸಾಥ್ ಕೊಟ್ಟು ರೂ. 1123 ಕೋಟಿ ರೂಪಾಯಿ ಮನ್ನಾ ಮಾಡಿದ್ದು ಇಡೀ ರಾಜ್ಯದ ಎಷ್ಟು ವರ್ಷದ ಅನ್ನಭಾಗ್ಯಕ್ಕೆ ಸಮ? ಈ ಬಗ್ಗೆ ಭೈರಪ್ಪ ಯಾಕೆ ವಿರೋಧ ವ್ಯಕ್ತಪಡಿಸಿ ದೊಡ್ಡ ಲೇಖನ ಬರೆದಿಲ್ಲ?

ಅಷ್ಟು ಪ್ರಾಮಾಣಿಕ ಉಡುಪಿಯ ಡಿಸಿ ಡಾ. ವಿಶಾಲರು ಹಠ ಹಿಡಿದು ತನಿಖೆ ನಡೆಸಿ ಪೈ ರಿಪಬ್ಲಿಕ್ ಮೇಲೆ ಇಷ್ಟೊಂದು ಭಾರಿ ದಂಡ ವಿಧಿಸಿದರೆ ಮಹಾಭ್ರಷ್ಟ ರಾಜಕಾರಣಿಗಳು ಒಂದುಕ್ಷಣದಲ್ಲಿ ಇಷ್ಟೊಂದು ಭಾರಿ



ಮೊತ್ತ ಮನ್ನಾ ಮಾಡಿ ಪ್ರಾಮಾಣಿಕರ ಕೆನ್ನೆಗೆ ಛಟೀರೆಂದು ಬಾರಿಸಿದ್ದಾರೆ. ಆಡಳಿತದಲ್ಲಿ ಕಾಂಗ್ರೆಸ್ ಇರಲಿ ಅಥವಾ ಬಿಜೆಪಿ ಇರಲಿ ಕೊನೆಗೆ ಗೆಲುವು ಮಾತ್ರ ಯಾವಾಗಲೂ ದುಷ್ಟರದ್ದೇ ಎಂದು ಇನ್ನೊಮ್ಮೆ ಸಾಬೀತಾಯಿತು.

ಮಣಿಪಾಲ ಪೈಗಳ ಮೇಲೆ ಉಡುಪಿ ಡಿಸಿ ದಂಡ ಹಾಕಿದ ಸಮಯದಲ್ಲಿಯೇ ಪುತ್ತೂರಿನ ಸಹಾಯಕ ಆಯುಕ್ತರು ಧರ್ಮಸ್ಥಳದ ಶಿಕ್ಷಣ ಸಂಸ್ಥೆಯೊಂದು ಕಾನೂನು ಬಾಹಿರವಾಗಿ 132 ಎಕರೆ ಕೃಷಿ ಭೂಮಿ ತನ್ನದಾಗಿಸಿಕೊಂಡಿದ್ದರ ವಿರುದ್ಧದ ತೀರ್ಪು ಕೊಟ್ಟು ದಿಟ್ಟತನ ಮತ್ತು ಅಪಾರ



ಪ್ರಾಮಾಣಿಕತೆ ಮೆರೆದಿದ್ದರು. ಈಗ ಅದು ಸಹ ಅಕ್ರಮ ಸಕ್ರಮದಡಿ ಆ ಶಿಕ್ಷಣ ಸಂಸ್ಥೆಯ ಪರವಾಗಿ ಸರಕಾರ ನಿರ್ಣಯ ತೆಗೆದುಕೊಂಡಿದೆಯೆಂಬ ವರದಿಯಿದೆ.

ಒಟ್ಟಾರೆ ಶಿಕ್ಷಣ ಮಾಫಿಯಾ ಮತ್ತು ಧಾರ್ಮಿಕ ಮಾಫಿಯಾದ ವಿರುದ್ಧ ಯಾವುದೇ ಸರಕಾರ ಹೋಗುವುದಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಯಿತು. ಭಾರತದ ಅರೆ-ಬೆಂದ ಪ್ರಜಾಪ್ರಭುತ್ವದಲ್ಲಿ ಪ್ರಾಮಾಣಿಕರು ಅಸಹಾಯಕತೆಯಿಂದ ಕೇವಲ ಮೈ ಪರಚುತ್ತಾ ಇರಬೇಕು ಅಷ್ಟೇ. ಇಂತಹ ಸಿನಿಕತನ ಮತ್ತು ನಿರಾಶೆಯೇ ಬಹುಶಃ ಸಂಪೂರ್ಣ ಲೋಕಾಯುಕ್ತವನ್ನು ಶತಭ್ರಷ್ಟ ಮಾಡಿರುವುದು.

ಭಾರತದಲ್ಲಿ ವಿದ್ಯಾ ದೇಗುಲವನ್ನು ಮೊಟ್ಟ ಮೊದಲಿಗೆ ವ್ಯಾಪಾರಿ ಕೇಂದ್ರವನ್ನಾಗಿ ಪರಿವರ್ತಿಸಿದ ಕೀರ್ತಿ ನಮ್ಮ ಕರಾವಳಿಯವರಿಗೆ (ಮಣಿಪಾಲದವರಿಗೆ) ಹೋಗುತ್ತದೆ. ಅದೇ ಪ್ರಕಾರ ದೇವಸ್ಥಾನ ಮತ್ತು ಧಾರ್ಮಿಕ ಕೇಂದ್ರಗಳನ್ನೂ ವ್ಯಾಪಾರಿ ಕೇಂದ್ರಗಳನ್ನಾಗಿ ಮಾಡಿದ್ದರ ಕೀರ್ತಿಯೂ ನಮ್ಮ ಕರಾವಳಿಗೇ ಹೋಗುತ್ತದೆ. ಇಲ್ಲಿಯ ಪುರೋಹಿತರ ವ್ಯಾಪಾರಿ ಬುದ್ಧಿ ಎಷ್ಟು ತೀಕ್ಷ್ಣ ಎಂದರೆ ಸರಕಾರದ ಅಧೀನವಿರುವ ದೇವಾಲಯದ ದೇವರ ಮೇಲೆಯೂ ಯಃಕಶ್ಚಿತ್ ಅರ್ಚಕರು ಕಾಪಿರೈಟ್ ರಿಜಿಸ್ಟಾರ್ ಮಾಡಿ ದೇವರ ಮೂರ್ತಿಯ ಫೋಟೋ ಮಾರಾಟ ಮಾಡಿ ಲಕ್ಷಾಂತರ ಕಮಾಯಿಸುತ್ತಾರೆ ಹಾಗೂ ಸರಕಾರದವರು ದಶಕಗಳಿಂದ ತಮಗಾಗುತ್ತಿರುವ ಈ ನಷ್ಟ ನೋಡುತ್ತಾ ಸುಮ್ಮನಿರುತ್ತಾರೆ. ಕಟೀಲು ದೇವಳ ಮುಜರಾಯಿ ಇಲಾಖೆಯಡಿ ಇದ್ದರೂ ಅಲ್ಲಿಯ ದೇವರ (ಉತ್ಸವ ಮೂರ್ತಿಯ) ಫೋಟೋ ಒಬ್ಬ ಅರ್ಚಕನ ಖಾಸಗಿ ಕಾಪಿರೈಟ್ ಅಡಿ ಇದೆ ಹಾಗೂ ಅಲ್ಲಿ ಮೂಲತಃ ಪೂಜೆಗೊಳ್ಳುವ ಮೂಲ ಉದ್ಭವ ಲಿಂಗದ ಫೋಟೋ ಮಾರಲು ಈ ಪಟ್ಟಭದ್ರರು ಬಿಡುತ್ತಿಲ್ಲ.

ಹೀಗೆ ಕರಾವಳಿಯಲ್ಲಿ ಎಲ್ಲೆಡೆ ಶಿಕ್ಷಣ ಮಾಫಿಯಾ ಮತ್ತು ಧಾರ್ಮಿಕ ಮಾಫಿಯಾಗಳದ್ದೇ ಕಾರುಬಾರು. ಇವರ ಅವ್ಯವಹಾರದ ವಿರುದ್ಧ ಜನಸಾಮಾನ್ಯರು ಮಾಡುವ ದೂರುಗಳು ಸರಕಾರದ ಕಸದಡಬ್ಬಿ ಸೇರುತ್ತವೆ ಅಷ್ಟೇ. ಉಪ್ಪು ತಿಂದವ ನೀರು ಕುಡಿಯಲೇಬೇಕು ಅನ್ನುವ ಗಾದೆ ಎಲ್ಲಿ ಹೋಯಿತು?

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ರೈತರ ಸಮಸ್ಯೆಗಳಿಗೆ ಪರಿಹಾರವಿಲ್ಲವೆ?

ಹಲವಾರು ವರ್ಷಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಈ ಬಗ್ಗೆ ಚಿಂತಿಸಿ ಕ್ರಮ ಕೈಗೊಳ್ಳುತ್ತಿಲ್ಲ. ಪ್ರತಿ ಸಮಸ್ಯೆಗೂ ಪರಿಹಾರ ಇದ್ದೇ ಇರುತ್ತದೆ. ಆ ಬಗ್ಗೆ ತಜ್ಞರು ಚಿಂತಿಸಿ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಒತ್ತಾಯಿಸಬೇಕು.

ರೈತರು ಬೆಳೆದ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡುವ ಕ್ರಮವನ್ನು ಕೇಂದ್ರ ಸರ್ಕಾರ ಮಾಡಬೇಕು. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರಿಗೆ ನೀಡುವ ಸಾಲಕ್ಕೆ ಕಡಿಮೆ ಬಡ್ಡಿ ಹಾಕುವಂತಹ ವ್ಯವಸ್ಥೆಯನ್ನೂ ಕೇಂದ್ರ ಸರ್ಕಾರ ಮಾಡಬೇಕು. ರಾಜ್ಯ ಸರ್ಕಾರಗಳು ತನ್ನ ವ್ಯಾಪ್ತಿಯ ಸಹಕಾರಿ ಸಂಘ ಹಾಗೂ ಚಿಕ್ಕ ಬ್ಯಾಂಕುಗಳಿಗೆ ನಿರ್ದೇಶನ ನೀಡಿ ರೈತರಿಗೆ ನೀಡುವ ಸಾಲಕ್ಕೆ ಕಡಿಮೆ ಬಡ್ಡಿ ಹಾಕುವಂತೆ ವ್ಯವಸ್ಥೆ ಮಾಡಬೇಕು. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಸೇರಿ ರೈತರಿಗೆ ಬೀಜ, ರಸಗೊಬ್ಬರ, ಔಷಧ, ಒಕ್ಕಲುತನಕ್ಕೆ ಬಳಕೆಯಾಗುವ ಎಲ್ಲ ವಸ್ತುಗಳನ್ನು ರಿಯಾಯ್ತಿ ದರದಲ್ಲಿ ಪೂರೈಸಬೇಕು. ಪಹಣಿ ನಕಲು, ಹೊಲದ ರಿಜಿಸ್ಟರ್ ಕಾಪಿಯನ್ನು ಒದಗಿಸಿದರೆ ಸರಳವಾಗಿ ಸಾಲ ಸಿಗುವಂತಹ ವ್ಯವಸ್ಥೆಯಾಗಬೇಕು. ಇಂಥ ಸರಳ ವ್ಯವಸ್ಥೆ ಇಲ್ಲದ್ದರಿಂದ ಸಾಹುಕಾರರಿಂದ, ಅಡತಿ ಅಂಗಡಿ (ಮಂಡಿ) ಮಾಲೀಕರಿಂದ ಸಾಲ ಪಡೆಯುತ್ತಿರುವುದರಿಂದ ರೈತರು ಸಮಸ್ಯೆಗೊಳಗಾಗಿದ್ದಾರೆ.

100ಕ್ಕೆ 60% ರಷ್ಟು ರೈತರಿರುವ ಅಂದರೆ ಬಹುಸಂಖ್ಯಾತರ ಸಮಸ್ಯೆಯನ್ನು ಹಾಗೇ ಉಳಿಸಿದರೆ ರಾಷ್ಟ್ರ ಉದ್ಧಾರವಾಗದು. ಉದ್ಯಮ ಇಲ್ಲವೆ ನಾಶ ಎಂದು ಹೇಳುವ ಕಾಲವಿತ್ತು. ಒಕ್ಕಲುತನಕ್ಕೆ ಅಗ್ರ ಪ್ರಾಶಸ್ತ್ಯ ಇಲ್ಲವೇ ಸರ್ವನಾಶ ಎಂಬ ಪರಿಸ್ಥಿತಿ ಉದ್ಭವಿಸಿದೆ. ಒಂದು ಕಾಲದಲ್ಲಿ ನಮ್ಮ ರಾಷ್ಟ್ರ ಆಹಾರ ಧಾನ್ಯಗಳನ್ನು ಹೊರ ದೇಶಗಳಿಂದ ತರಿಸಿಕೊಳ್ಳುತ್ತಿತ್ತು. ರೈತರು ನಮ್ಮ ದೇಶಕ್ಕಾಗುವಷ್ಟು ಆಹಾರ ಧಾನ್ಯವನ್ನು ಉತ್ಪಾದಿಸಿ ನಮ್ಮ ದೇಶದ ಮರ್ಯಾದೆ ಕಾಪಾಡಿದ್ದಾರೆ. ಅವರ ಬದುಕನ್ನು ಕಾಪಾಡುವ ಹೊಣೆಗಾರಿಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಮೇಲಿದೆ.

- ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ

ಕರ್ತವ್ಯಪ್ರಜ್ಞೆ ಪ್ರಾಮಾಣಿಕವಾಗಿರಲಿ

ಬೆಂಗಳೂರಿನ ಒಂದು ಜನನಿಬಿಡ ಮುಖ್ಯರಸ್ತೆಯಲ್ಲಿ ನಾನು ನನ್ನ ಸ್ನೇಹಿತ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆವು. ಸ್ವಲ್ಪ ದೂರದಲ್ಲಿ ಪೊಲೀಸರು ಹೆಲ್ಮೆಟ್ ಇಲ್ಲದವರನ್ನು ಹಿಡಿದು ದಂಡ ಹಾಕುತ್ತಿರುವುದು ಕಾಣಿಸಿತು. ನಾವಂತೂ ಹೆಲ್ಮೆಟ್ ಧರಿಸಿದ್ದಲ್ಲದೇ ವಾಹನಕ್ಕೆ ಸಂಬಂಧಿಸಿದ ದಾಖಲೆಗಳೆಲ್ಲಾ ಸರಿಯಿದ್ದವು. ಹಾಗಾಗಿ ಭಯವಿರಲಿಲ್ಲ. ಆದರೆ ನಮ್ಮ ಪಕ್ಕದಲ್ಲಿಯೇ 'Active Honda' ದಲ್ಲಿ ಸಾಗುತ್ತಿದ್ದ ಹುಡುಗಿಯರು ತ್ರಿಬಲ್ ರೈಡಿಂಗ್



ಮಾಡುತ್ತಿದ್ದರಲ್ಲದೇ ಹೆಲ್ಮೆಟ್ ಹಾಕಿರಲಿಲ್ಲ. ನಾವು ಅವರಿಗೆ ಮುಂದೆ ಪೊಲೀಸರಿದ್ದಾರೆ; ಹೆಲ್ಮೆಟ್ ಹಾಕಿಕೊಂಡು ಹೋಗಿ ಎಂದು ವಿನಂತಿಸಿದೆವು. ಆದರೆ ನಮ್ಮ ಮಾತಿಗೆ ಅವರು ನಕ್ಕರೆ ಹೊರತು, ಹೆದರಲಿಲ್ಲ. ಪೊಲೀಸರು ಆ ಹೆಣ್ಣುಮಕ್ಕಳು ಹೋಗುವುದನ್ನು ನೋಡುತ್ತ ಇದ್ದರು. ಗಾಡಿ ನಿಲ್ಲಿಸಲೇ ಇಲ್ಲ. ಅವರ ಪಾಡಿಗೆ ಅವರು ಸ್ಟೈಲಾಗಿ ಹೋಗೇಬಿಟ್ಟರು. ಆ ಯುವತಿಯರು ನಮ್ಮನ್ನು ನೋಡಿ ತಿರಸ್ಕಾರದಿಂದ ಅಪಹಾಸ್ಯ ಮಾಡುತ್ತಾ ನಗುತ್ತಾ ಇದ್ದುದನ್ನು ನೋಡಿ ಬೇಸರವೆನಿಸಿತು.

ಪೊಲೀಸರ ಈ ವರ್ತನೆಯಿಂದ ನಮಗೆ ನಿಜಕ್ಕೂ ಬೇಸರವಾಯಿತು. ಬಡಪಾಯಿಗಳಿಗೆ ಒಂದು ಕಾನೂನು ಶ್ರೀಮಂತರಿಗೊಂದು ಕಾನೂನು ಇದೆಯೇ? ಇದರಿಂದಲೇ ಚಿಕ್ಕಚಿಕ್ಕ ಮಕ್ಕಳು ಬೈಕ್, ಕಾರು ಓಡಿಸುವುದು, ವೀಲಿಂಗ್ ಮಾಡುವುದು ಸಾಮಾನ್ಯವಾಗಿದೆ. ಇದರಿಂದ ಅಪಘಾತಗಳು ಆಗುತ್ತಿವೆ.

ದಯಮಾಡಿ ಇಲಾಖೆಯು ಸಾರ್ವಜನಿಕರ ಹಿತದೃ... ಯಿಂದ ಯಾವುದೇ ಯಾರ ಮುಲಾಜಿಗೂ ಒಳಗಾಗದ... ಎಲ್ಲರಿಗೂ ಸಮಾನ ದೃಷ್ಟಿಯಿಂದ ತನಿಖೆ, ದಂಡವಾಗ... ದಕ್ಷತೆಯಿಂದ ಕರ್ತವ್ಯ ನಿರ್ವಹಿಸುವ ಅದೆಷ್ಟೋ ಅಧಿಕಾ... ಗಳು ಕೆಲವೇ ಕೆಲವು ಇಂತಹವರಿಂದ ಅಪಮಾ... ಗೊಳಗಾಗುವುದನ್ನು ಕೇಳಿದ್ದೇವೆ.

- ಮಂಜುನಾಥ್, ಬೆಂಗಳೂ...

ರಂಗಣ್ಣ ಆತ್ಮವಿಮರ್ಶೆ ಮಾಡಿಕೊಳ್ಳಲಿ

ಇತ್ತೀಚೆಗೆ ಪತ್ರಿಕೆಯಲ್ಲಿ ಬಂದ ದೃಶ್ಯ ಮಾಧ್ಯಮ... ಬಗ್ಗೆ ಬಂದ, ಅದರಲ್ಲೂ ಪಬ್ಲಿಕ್ ಟಿವಿ ರಂಗಣ್ಣನ ಬ... ಪ್ರಕಟಗೊಂಡಿದ್ದಕ್ಕೆ, ಪ್ರತಿಕ್ರಿಯೆ ಬರೆಯಲು ಸಾಧ್ಯವಾಗಿರಲಿ... ಇದಕ್ಕೆ ಸಂಬಂಧಿಸಿದಂತೆ ಬಿ.ಎನ್.ಮನುಶೆಣೈ ಅವ... ಪ್ರತಿಕ್ರಿಯೆ ನೋಡಿ ತುಂಬಾ ಖುಷಿಯಾಯಿತ... ಮಾಧ್ಯಮಗಳನ್ನು ಎದುರು ಹಾಕಿಕೊಳ್ಳಬಾರದೆಂಬ ಒಂದ... ದೃಷ್ಟಿಯಿಂದ ರಾಜಕೀಯ ಮಂದಿ (ಮುಖ್ಯಮಂ... ಮಂತ್ರಿಗಳು ಇತ್ಯಾದಿ) ಸುಮ್ಮನಿರುತ್ತಾರೆಯೇ ಹೊರ... ಸಣ್ಣಪುಟ್ಟ ಘಟನೆಗಳಿಗೂ ಚರ್ಚೆಗೆ ಮುಖ್ಯಮಂ... ಮಂತ್ರಿಗಳು, ಹಿರಿಯ ಅಧಿಕಾರಿಗಳನ್ನು ಹೀಯಾಳಿ... ಆಹ್ವಾನಿಸುವ ಚಾನೆಲ್‌ಗಳ ಬೃಹಸ್ಪತಿಗಳು ಮೊದಲು ಯ... ವಿಷಯ, ಯಾವ ಮಟ್ಟದಲ್ಲಿದೆ. ಇದಕ್ಕೆ ಯಾರ... ಹೊಣೆಗಾರರನ್ನಾಗಿಸಬಹುದು ಎಂದು ತಿಳಿಯ... ಡಾಕ್ಟರ್‌ಗಳನ್ನು ನರ್ಸ್‌ಗಳೆಂದೂ, ಆಯಾಗಳ... ಸಿಸ್ಟರ್‌ಗಳೆಂದೂ (ಶುಶ್ರೂಷಕಿಯರು), ಕಾನ್‌ಸ್ಟೇಬಲ್‌ರ... ಇನ್‌ಸ್ಪೆಕ್ಟರ್ ಎಂದೂ ತಪ್ಪಾಗಿ ವ್ಯಾಖ್ಯಾನಿಸಿದ್ದು ಇದೆ. ಹಲ... ಬಾರಿ ವಾರ್ತೆಯ ಕನ್ನಡ ಟೈಟಲ್‌ಗಳ ವ್ಯಾಕರಣ, ... ಜೋಡಣೆಯನ್ನು, ಉಚ್ಚಾರಗಳನ್ನು ಸರಿಯಾಗಿ ನಿರ್ವಹಿಸ... ಪ್ರಸಾರ ಮಾಡುವುದೂ ಸಾಮಾನ್ಯವಾಗಿದೆ.

ಮನುಶೆಣೈಯವರ ಪ್ರತಿಕ್ರಿಯೆ ಪೂರ್ಣ ಸರಿಯಾಗಿ... ಒಂದು ಚಾನೆಲ್ ಆದರೂ ಜನರಿಗೆ ತಪ್ಪು ಸಂದೇ... ರವಾನೆಯಾಗದಂತೆ, ಮೌಢ್ಯ ಮೂಢನಂಬಿಕೆ, ಸುಳ್ಳು ಪ್ರ... ಮಾಡದಂತೆ ಕಾರ್ಯ ನಿರ್ವಹಿಸುವುದೇ ಎಂಬ ನಿರಿ... ಸುಳ್ಳಾಗಿದೆ. ಪಬ್ಲಿಕ್ ಟಿವಿ ಪ್ರಾರಂಭವಾದಾಗ ಇದ್ದ ... ನಿರೀಕ್ಷೆ ಅದರಲ್ಲಿನ ಜ್ಯೋತಿಷ್ಯ ಭವಿಷ್ಯ, ವಿವಿಧ ಕಂಪೆನಿ... ನಿಯೋಜಿತ (ಸುಳ್ಳು) ಕಾರ್ಯಕ್ರಮಗಳ ಪ್ರಸಾರಗಳಿ... ಹುಸಿಯಾಯಿತು.

ಜನರಿಗೆ, ರಾಜಕೀಯ ಮುಖಂಡರಿಗೆ, ಹಿರಿ... ಅಧಿಕಾರಿಗಳಿಗೆ ಗದರಿಸಿ ಮಾತನಾಡುವ ರಂಗಣ್ಣ ... ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

- ಅಹಮದ್ ಷರೀಫ್, ದಾವಣ...

ತಾ. 14.07.2015ರ ಉದಯವಾ... ಮುಖಪುಟದಲ್ಲಿ 'ಮಲ್ಯನಿಗೆ ಸುಪ್ರೀಂಕೋರ್ಟ್ 10 ... ದಂಡ' ಎಂಬ ವರದಿ ಪ್ರಕಟಿಸಿದ್ದು ದೊಡ್ಡ ಜೋಕ್‌ನಂತಿ... ಮಲ್ಯ ಅಕ್ರಮ ಮಾಡಿದ್ದಕ್ಕೆ ಸುಪ್ರೀಂಕೋರ್ಟ್ ದ... ಹಾಕಿರುವುದು ಸರಿ. ತನ್ಮೂಲಕ ಭ್ರಷ್ಟಾಚಾರ ವಿರೋ... ನಿಲುವುಗಳು/ ನಿರ್ಧಾರಗಳು ಸರಿ ಎಂದು ಹೇಳುವಂತ... ಆ ವರದಿ.

ಮಣಿಪಾಲದ ಗ್ರೂಪ್ ಮಾಡಿದ್ದು ಇನ್ನೇನು? ಆ...

5. 2015ರ 'ಗೌರಿ ಲಂಕೇಶ್ ಪತ್ರಿಕೆ'ಯಲ್ಲಿ ಪೈ ಗ್ರೂ... ಬ್ರಹ್ಮಾಂಡ ಭ್ರಷ್ಟಾಚಾರ/ಕಾನೂನಿನ ಉಲ್ಲಂಘನೆಗಳ... ಎಳೆಎಳೆಯಾಗಿ ವಿವರಿಸಲಾಗಿದೆ.

ಉದಯವಾಣಿಯ ಪೈಗಳಿಗೆ ಕಾನೂನು, ನೀತಿನಿಯ... ಗಳ ಬಗ್ಗೆ ನಿಜವಾದ ಕಾಳಜಿ ಇದ್ದರೆ, ಮೊದ... ಮರ್ಯಾದೆಯಿಂದ ಉಡುಪಿ ಡಿಸಿ ಹಾಕಿದ 1,200 ಕೋ... ದಂಡ ಕಟ್ಟಿ ಪ್ರಾಮಾಣಿಕತೆ ಪ್ರದರ್ಶಿಸಲಿ.


- ಶಂಕರ್, ಮಂಗಳೂ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ... ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹು...



ಪ್ರಯೋಗಗಳೂ ಪ್ರೇಕ್ಷಕರಿಗೆ ಅರ್ಥ ಆಗಬೇಕು

ಕನ್ನಡದ ಯುವ ನಿರ್ದೇಶಕರು ಕಲಾತ್ಮಕ ಸಿನಿಮಾಗಳತ್ತ ಒಲವು ತೋರುತ್ತಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಈ ನಡುವೆಯೇ ವೆಂಕಟಾಚಲರಂಥ ಅಪರೂಪದ ಯುವ ನಿರ್ದೇಶಕರು ಸ್ಯಾಂಡಲ್‌ವುಡ್‌ನಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ.



ಕನ್ನಡ ಸಿನಿ ರಂಗದಲ್ಲಿ ಪ್ರಯೋಗಗಳು ಕಡಿಮೆ ಎನ್ನುವ ಮಾತು ಈಗ ಅಕ್ಷರಶಃ ಸುಳ್ಳಾಗುತ್ತಿದೆ. ಹೊಸ ಹೊಸ ನಿರ್ದೇಶಕರು ತಾಜಾ ಕಲ್ಪನೆಯೊಂದಿಗೆ ಸ್ಯಾಂಡಲ್‌ವುಡ್ ಪ್ರವೇಶ ಮಾಡುತ್ತಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುತ್ತಿದ್ದಾರೆ. ಅಂತಹ ಯುವ ನಿರ್ದೇಶಕರ ಸಾಲಲ್ಲಿ ಪ್ರಮುಖವಾಗಿ ಕೇಳಿ ಬರುವ ಹೆಸರು ವೆಂಕಟಾಚಲ ಅವರದ್ದು. ರಂಗಭೂಮಿ ಹಿನ್ನೆಲೆಯ ಇವರು 'ಚಿತ್ರಮಂದಿರದಲ್ಲಿ' ಎಂಬ ಅಪರೂಪದ ಸಿನಿಮಾ ನಿರ್ದೇಶನ ಮಾಡಿದ್ದರು. ಇದು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿತ್ತು. ಈಗ ಮತ್ತೊಂದು ಸಿನಿಮಾಗೆ ಆಕ್ಷನ್ ಕಟ್ ಹೇಳಿದ್ದಾರೆ. ಅದು ಬರದ ಹಿನ್ನೆಲೆಯಲ್ಲಿ ಮೂಡಿಬರುತ್ತಿರುವ ಚಿತ್ರವಾಗಿದೆ. ತಮ್ಮ ಸಿನಿಮಾ ಜರ್ನಿಯ ಕುರಿತು ಅವರು ಹೇಳಿಕೊಂಡಿದ್ದು ಇಲ್ಲಿದೆ......

** ಸಿನಿಮಾ ರಂಗದತ್ತ ಆಸಕ್ತಿ ಮೂಡಿದ್ದು ಹೇಗೆ?*

ಚಿತ್ರರಂಗಕ್ಕೆ ಬರುವುದಕ್ಕಿಂತ ಮುಂಚೆ ನಾನು ರಂಗಭೂಮಿಯಲ್ಲಿ ಕೆಲಸ ಮಾಡುತ್ತಿದ್ದೆ. ಶ್ರೀಮಂತವಾಗಿರುವ ಕರ್ನಾಟಕ ರಂಗಭೂಮಿಯಿಂದ ನಾನು ಸಾಕಷ್ಟು ಅನುಭವ ಪಡೆದ. ಇಲ್ಲಿ ನನಗೆ ಅಪರೂಪದ ಸಾಹಿತಿಗಳು, ರಂಗಕರ್ಮಿಗಳು ಪರಿಚಯ ಆದರು. ಮೊದಲು ನಾನು ಸೇರಿಕೊಂಡಿದ್ದು ರಂಜನಾ ಎಂಬ ಸಂಸ್ಥೆಯಲ್ಲಿ. ನನ್ನ ಮೊದಲ ನಾಟಕವೇ 'ಚಲೇಜಾವ್', ಆನಂತರ ನನಗೆ ಜನಪದ ತಂಡದ ಮೈನಾ ಚಂದ್ರು ಪರಿಚಯ ಆದರು. ಅವರೇ ನನ್ನ ರಂಗಭೂಮಿಯ ಗುರುಗಳು. ಅವರು ನನಗೆ 'ಮಾರನಾಯಕ' ನಾಟಕದಲ್ಲಿ ಜೈನಮುನಿ ಪಾತ್ರ ನೀಡಿದರು. ಪಾತ್ರಕ್ಕೆ ಶ್ಲೋಕ, ಮಂತ್ರಗಳು ಇದ್ದವು. ನನ್ನ ನಟನೆ ಕಂಡು ಎಲ್ಲರೂ ಬೆನ್ನು ತಟ್ಟಿದರು. ಆನಂತರ ಪ್ರಯೋಗ ರಂಗ, ಸಮುದಾಯ, ಅಭಿನಯ ತರಂಗ ಹೀಗೆ.. ನಾಟಕ ಜರ್ನಿ ಮುಂದುವರೆಯಿತು. ಆನಂತರವಷ್ಟೇ ನಾನು ಸಿನಿಮಾರಂಗದತ್ತ ಒಲವು ಬೆಳೆಸಿಕೊಂಡಿದ್ದು.

** ನಟನಾಗಿದ್ದವರು ನಿರ್ದೇಶಕರಾಗಿದ್ದು ಯಾಕೆ?*

ರಂಗಭೂಮಿಯ ಕೆಲಸಗಳ ಜತೆಗೆ ಧಾರಾವಾಹಿಯಲ್ಲೂ ನಟಿಸೋಕೆ ಶುರು ಮಾಡಿದೆ. 'ಮೈಲಾರಿ ಸರಸ' ನಾನು ನಟಿಸಿದ ಮೊದಲ ಧಾರಾವಾಹಿ. ಶಿವರಾಮ್ ಅವರ ಮಗನ ಪಾತ್ರದಲ್ಲಿ ಕಾಣಿಸಿಕೊಂಡೆ. ಆನಂತರ 'ಜನನಿ'ಯಲ್ಲಿ ಪಾತ್ರ ಮಾಡಿದೆ. ಈ ಧಾರಾವಾಹಿಯಲ್ಲಿ ನನಗೆ ಭಾರತಿ ವಿಷ್ಣುವರ್ಧನ್ ಬೆನ್ನು ತಟ್ಟಿ ಪ್ರೋತ್ಸಾಹಿಸಿದರು. ಆಮೇಲೆ ಸಾಕಷ್ಟು ನಟರು, ನಿರ್ದೇಶನ ಮಾಡುವಂತೆ ದುಂಬಾಲು ಬಿದ್ದರು. ಅವರ ಒತ್ತಾಸೆಗೆ ಬಿದ್ದು 'ಮನೆಮನೆಯ ಮಾತು' ಎಂಬ ಧಾರಾವಾಹಿ ನಿರ್ದೇಶನ ಮಾಡಿದೆ. ಈ ಧಾರಾವಾಹಿಗಾಗಿ ನನಗೆ 'ಆರ್ಯಭಟ' ಪ್ರಶಸ್ತಿ ಕೂಡ ಬಂತು. ಆಮೇಲೆ 'ವಿಲೋಕನ' ಸೇರಿದಂತೆ ಅನೇಕ ಧಾರಾವಾಹಿಗಳ ನಿರ್ದೇಶನ ಮಾಡಿದೆ. ಗೆಳೆಯರ ಒತ್ತಾಸೆಯೇ ನಿರ್ದೇಶಕನನ್ನಾಗಿ ಮಾಡಿತು."

** ನಿರ್ದೇಶನದ ಜತೆಗೆ ಬರವಣಿಗೆಯಲ್ಲೂ ತಾವು ತೊಡಗಿಕೊಂಡಿದ್ದೀರಿ. ನಿಮಗೆ ಮೊದಲಿನಿಂದಲೂ ಬರೆಯುವ ಆಸಕ್ತಿ ಇತ್ತಾ?*

ಕಾಲೇಜು ದಿನಗಳಿಂದಲೂ ನನಗೆ ಬರವಣಿಗೆಯಲ್ಲಿ ಆಸಕ್ತಿ ಇತ್ತು, ರಂಗಭೂಮಿಗೆ ಬಂದಾಗ ಅದು ಜಾಸ್ತಿ ಆಯಿತು. ಪುಟ್ಟ ಪುಟ್ಟ ಕತೆಗಳನ್ನು ಬರೆಯುತ್ತಿದ್ದೆ. ಆನಂತರ 'ಅಂತರ' ಮತ್ತು 'ಅಕ್ಕರಸ್ಥೆ' ಎಂಬ ಎರಡು ನಾಟಕಗಳನ್ನು ಬರೆದೆ. ನಾಟಕಗಳಿಗೆ ಪ್ರಶಸ್ತಿಯೂ ಬಂತು. ಅಲ್ಲಿಂದ ಸಿನಿಮಾಗಳ ಸ್ಕ್ರಿಪ್ಟ್ ಬರೆಯೋಕೆ ಶುರು ಮಾಡಿದೆ. ನಿರ್ದೇಶನದ ಜತೆಗೆ ಬರವಣಿಗೆಯೂ ನಿರಂತರವಾಗಿದೆ.

** 'ಚಿತ್ರಮಂದಿರದಲ್ಲಿ' ಸಿನಿಮಾದ ಅನುಭವ ಹೇಗಿತ್ತು?*

ಕಿರುತೆರೆಯ ಲೋಕದಿಂದ ಸಿನಿಮಾ ರಂಗಕ್ಕೆ ಬಂದೆ. 'ಚಿತ್ರಮಂದಿರದಲ್ಲಿ' ನನ್ನ ಮೊದಲ ಸಿನಿಮಾ. ಕಂಡುಂಡ ಅನುಭವಗಳೇ ಸಿನಿಮಾ ಆಯಿತು. ಭೈರನ ಪಾತ್ರದ ಬಗ್ಗೆ ಎಲ್ಲರೂ ಮೆಚ್ಚುಗೆ ಸೂಚಿಸಿದರು. ಅಲ್ಲದೇ ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಸಿನಿಮೋತ್ಸವ, ಮೈಸೂರು ದಸರಾ ಚಿತ್ರೋತ್ಸವ ಸೇರಿದಂತೆ ಅನೇಕ ಫಿಲ್ಮ್ ಫೆಸ್ಟಿವೆಲ್‌ನಲ್ಲಿ ಪ್ರದರ್ಶನ ಕಂಡ ಸಿನಿಮಾ ಅದು. ಅಲ್ಲದೇ ಸಾಕಷ್ಟು ಥಿಯೇಟರ್‌ನಲ್ಲೂ ಚಿತ್ರ ಬಿಡುಗಡೆ ಆಯಿತು. ಒಳ್ಳೆಯ ವಿಮರ್ಶೆ ಬಂತು. ಇದೇ ಸಿನಿಮಾ ಮತ್ತೊಂದು ಚಿತ್ರದ ನಿರ್ಮಾಣಕ್ಕೂ ಪ್ರೇರಣೆ ಆಯಿತು.

** ಮತ್ತೆ ಹೊಸ ಸಿನಿಮಾ ಮಾಡುತ್ತಿದ್ದೀರಂತೆ?*

ಹೌದು. ಈ ಬಾರಿ ಉತ್ತರ ಕರ್ನಾಟಕದಲ್ಲಿ ಕಂಡುಬಂದ ಭೀಕರ ಬರಗಾಲದ ಕುರಿತಾಗಿ ಸಿನಿಮಾ ಮಾಡುತ್ತಿದ್ದೇನೆ. ಬರಗಾಲ ಅಂದಾಕ್ಷಣ, ರೈತರ ಬವಣೆ ಕುರಿತಾಗಿಯೇ ಸಿನಿಮಾಗಳು ಇರುತ್ತವೆ. ಆದರೆ, ನನ್ನ ನೋಟ ಬೇರೆಯದ್ದಾಗಿದೆ. ಉತ್ತರ ಕರ್ನಾಟಕದ ಕುಟುಂಬವೊಂದರ ಹಿನ್ನೆಲೆಯಲ್ಲಿ ಕತೆ ಸಾಗುತ್ತದೆ. ಆ ಕುಟುಂಬದ ಹುಡುಗಿಯೊಬ್ಬಳ ಮೂಲಕ ಬರಗಾಲದ ಭೀಕರತೆಯನ್ನು ಹೇಳಲು ಹೊರಟಿದ್ದೇನೆ. ಬಹುತೇಕ ಶೂಟಿಂಗ್ ಆಗಿದೆ. ರೀರೆಕಾರ್ಡಿಂಗ್ ಕೆಲಸ ನಡೆಯುತ್ತಿದೆ.

** ಕಲಾತ್ಮಕ ಸಿನಿಮಾಗಳಿಗೆ ಮಾರುಕಟ್ಟೆ ಇಲ್ಲ ಅನ್ನುವ ಹೊತ್ತಲ್ಲಿ, ಬಂಡವಾಳ ಹೇಗೆ ಹೊಂದಿಸುತ್ತೀರಿ?*

ಇದು ಪ್ರತಿಯೊಬ್ಬ ಪ್ರಶ್ನೆಯೂ ಆಗಿದೆ. ಕಲಾತ್ಮಕ ಸಿನಿಮಾಗಳಿಗೆ ಇನ್ನಷ್ಟು ಪ್ರೋತ್ಸಾಹ ಬೇಕಿದೆ. ಅಲ್ಲದೇ ಕಲಾತ್ಮಕ ಸಿನಿಮಾಗಳು ಅಂದಾಕ್ಷಣ, ಏನೆಲ್ಲ ಪ್ರಯೋಗ ಮಾಡಬೇಕು ಅಂತೇನೂ ಅಲ್ಲ, ನಮ್ಮ ಪ್ರಯೋಗಗಳು ಪ್ರೇಕ್ಷಕರಿಗೆ ಅರ್ಥಆಗಬೇಕು. ಆಗ ಪ್ರೇಕ್ಷಕರ ಸಂಖ್ಯೆ ಹೆಚ್ಚಾಗುತ್ತದೆ. ತಾನಾಗಿಯೇ ಮಾರುಕಟ್ಟೆ ಬೆಳೆಯುತ್ತದೆ. ನನ್ನ ಎರಡನೇ ಸಿನಿಮಾದಲ್ಲಿ ಅಂತಹ ಪ್ರಯೋಗ ನಡೆದಿದೆ. ■

ಹಿಂಗ್ ಬಂದು ಹಂಗೋದ್ರೆ ಆಯ್ತಾ

ರೈತನ ಆತ್ಮಹತ್ಯೆಯಾಗಿತ್ತು, ಸಂತಾಪ ಸೂಚಿಸಲು ರಾಜಕೀಯ ನಾಯಕರ ದಂಡೇ ಬಂದಿತ್ತು. ಎಲ್ಲರ ಬಾಯಲ್ಲೂ ಒಂದೇ ಮಂತ್ರ- ಸಾವಿನ ಮನೆಯಲ್ಲಿ ರಾಜಕೀಯ ಮಾಡಬಾರದು.

ಖಡಿಯೂರಪ್ಪನವರು ಬಂದರು. ಸಂತ್ರಸ್ತರಿಗೆ ಸಾಂತ್ವನ ಹೇಳಿದರು. ಇಪ್ಪತ್ತೈದು ಸಾವಿರ ರೂಪಾಯಿ ಕೊಟ್ಟರು. ಹಣ ಕೊಟ್ಟಿದ್ದು ಸುದ್ದಿ ಆಯಿತು. ಡಿ.ಸಿ. ತಮ್ಮಣ್ಣ ಬಂದರು. ಐವತ್ತು ಸಾವಿರ ರೂಪಾಯಿ ಕೊಟ್ಟರು. ಹಣ ನೀಡುತ್ತಿರುವುದು ಟಿವಿಯಲ್ಲಿ ಬಂತು. ಕೆ.ಎಸ್. ಪುಟ್ಟಣ್ಣಯ್ಯ, ಸಿ.ಎಸ್.ಪುಟ್ಟರಾಜು ಅವರ ಕ್ಷೇತ್ರ ಅದು. ಅವರೂ ಕೊಡುಗೈ ದಾನಿಗಳಾಗಿದ್ದು ವರದಿ ಆಯ್ತು. ಎಚ್.ಡಿ. ದೇವೇಗೌಡರು ಬಂದರು. ಒಂದು ಲಕ್ಷ ರೂಪಾಯಿ ನೀಡಿದರು. ಅದು ಪ್ರಮುಖ ಸುದ್ದಿ ಆಯಿತು. ಜಿಲ್ಲಾ ಮಂತ್ರಿ ಅಂಬರೀಷರು ಶಾಸಕ ನರೇಂದ್ರ ಸ್ವಾಮಿ ಜೊತೆ ಬಂದರು. ರೈತ ನಾಯಕರ ಪ್ರಮುಖ ಹಕ್ಕೊತ್ತಾಯ ಇತ್ತಲ್ಲ 'ಸಂತ್ರಸ್ತ ಕುಟುಂಬಕ್ಕೆ ಹತ್ತು ಲಕ್ಷ ನೀಡಿ' ಎಂಬುದು. ಅದಕ್ಕನುಗುಣವಾಗಿ ಹತ್ತು ಲಕ್ಷ ರೂಪಾಯಿಗಳನ್ನು ಸರ್ಕಾರದ ವತಿಯಿಂದ ಕೊಡುಸ್ತೀನಿ ಅಂತ ಆಶ್ವಾಸನೆ ನೀಡಿದರು. ಹತ್ತು ಲಕ್ಷ ರೂಪಾಯಿ ಸುದ್ದಿ ಮಾಧ್ಯಮಗಳಲ್ಲಿ ಹರಿದಾಡಿತು.

ರೈತರ ಆತ್ಮಹತ್ಯೆ ನಿಲ್ಲಲಿಲ್ಲ, ಪ್ರತಿನಿತ್ಯ ಅನ್ನದಾತ ರೈತ ನೇಣಿಗೆ ಶರಣಾಗುತ್ತಿರುವುದು ಕಂಡು ಕರಗಿತು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಮನಸ್ಸು. ಅವರೂ ರೈತರ ಮನೆಗೆ ಭೇಟಿ ಇತ್ತರು. ಸಾಂತ್ವನ ಹೇಳಿದರು. ಐವತ್ತು ಸಾವಿರ ರೂಪಾಯಿ ಕೊಟ್ಟರು. ಇದೂ ಸುದ್ದಿ ಆಯಿತು. ಮಾಜೀನೆ ಹೋಗವ್ರೆ ಅಂದಮೇಲೆ ಹಾಲಿ ಸುಮ್ಮನಿರಲಾದೀತೆ. ಸಿದ್ದರಾಮಯ್ಯನೂ ಹೋದ್ರು. ಯಥಾಪ್ರಕಾರ ಸಾಂತ್ವನ ಹೇಳಿ ಅನುಕಂಪದ ಹಣ ನೀಡಿದರು. ಎಲ್ಲವೂ ಸುದ್ದಿ ಆಯಿತು. ಸಂಘಟನೆಗಳ ಮುಖಂಡರಿಗ ಉಮೇದು ಬಂತು. ಅವರೂ ಧೈರ್ಯದ ಮಾತು ಹೇಳಿ ಅಷ್ಟೋ ಇಷ್ಟೋ ಸಹಾಯಧನ ನೀಡಿದ್ದು ಮಾಧ್ಯಮಗಳಲ್ಲಿ ಪ್ರಚಾರ ಆಯಿತು.

ಕಷ್ಟದಲ್ಲಿರುವವರಿಗೆ, ಆರ್ಥಿಕ ತೊಂದರೆಯಿಂದ ನೊಂದವರಿಗೆ ಧನಸಹಾಯ ಮಾಡುವುದು ಸರೀನೆ. ಸತ್ತವನ ಆತ್ಮ ಅಂತ ಒಂದು ಇದ್ದರೆ ಸತ್ತವನ ಆತ್ಮ ಈ ಪುಣ್ಯಾತ್ಮರಿಂದ ನಮ್ಮ ಮನೆಯವರಾದರೂ ನೆಮ್ಮದಿ ... ಹಾಗಾಗಿದೆಯಲ್ಲ, ಅಷ್ಟು ಸಾಕು' ... ಕೊಳ್ಳಬಹುದೇನೋ! ಬದುಕಿರುವ ಜನ ... ಸುವುದೂ ಇಂತಹ ಕ್ರಿಯೆಗಳನ್ನೆ. ಆತ್ಮಹತ್ಯೆ ಮಾಡಿಕೊಂಡ ಮನೆಯ ಕಡೆ ಯಾವ ರಾಜಕಾರಣಿಯೂ ... ಹಾಕಲ್ಲ ಅಷ್ಟೆ, ಟಿವಿ ಕ್ಯಾಮೆರಾ ಎದುರು ವರದಿಗಾರರ ... 'ಯಾವ ಬದ್ಧಿ ಹೃದಯನೂ ಈ ಕಡೀಕೆ ತಲೆ ... ಸ' ಅಂತ ಎಗರಾಡ್ತಾರೆ. ಯಾರೂ..... ಜನ ... ಹೇಳಿ ಹೋಗಿ ಸಾಂತ್ವನ ಹೇಳಿದರು. ಧೈರ್ಯದಿಂದ ... ಎದುರಿಸುವಂತೆ ಹುರಿದುಂಬಿಸಿ ಹೋದರು ಎನ್ನಿ, ಆಗ ಸಮಾಧಾನ ಆಗುವುದೇ ಅವರಿಗೆ? 'ಹೂಂ ಬಂದಿದ್ದ ಅವನೂವೆ. ಹಿಂಗೆ ಬಂದು ಹಂಗೆ ಹೋಗೋಕೆ' ಅನ್ನುವ ತಿರಸ್ಕಾರದ ನುಡಿ ಬರುತ್ತೆ. ಸಾಂತ್ವನ ಬೇಕು ನಿಜ. ಆದರ ಜೊತೆಗೆ ಅನುಕಂಪದ ಹಣ ಇದ್ದರೆ ಅದು ಸಾರ್ಥಕತೆ ಪಡೆಯೋದು!

ಕೆಲವು ರೈತರು ದುರ್ಬಲ ಮನಸ್ಸಿನವರಿರಬಹುದು. ರಾಜಕಾರಣಿಗಳಿಂದ ಹರಿದುಬಂದ ಹಣ ಕಂಡು ಮನಸ್ಸು ಚಂಚಲಗೊಳ್ಳಬಹುದು. ನಾನು ಸತ್ತರೆ ನನ್ನ ಮನೆಯವರಿಗೂ ಹಿಂಗೇ ಹಣ ಬರಬಹುದು. ಮನೆಯವರ ಕಷ್ಟ ನೀಗಬಹುದು. ನಾನು ಬದುಕಿರುವುದಕ್ಕಿಂತ ಸಾಯುವುದೇ ಉತ್ತಮ ಎಂದು ಆತ್ಮಹತ್ಯೆಗೆ ಪ್ರಚೋದನೆ ನೀಡಬಹುದು. ರಾಜಕಾರಣಿಗಳು, ಸರ್ಕಾರ ಸಂತ್ರಸ್ತರಿಗೆ ಹಣ ಸಹಾಯ ಮಾಡುತ್ತೆ. ಮಾಡಲಿ. ಹಿಂದೆ ಎಡಗೈಲಿ ಕೊಟ್ಟ ದಾನ ಬಲಗೈಗೂ ಗೊತ್ತಾಗಬಾರದು ಎನ್ನುತ್ತಿದ್ದರು. ದಾನ ಮಾಡುವುದು ಪ್ರಚಾರಕ್ಕಲ್ಲ, ಇವರು ಕೊಡುವ ಹಣ ಬಲಗೈಗೆ ಮಾತ್ರ ಅಲ್ಲ ಇಡೀ ವಿಶ್ವಕ್ಕೇ ತಿಳಿಯುತ್ತೆ. ಈ ಹಣ ಸಹಾಯವನ್ನು ಪ್ರಚಾರ ಮಾಡದಂತೆ ಮಾಡಬಾರದೆ?

ಇದು ಮೂರ್ಖ ಆಸೆ ಅನ್ನಿಸುತ್ತೆ, ಅವರು ಬಂದದ್ದು, ಸಾಂತ್ವನ ಹೇಳಿದ್ದು, ಹಣ ನೀಡಿದ್ದು ಪ್ರಚಾರಕ್ಕಾಗಿಯೇ ಪರಂತು ರೈತರ ಮೇಲಿನ ಕಾಳಜಿಯಿಂದ ಅಲ್ಲ, ಇಡೀ ಈ ಪ್ರಹಸನದಲ್ಲಿ ಪೂರೈಸಿದ್ದು ರಾಜಕಾರಣಿಗಳ ಬಯಕೆ, ರೈತರ ಬವಣೆ ಅಲ್ಲ!

ಸರಳ ವಿಜೃಂಭಣೆ ಸಮಾರಂಭ!

ನಿಮಗೆ ಟಿವಿ ನೋಡುವ ಅಭ್ಯಾಸ ಇದ್ದರೆ ಗಮನಿಸಿರುತ್ತೀರಿ.

ಕುಮಾರಸ್ವಾಮಿ ಮಗನ ನಿಶ್ಚಿತಾರ್ಥ ಹೇಗೆ ನಡೆಯಿತು?

ವಿಜೃಂಭಣೆಯಿಂದ ಸರಳವಾಗಿ!

ನಾಗತಿಹಳ್ಳಿ ಚಂದ್ರಶೇಖರ ಮಗಳ ಮದುವೆ ಹೇಗೆ ನಡೆಯಿತು?

ಸರಳ ವಿಜೃಂಭಣೆಯಿಂದ!

ಈ ಪದಪುಂಜದ ಅರ್ಥ ಏನು?

ಗೊತ್ತಿಲ್ಲ, ಇದು ಟಿವಿ ಕನ್ನಡ. ಅವರೇ ಇದರ ವಿವರಣೆ ನೀಡಬೇಕು.

ಹೇಳುವುದು ಸರಳ ಮದುವೆ. ಮಾಡುವುದು ವೈಭವೋಪೇತ ಮದುವೆ. ಇಂತಹ ಜಾಯಮಾನದ ಮದುವೆಗಳು 'ಸರಳ ವಿಜೃಂಭಣೆ'ಗೆ ಅರ್ಥವೇನೋ!

ಇದು ಸರಿಯಾಗಿದ್ದಲ್ಲಿ ಮಂಡ್ಯ ಜಿಲ್ಲೆ ಇದಕ್ಕೆ ಹೇಳಿಮಾಡಿಸಿದ ಜಿಲ್ಲೆ, 'ಒಂದೆಕ್ರೆ ಗದ್ದೆ ಸುಟ್ಟಾಕಿದ್ರೂ ಸೈ ಕನಯ್ಯ ಮಗಳ ಮದುವೇಯ ಭರ್ಜರಿಯಾಗಿ ಮಾಡ್ದ' ಎನ್ನುವ ಹುಂಬರಿದ್ದಾರೆ ಇಲ್ಲಿ. ಯಾವ್ಯೋನೋ ಇಂಜಿನಿಯರು ಹೊಡೆದು ಇಟ್ಟಿದ್ದ. ಮಗಳ ಮದುವೇಲಿ ಮುವ್ವತ್ತೈದು ರೀತಿಯ ಭಕ್ಷ್ಯಗಳನ್ನು ಮಾಡಿಸಿದ್ದ. ಎಂತೆಂತಹ ತಿಂಡಿ ಅವೆ ಅನ್ನೋದ್ಕೆ 'ಮೆನು ಕಾರ್ಡ್' ಮಾಡಿಸಿದ್ದ. ಹಡಬಿ ದುಡ್ಡು ಮಾಡಿಸವ್ನೆ ಅನ್ನುವುದಿಲ್ಲ, ಅವನು ಮಾಡ್ಯವ್ನಲ್ಲ ನಾನೂ ಅದಕ್ಕಿಂತ ಜೋರಾಗಿ ಮಾಡುಸ್ತೀನಿ ಅನ್ನುವವರಿಗೂ ಬರ ಇಲ್ಲ ಇಲ್ಲಿ. ಮದುವೆ ಹಿಂಗಾದ್ರೆ ಬೀಗರೂಟದ್ದೇ ಒಂದು ಸೊಗಸು, ಎಷ್ಟು ಮರಿ ಹೊಡ್ಸವ್ನೆ ಅನ್ನುವುದರ ಮೇಲೆ ಅವನ ಅಂತಸ್ತು. 'ಮದುವೆ ಇರ್‍ಲಿ ಕನಯ್ಯ, ಬೀಗರೂಟಕ್ಕೂ ಬರ್ಲಿಲ್ಲವಲ್ಲ' ಅಂತ ಮುನಿಸಿಕೊಂಡವರಿಗೇನೂ ಕೊರತೆ ಇಲ್ಲ. ಇಂತಹ ಮದುವೆ ಬೀಗರೂಟಗಳು ರೈತರ ಆತ್ಮಹತ್ಯೆಗೆ ಕಾರಣ ಎಂದು ಷರಾ ಬರೆಯುವವರು ಇದ್ದಾರೆ. ಅವುಗಳ ಸಂಬಂಧವನ್ನು ಅಲ್ಲಗಳೆಯಬಹುದಾದರೂ ಇಲ್ಲವೇ ಇಲ್ಲ ಎನ್ನುವುದೂ ಕಷ್ಟವೆ.

ಕಲ್ಯಾಣ ಮಂಟಪ ಗಮನಿಸಿ.

ಇಂತಹವರು ಇಂತಹವರನ್ನು ಮದುವೆಯಾಗುತ್ತಾರೆ ಎಂಬ ಅರ್ಥದ ಮಾತುಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದಿರುತ್ತಾರೆ. ಮೊದಲು ಇರುವುದು ಯಾರ ಹೆಸರು? ಗಂಡಿನದ್ದೊ? ಹೆಣ್ಣಿನದ್ದೊ? ಸಂಶಯವೇ ಇಲ್ಲ, ಹೆಣ್ಣಿನದ್ದು! ಯಾಕೆ ಹೀಗೆ ಅಂದರೆ ಮದುವೆಯ ಸಂಪೂರ್ಣ ಖರ್ಚು ಹೆಣ್ಣಿನ ಕಡೆಯವರದ್ದು!

ಸರಳ ವಿವಾಹ ಅಂತ ಅನ್ತಾರೆ. ಸರಳ ವಿಜೃಂಭಣೆ ಮದುವೆ ಅಲ್ಲದಿರಬಹುದು. ಸರಳವೇ ಇರಬಹುದು. ಎಷ್ಟೇ ಸರಳ ಎಂದರೂ ಸ್ವಲ್ಪವಾದರೂ ಹಣ ಖರ್ಚಾಗುತ್ತೆ. ಇದನ್ನು ಭರಿಸುವವರು ಯಾರು? ಅದೇ ಹೆಣ್ಣಿನ ಕಡೆಯವರು!

ನಾನು ಹಲವು ವಿದ್ಯಾವಂತರನ್ನು ಬಲ್ಲೆ. ಮದುವೆ ಗಂಡು ಹೆಣ್ಣು ಇಬ್ಬರೂ ಉದ್ಯೋಗದಲ್ಲಿರುತ್ತಾರೆ. ಇಬ್ಬರೂ ಒಂದೇ ರೀತಿಯ ಉದ್ಯೋಗದಲ್ಲಿರುತ್ತಾರೆ. ಕೆಲವು ಸಲ ವಧು ವರನಿಗಿಂತ ಉತ್ತಮ ಉದ್ಯೋಗದಲ್ಲಿರುತ್ತಾಳೆ. ಆದರೂ ಮದುವೆ ಖರ್ಚನ್ನು ಭರಿಸುವವರು ಹೆಣ್ಣಿನ ಕಡೆಯವರು!

ಮದುವೆ ಎನ್ನುವುದು ಗಂಡುಹೆಣ್ಣಿನ ದೇಹ-ಭಾವ ಸಂಬಂಧ. ಇಂತಹ ಪವಿತ್ರ ಸಂಬಂಧ ಬೆಳೆಸಲು ಇಬ್ಬರೂ ಸಮಭಾಗಿಗಳಾಗಬೇಕು. ಇಂತಹ ಮನಸ್ಥಿತಿ ಬರುವವರೆವಿಗೂ ದುರಂತಗಳು ಸಂಭವಿಸುತ್ತಲೇ ಇರುತ್ತವೆ.

ಆತ್ಮಹತ್ಯೆ ತಡೆಗೆ ಸುಲಭ ಸೂತ್ರ

ರೈತರ ಆತ್ಮಹತ್ಯೆಯಿಂದ ನೊಂದಿದ್ದೀರಾ? ಅದನ್ನು ತಡೆಯಲು ಪ್ರಯತ್ನಿಸಿದ್ದೀರಾ! ಪ್ರಯತ್ನ ಫಲಿಸಿತೆ? ಇಲ್ಲವೆ. ಹಾಗಾದರೆ ಇಲ್ಲಿದೆ ಸೂತ್ರ.

ಏನು ಅದು ಎನ್ನುವಿರಾ?

ಮೃತ್ಯುಂಜಯ ಹೋಮ ಮಾಡಿ!

ಲಕ್ಷ್ಮೀನಾರಾಯಣ ಅಷ್ಟಾಕ್ಷರಿ ಮಂತ್ರ ಜಪಿಸಿ!

ಇದು ನಾನು ಹೇಳಿದ್ದು ಅಲ್ಲ, ಮೈಸೂರಿನ ಅಭಿನವ ಬ್ರಾಹ್ಮಣ ಸಮಾಜದ ಭರವಸೆ ಇದು!

ಬ್ರಹ್ಮ, ವಿಷ್ಣು ಮಹೇಶ್ವರರಲ್ಲಿ ಡಿವಿಷನ್ ಆಫ್ ಲೇಬರ್ ಆಗಿದೆ. ಮಹೇಶ್ವರ ಸಾವಿಗೆ ಒಡೆಯ. ಶಿವ ಸಾವನ್ನು ತಡೆಯಬಲ್ಲ. ಮರಣದ ವಿರುದ್ಧ ಹೋರಾಡುವವರಿಗೆ ಶಕ್ತಿ ನೀಡಬಲ್ಲ, ಮರಣದ ವಿರುದ್ಧ ಹೋರಾಡುವವರಿಗೆ ಶಕ್ತಿ ನೀಡಬಲ್ಲ, ರೈತ ಆತ್ಮಹತ್ಯೆ ತಡೆಯಬಲ್ಲ!

ಯಾರಾದರೂ ಇದನ್ನು ಪ್ರಯೋಗಿಸಿದರಾ?

ಮೈಸೂರಿನಲ್ಲಿ ಮಾಡಿದರು. ಅಮೃತೇಶ್ವರ ದೇವಸ್ಥಾನದಲ್ಲಿ ಎಲ್ಲವೂ ಸಾಂಗವಾಗಿ ನೆರವೇರಿತು. ಟಿವಿಗಳಲ್ಲೂ ಬಂತು.

ಫಲಿಸಿತೆ ಅವರ ಯಾಗ ಫಲ?


ಸ್ವಲ್ಪ ನಿಧಾನಿಸಿ. ಯಾಗ ಮಾಡಿದ ತಕ್ಷಣ ಫಲ ಸಿಗಲಿ ಎಂಬ ಆತುರ ಸಲ್ಲ, ನಿಧಾನವಾಗಿ ಫಲಿಸುತ್ತೆ!

ಇಂತಹ ಕ್ರಿಯೆಗಳಿಂದ ಏನು ಭಾಗ್ಯ ಬಂತು?

ಯಾಗ ಮಾಡಿದವರಿಗೆ ಹೆಸರು, ದೇವರಿಗೆ ಪೂಜಾರ!

ಇನ್ನೇನು ಬೇಕು?

■ಎಚ್ಚೆಲ್ಕೆ



Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 12-08-2015 RNI No. KARKAN2…

ಬಣ್ಣ ಹಚ್ಚಿದ ಬಿದರಿ



ಮೊದಲು ಕಾಂಗ್ರೆಸ್ ಪಕ್ಷ ಸೇರಿದ ನಿವೃತ್ತ ಪೊಲೀಸ್ ಅಧಿಕಾರಿ ಶಂಕರ್ ಬಿದರಿ ಆ ಪಕ್ಷದಲ್ಲಿ ತಮಗೆ ಏನೂ ಸಿಗಲಿಲ್ಲ ಎಂದು ನಿರಾಶೆಗೊಂಡು ಬಿಜೆಪಿ ಪಕ್ಷಕ್ಕೆ ಹೋದರು. ಆದರೆ ಅಲ್ಲೂ ಅವರನ್ನು ನಿರುದ್ಯೋಗವೇ ಕಾಡಲಾರಂಭಿಸಿತು. ಅದಕ್ಕೆ ಏನೋ ಈಗ ಅವರು ಸಿನಿಮಾರಂಗಕ್ಕೆ ಕಾಲಿಟ್ಟಿದ್ದಾರೆ. 'ಮತ್ತೆ ಬಂದ ವೀರಪ್ಪನ್' ಸಿನಿಮಾದಲ್ಲಿ ಅವರು ಎಸ್‌ಟಿಎಫ್ ಅಧಿಕಾರಿಯ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಸೋಮವಾರವಷ್ಟೇ ಈ ಚಿತ್ರಕ್ಕೆ ಮುಹೂರ್ತವಾಗಿದ್ದು ಅಂದೇ ನಡೆದ ಚಿತ್ರೀಕರಣದಲ್ಲಿ ಬಿದರಿ ಪಾಲ್ಗೊಂಡಿದ್ದಾರೆ.

ಈ ಸಿನಿಮಾದಲ್ಲಿ ಅವರು ನಟಿಸುವುದಕ್ಕೆ ಕಾರಣ, ಚಿತ್ರದ ನಿರ್ಮಾ… ನಿರ್ಮಾಪಕರಿಗೂ ಬಿದರಿಗೂ ಒಳ್ಳೆ ಸ್ನೇಹಸಂಬಂಧವಿದೆ. ಹೀಗಾಗಿಯೇ ಅವ… ಹಚ್ಚಿದ್ದಾರೆ. ಅಂದಹಾಗೆ ಈ ಚಿತ್ರಕ್ಕೂ, ರಾಮ್‌ಗೋಪಾಲ್ ವರ್ಮಾ ನಿದ… 'ಕಿಲ್ಲಿಂಗ್ ವೀರಪ್ಪನ್' ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲದಂತೆ. 'ಕಿಲ್ಲಿಂಗ್ ವಿ… ಸಿನಿಮಾ ನೇರವಾಗಿ ವೀರಪ್ಪನ್ ವಿಷಯದ ಸುತ್ತ ನಿರ್ಮಾಣ ಆಗುತ್ತಿದ್ದರೆ 'ಮ… ವೀರಪ್ಪನ್' ಒಂದು ರೀತಿಯ ಹಾಸ್ಯ ಸಿನಿಮಾವಂತೆ. ವೀರಪ್ಪನ್ ಮತ್ತೆ ಹುಟ್ಟಿ… ಏನೆಲ್ಲ ಆಗಬಹುದು ಎಂಬುದನ್ನು ಈ ಸಿನಿಮಾದಲ್ಲಿ ತೋರಿಸಲಾಗುತ್ತಿದೆ.

ಪುರುಷೋತ್ತಮ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚಿತ್ರದಲ್ಲಿ ಸ… ಮುಖ್ಯಮಂತ್ರಿ ಚಂದ್ರು, ಟೆನ್ನಿಸ್ ಕೃಷ್ಣ ಮೊದಲಾದವರು ಇದ್ದಾರೆ. ವೀರಪ್ಪನ್ ಪಾ… ಹೆಚ್.ವಿ.ಅಣ್ಣಪ್ಪ ನಿರ್ವಹಿಸುತ್ತಿದ್ದಾರೆ. ಅಣ್ಣಪ್ಪ ಪಟಸೆಯ ಜತೆಗೆ ಬಂಡವಾಳವ… ಚಿತ್ರಕ್ಕಾಗಿ ಹೂಡಿದ್ದಾರೆ.

ಸತೀಶ್ ಮದ್ವೆ ಮತ್ತು ಮಗು

ನೀನಾಸಂ ಸತೀಶ್ ಯಾಕೆ ಹೀಗೆ ಮಾಡಿದರೋ ಗೊತ್ತಿಲ್ಲ, ಒಂದು ವರ್ಷದ ಹಿಂದೆಯೇ ತಮಗೆ ಮದುವೆ ಆಗಿದ್ದನ್ನು ಅವರು ಅಭಿಮಾನಿಗಳಿಂದ ಮುಚ್ಚಿಟ್ಟಿದ್ದರು. ಈಗ ಮದುವೆ ಸುದ್ದಿಯ ಜತೆಗೆ ಮಗು ಆಗಿರುವುದನ್ನೂ ಬಹಿರಂಗಪಡಿಸಿದ್ದಾರೆ. ರವಿವಾರವಷ್ಟೇ ಸತೀಶ್ ತಂದೆಯಾಗಿದ್ದಾರೆ.

ಚಿತ್ರೀಕರಣಗೊಳ್ಳುತ್ತಿರುವ 'ರಾಕೆಟ್' ಸಿನಿಮಾ ಶುರು ಆಗುವುದಕ್ಕಿಂತ ಮುಂಚೆಯೇ ಸುಪ್ರಿಯಾರನ್ನು ಪ್ರೀತಿಸುತ್ತಿದ್ದ ಸತೀಶ್ ತಮ್ಮ ಕುಟುಂಬದ ಒಪ್ಪಿಗೆ ಪಡೆದೆ ಮದುವೆ ಆಗಿದ್ದರು. ಆ ಮದುವೆಗೆ ಅವರ ಕೆಲವು ಗೆಳೆಯರೂ ಸಾಕ್ಷಿ ಆಗಿದ್ದರು, ದಂಪತಿಗಳು ಚೆನ್ನಾಗಿದ್ದರೂ, ಮದುವೆ ಆಗಿರುವ ವಿಚಾರವನ್ನು ಮಾತ್ರ ಅವರು ಯಾರ ಮುಂದೆಯೂ ಹೇಳಿಕೊಂಡಿರಲಿಲ್ಲ, ಮದುವೆ ವಿಚಾರ ಬಂದಾಗಲೂ ಅವರು ನಯವಾಗಿಯೇ ಜಾರಿಕೊಳ್ಳುತ್ತಿದ್ದರು. 'ರಾಕೆಟ್' ಬಿಡು… ಸಮಯದಲ್ಲಿ ಈ ಸುದ್ದಿಯನ್ನು ಹೇಳುವುದಾಗಿ ,ಅವರ ಆಪ್ತರ ಮುಂದೆ ಹೇಳಿಕೊಂಡಿದ್ದರು. ಆದರೀಗ ಸಿನಿಮಾ ಬಿಡುಗಡೆಯಾಗುವ ಮುನ್ನವೇ ಸುದ್ದಿ ಎಲ್ಲೆಡೆ ಹರಡಿದೆ.



ಅಂದರೆ, ಸತೀಶ್ ಮತ್ತು ಸುಪ್ರಿಯಾರ ಗುಟ್ಟನ್ನು ಅವರ ಮಗು ರಟ್ಟು ಮಾಡಿದೆ. "ಮಗು ಮತ್ತು ತಾಯಿ ಆರೋಗ್ಯವಾಗಿದ್ದಾರೆ. 'ರಾಕೆಟ್' ರಿಲೀಸ್ ಹೊತ್ತಲ್ಲಿ ಎಲ್ಲ ಸುದ್ದಿಯನ್ನೂ ಒಟ್ಟಿಗೆ ಕೊಡೋಣ ಅಂತ ತೀರ್ಮಾನ ಮಾಡಿದ್ದೆ, ತಾನಾಗಿಯೇ ಸುದ್ದಿ ಹರಡಿದೆ. ಸದ್ಯಕ್ಕೆ 'ರಾಕೆಟ್' ಚಿತ್ರದ ಶೂಟಿಂಗ್‌ನಲ್ಲಿದ್ದೇನೆ. ನಿಮ್ಮ ಹಾರೈಕೆ ಎಂದಿನಂತೆ ನನ್ನ ಕುಟುಂಬದ ಮೇಲೆಯೂ ಇರಲಿ" ಅಂದಿದ್ದಾರೆ ಸತೀಶ್.

ವಿಜಿಗೆ ಮುತ್ತಿನ ಸಂಕಟ

ದುನಿಯಾ ವಿಜಿ ನಟಿಸಿರುವ 'ಆರ್‌ಎಕ್ಸ್ ಸೂರಿ' ಮತ್ತೊಂದು ವಿಷಯಕ್ಕೆ ಸದ್ದು ಮಾಡುತ್ತಿದೆ. ಇದೀಗ ಚಿತ್ರದ ಕಿಸ್ಸಿಂಗ್ ಸೀನ್‌ನಿಂದಾಗಿ ವಿಜಯ್ ಪೀಕಲಾಟಕ್ಕೆ ಬಿದ್ದಿದ್ದಾರೆ.



ಇತ್ತೀಚೆಗಷ್ಟೇ ಚಿತ್ರತಂಡ ಟ್ರೇಲರ್ ಹರಿಬಿಟ್ಟಿದೆ. ಆ ಟ್ರೇಲರ್‌ನಲ್ಲಿ ವಿಜಯ್ ಮತ್ತು ನಾಯಕಿ ಆಕಾಂಕ್ಷಾ ಮುತ್ತಿನ ಮತ್ತಿನಲ್ಲಿ ತೇಲಾಡುತ್ತಿರುವ ದೃಶ್ಯವಿದೆ. ಅದನ್ನೇ ಫೋಟೋವಾಗಿಸಿರುವ ಕಿಡಿಗೇಡಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಇದು ರೀಲಿನಲ್ಲೋ, ರಿಯಲ್‌ನಲ್ಲೋ ಎಂಬ ಪ್ರಶ್ನೆಗಳನ್ನೂ ಹಲವರು ಕೇಳಿದ್ದಾರೆ. ಹೀಗಾಗಿ ವಿಜಯ್ ಮತ್ತೊಮ್ಮೆ ಮುತ್ತಿನ ಸಂಕಟದಲ್ಲಿದ್ದಾರೆ.

ಮುಂದಿನ ವಾರ ಸೆನ್ಸಾರ್ ಅಂಗಳಕ್ಕೆ ಕಾಲಿಡಲಿರುವ ಚಿತ್ರದಲ್ಲಿ ಹಲವು ಕಿಸ್ಸಿಂಗ್ ದೃಶ್ಯಗಳು ಇವೆಯಂತೆ. ಹೀಗಾಗಿ ಸೆನ್ಸಾರ್ ಮಂಡಳಿಯು ಯಾವ ಪ್ರಮಾಣಪತ್ರ ನೀಡುತ್ತದೆ ಎಂಬ ಕುತೂಹಲ ಎಲ್ಲರಲ್ಲಿದೆ. ಚಿತ್ರಕ್ಕೆ ಶ್ರೀಜೈ ಆಕ್ಷನ್ ಕಟ್ ಹೇಳಿದ್ದಾರೆ. ಇದು ಇವರ ಮೊದಲ ಚಿತ್ರ. ಕೆ.ಎ.ಸುರೇಶ್ ನಿರ್ಮಾಪಕ. 'ಆರ್‌ಎಕ್ಸ್ ಸೂರಿ' ಸಿನಿಮಾ ನೈಜ ಘಟನೆ ಆಧಾರಿತ ಚಿತ್ರ ಎಂದು ಹೇಳಲಾಗುತ್ತಿದೆ. ಆಂಧ್ರದ ರಾಯಲಸೀಮೆಯ ಡಾನ್‌ಗಳಾದ ಪೆರಿಟಾಲ ರವಿ ಹಾಗೂ ಸೂರಿ ಕತೆ ಎಂಬ ಸುದ್ದಿಯೂ ಹರಿದಾಡುತ್ತಿದೆ.

ಶಿರಾಡಿಯಲ್ಲಿ ಕಂಡ ರೂಪಶ್ರೀ



ಎಂಗೇಜ್‌ಮೆಂಟ್ ನಂತರ ರೂಪಶ್ರೀ ಸಿನಿಮಾರಂಗದಿಂದ ಮರೆಯಾಗಿದ್ದಾರಾ? ಇಂಥದ್ದೊಂದು ಗುಮಾನಿ ಗಾಂಧಿನಗರದಲ್ಲಿ ಕೇಳಿಬರುತ್ತಿದೆ. ಒಂದಿಲ್ಲೊಂದು ಕಾರಣದಿಂದಾಗಿಯೇ ಸದಾ ಸುದ್ದಿಯಲ್ಲಿ ಇರುತ್ತಿದ್ದ ರೂಪಶ್ರೀ ನಿಶ್ಚಿತಾರ್ಥದ ನಂತರ ಎಲ್ಲೂ ಕಾಣಿಸಿಕೊಂಡಿಲ್ಲ. ಹೀಗಾಗಿಯೇ ರೂಪಶ್ರೀ ಸಿನಿಮಾರಂಗವನ್ನು ತೊರೆದಿದ್ದಾರೆ ಎಂಬ ಮಾತೂ ಕೇಳಿಬರುತ್ತಿದೆ.

ಸದ್ಯ ರೂಪ… ಮೂರು ಸಿನಿಮಾಗಳಲ್ಲಿ ನಟಿಸಿದ್ದಾರೆ. ಲಕ್ಕಿ ಶ… ನಿರ್ದೇಶನದ 'ಸಿಗರೇಟ್'ನಲ್ಲಿ ಭಿನ್ನ ಪಾತ್ರ… ಮಾಡಿದ್ದರೆ, 'ಶಿರಾಡಿ ಘಾಟ್' ಎಂಬ ಮತ್ತೊಂದು ಚಿತ್ರದಲ್ಲೂ ನಾಯಕಿಯಾಗಿ… ಕಾಣಿಸಿಕೊಂಡಿದ್ದಾರೆ. ಈ ಎರಡು… ಸಿನಿಮಾಗಳೂ ಬಿಡುಗಡೆಯ… ತಯಾರಿಯಲ್ಲಿದ್ದರೂ ರೂಪ… ಮಾತ್ರ ಮಾಧ್ಯಮಗಳ… ಬಿದ್ದಿಲ್ಲ, ಸಿನಿಮಾದಲ್ಲಿ… ಮುಂದೆ ನಟಿಸುತ… ಇಲ್ಲವೋ ಎಂಬ… ಬಗ್ಗೆಯೂ ಆಕೆ… ಮಾತನಾಡಿಲ್ಲ. ಸಿನಿಮಾದಲ್ಲಿ… ಮಾತ್ರವಲ್ಲ, ಮಾಡೆಲ್… ಕ್ಷೇತ್ರದಲ್ಲೂ ಇವರು ಸಕ್ರಿಯರಾಗಿದ್ದರು. ಪಾರ್ಟಿಗ… ಕಾಣಿಸಿಕೊಳ್ಳುತ್ತಿದ್ದರು. ಈಗ ಯ… ರಂಗದಲ್ಲೂ ಇವರ ಭಾಗವಹಿಸುವಿ… ಇಲ್ಲ, ಹೀಗಾಗಿ ಸಿನಿಮಾರಂಗದಿಂದ… ಉಳಿಯುತ್ತಿದ್ದಾರೆ ಎಂಬ ಮಾತಿದೆ. ಇ… ಅವರೇ ಉತ್ತರಿಸಬೇಕು.



ಸನ್ನಿ ಕನ್ನ… ಪ್ರೇಮ

ಹಾಲಿವುಡ್ ತಾರೆ ಸನ್ನಿ ಲಿಯೋನ್ ಕನ… ಸಿನಿಮಾರಂಗದಲ್ಲಿ ಬಿಜಿ ಆಗುವ ಸೂಚನೆ ನೀ… ಹಲವು ತಿಂಗಳ ಹಿಂದೆ ಇವರು ಪ್ರೇಮ್ ನಟ… 'ಡಿಕೆ' ಚಿತ್ರದ ಹಾಡಿಗೆ ಹೆಜ್ಜೆ ಹಾಕಿದ್ದರು. ಈಗ… ಇಂದ್ರಜಿತ್ ಲಂಕೇಶ್ ನಿರ್ದೇಶನದ 'ಲವ್ ಯು… ಆಲಿಯಾ' ಸಿನಿಮಾದಲ್ಲಿ ಅತಿಥಿ ಪಾತ್ರ ನಿರ್ವಹಿಸುತ್ತಿದ್ದಾರೆ. ಜತೆಗೆ ಒಂದು ಹಾಡಿಗೂ ಹೆ… ಹಾಕಿದ್ದಾರೆ.

ಶೂಟಿಂಗ್‌ಗಾಗಿ ಒಂದು ವಾರ ಬೆಂಗಳೂರಿನ… ಬೀಡುಬಿಟ್ಟಿದ್ದ ಸನ್ನಿಗೆ ಇಲ್ಲಿನ ವಾತಾವರಣ ಹಿಡಿಸಿದೆಯಂತೆ, ಅಲ್ಲದೇ ಪ್ರೇಕ್ಷಕರ ಪ್ರತಿಕ್ರಿಯೆಗೆ ಫಿದ… ಆಗಿದ್ದಾರೆ. ಹೀಗಾಗಿಯೇ ಕನ್ನಡದಲ್ಲಿ ನಟಿಸುವ ಇಂಗಿತ… ವ್ಯಕ್ತಪಡಿಸಿದ್ದಾರೆ. ಕತೆ ಹಿಡಿಸಿದರೆ, ಪಾತ್ರ ಚೆನ್ನಾಗಿದ್ದಾರೆ ನಟಿಸುವುದಾಗಿ ಹೇಳಿದ್ದಾರೆ. ಇನ್ನು ನಮ್ಮ ನಿರ್ಮಾಪಕ… ಅವರ ಬಾಗಿಲ ಮುಂದೆ ಸಾಲುಗಟ್ಟಿ ನಿಲ್ಲುವುದು ಮ… ಬಾಕಿ ಇದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com